"VARTHA JANAPADA" Monthly - February 2019
"ವಾರ್ತಾ ಜನಪದ" ಮಾಸಿಕ - ಫೆಬ್ರವರಿ 2019
Page No. -52
RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No, PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




downloaded from: www.kpscvaani.com

ವಾರ್ತಾ

# ಜನಪದ

ವಾರ್ಷಿಕ ಚಂದಾ ರೂ.25/-

ಫೆಬ್ರವರಿ 2019





ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಅವರು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಪದೋನ್ನತಿ ಹೊಂದಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಅವರನ್ನು ಅಭಿನಂದಿಸಿದರು



ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಎಂಜಿನಿಯರುಗಳ ಸಂಘದವರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಯುವ ವಿಜ್ಞಾನಿ ಎಸ್.ಎಂ.ಪ್ರತಾಪ್ ಅವರನ್ನು ಮತ್ತು ಅವರ ಪೋಷಕರನ್ನು ಮುಖ್ಯಮಂತ್ರಿ ಅವರು ಸನ್ಮಾನಿಸಿದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಕೃಷಿ ಇಲಾಖೆ ಆಯೋಜಿಸಿದ್ದ ಸಾವಯವ-ಸಿರಿಧಾನ್ಯಗಳ ಅಂತಾರಾಷ್ಟ್ರೀಯ ಮೇಳದಲ್ಲಿ ಸಿರಿಧಾನ್ಯಕ್ಕೆ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕೃಷಿ ಸಚಿವರಾದ ಎನ್.ಎಚ್.ಶಿವಶಂಕರ ರೆಡ್ಡಿ ಅವರು ಉಪಸ್ಥಿತರಿದ್ದರು.



ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯಲ್ಲಿ ನಿರ್ಮಾಣವಾಗುತ್ತಿರುವ ಅಸ್ಥಿಮಜ್ಜೆ ಕಸಿ ಚಿಕಿತ್ಸಾ ಕಟ್ಟಡಕ್ಕೆ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಸಚಿವರಾದ ಇ.ತುಕಾರಾಂ, ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರಾದ ಡಾ.ಸಿ.ಎನ್.ಮಂಜುನಾಥ್, ಕಿದ್ವಾಯಿ ಸಂಸ್ಥೆಯ ನಿರ್ದೇಶಕರಾದ ಡಾ.ಸಿ. ರಾಮಚಂದ್ರ ಮೊದಲಾದವರು ಉಪಸ್ಥಿತರಿದ್ದರು.

downloaded from: www.kpscvaani.com

ವಾರ್ತಾ
# ಜನಪದ
ಸಂಪುಟ-02 • ಸಂಚಿಕೆ-5 • ಫೆಬ್ರವರಿ 2019







05 ಸರಳ ಬದುಕಿನಿಂದ ಹಿಮಾಲಯದೆತ್ತರಕ್ಕೆ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮಿಗಳು
• ಗುಡಿಹಳ್ಳಿ ನಾಗರಾಜ್

11 ಧಾರವಾಡದಲ್ಲಿ 84 ನೇ ಸಾಹಿತ್ಯ ಸಮ್ಮೇಳನ
• ಮಂಜುನಾಥ ಡೊಳ್ಳಿನ

19 ನುಡಿ ಹಬ್ಬದಲಿ ಅನುರಣಿಸಿದ ಕನ್ನಡ ಪ್ರೇಮ
• ಗವಿಸಿದ್ದಪ್ಪ ಹೊಸಮನಿ

21 ಅರಸು ಪ್ರಶಸ್ತಿ ವಿಜೇತರಾದ ಶಿವಾಜಿ ಛತ್ರೆಪ್ಪ ಕಾಗಣೀಕರ
• ಡಾ.ಯಲ್ಲಪ್ಪ ಹಿಮ್ಮಡಿ

24 ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ ಅಪರೂಪದ ಛಾಯಾಚಿತ್ರಗಳ ಸಂಗ್ರಹ

28 ಸಮಾಜ ಸುಧಾರಕ ಕರ್ನಾಟಕದ ಗಾಂಧಿ –ಹರ್ಡೇಕರ್ ಮಂಜಪ್ಪ
• ಪ್ರೊ. ಬಿ.ಬಿ.ಕರದಾನಿ

30 ಧರ್ಮಸ್ಥಳದ ಬಾಹುಬಲಿಗೆ ಮಹಾಮಸ್ತಕಾಭಿಷೇಕ ಸಂಭ್ರಮ
• ಎಂ.ಆರ್. ಸುಂದರ್ ಕುಮಾರ್ ಮಾರೂರು

34 ಮಹಾತ್ಮಾ ಗಾಂಧಿ 150ರ ಸ್ಮರಣೆಯಲ್ಲಿ ಮಿಂದೆದ್ದ ಚಿತ್ರಸಂತೆ
• ನವಿಕ

37 ಚಿನ್ನದ ಗಣಿಯಲ್ಲಿ ಮಹಾತ್ಮಾ ಗಾಂಧೀಜಿ
• ವೇಮಗಲ್ ಸೋಮಶೇಖರ್

38 ಮನ ಪರಿವರ್ತನಾ ಕೇಂದ್ರವಾದ ಚಿತ್ರದುರ್ಗ ಜಿಲ್ಲಾ ಕಾರಾಗೃಹ
• ತುಕಾರಾಂರಾವ್ ಬಿ. ವಿ.

41 ಹೊಸ ತಂತ್ರಜ್ಞಾನದ ಮೂಲಕ ಲಾಭದಾಯಕ ಕೃಷಿ
• ಎನ್ ಜಗನ್ನಾಥ ಪ್ರಕಾಶ್

43 ರೈಲು ನಿಲ್ದಾಣ ಮಾದರಿಯಲ್ಲಿ ಆಕರ್ಷಿಸುತ್ತಿರುವ ಸರ್ಕಾರಿ ಶಾಲೆ
• ಅನಿತಾ ಕುಲಕರ್ಣಿ

46 ರಾಷ್ಟ್ರೀಯ ಮತದಾರರ ದಿನಾಚರಣೆ
• ಡಾ. ರಾಮಣ್ಣ ಸಿ

49 ರಾಮನ್ ಪರಿಣಾಮದ ಸಾಧನೆಯ ಸ್ಮರಣೆ
• ವಿರೇಶ್ ಮಾಕೆಟ್ಟ ನಿಡಗುಂದಿ

ಪ್ರಧಾನ ಸಂಪಾದಕರು
ಎಂ. ರವಿಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜೆ. ಹೊರ್ನೆಮ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

downloaded from: www.kpscvaani.com

# ಓದುಗರಿಂದ...




ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದ ಸರ್ಕಾರದ ಆರು ತಿಂಗಳ ಅಧಿಕಾರವಧಿಯ ಸಾಧನೆಗಳನ್ನು ಹೊತ್ತು ಬಂದ ಜನವರಿ ತಿಂಗಳ ವಾರ್ತಾ ಜನಪದ ಸಂಚಿಕೆ ಸರ್ಕಾರದ ದಿಟ್ಟ ಹೆಜ್ಜೆಗಳ ಬಗ್ಗೆ ಸ್ಪಷ್ಟ ಚಿತ್ರಣ ನೀಡುವಂತಿತ್ತಿದೆ. ಅತಿ ಮುಖ್ಯವಾಗಿ ರೈತರ ಸಾಲಮನ್ನಾ ಬಗ್ಗೆ ಸರ್ಕಾರ ಬದ್ಧವಾಗಿ ಕಾರ್ಯ ಪ್ರವೃತ್ತರಾಗಿರುವುದು 'ಕೊಟ್ಟ ಮಾತನ್ನು ಉಳಿಸಿಕೊಂಡ ದಿಟ್ಟ ಮುಖ್ಯಮಂತ್ರಿ' ಎಂಬ ಹೆಗ್ಗಳಿಕೆ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಲ್ಲಬೇಕು.

ಜನತಾದರ್ಶನ ಬೆಂಗಳೂರಿಗೆ ಮಾತ್ರ ಸೀಮಿತವಾಗದೆ ಮುಖ್ಯಮಂತ್ರಿಗಳು ತೆರಳಿದ ಇತರ ಜಿಲ್ಲೆಗಳಲ್ಲೂ ನಡೆಯುವಂತಾದರೆ ಸಾಮಾನ್ಯ ಜನರಿಗೆ, ರೈತರಿಗೆ, ಕೂಲಿಕಾರ್ಮಿಕರಿಗೆ ಅನುಕೂಲವಾಗಲಿದೆ. ಆದಷ್ಟು ಬೇಗ ಇದನ್ನು ಕಾರ್ಯಗತಗೊಳಿಸಿ. ಸಮ್ಮಿಶ್ರ ಸರ್ಕಾರ ಇನ್ನಷ್ಟು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಹಾರೈಸುತ್ತೇನೆ.

**–ಕೃಷ್ಣಮೂರ್ತಿ**, ರಾಮನಗರ

ಜನವರಿ ಸಂಚಿಕೆಯಲ್ಲಿ ಮೂಡಿ ಬಂದಿರುವ ಸರ್ಕಾರದ ವಿವಿಧ ಇಲಾಖೆಗಳ ಕಾರ್ಯಕ್ರಮಗಳ ಪ್ರಗತಿ ಗಮನ ಸೆಳೆಯುತ್ತದೆ. ಆರು ತಿಂಗಳ ಅವಧಿಯಲ್ಲಿ ಸರ್ಕಾರ ರೂಪಿಸಿರುವ ಯೋಜನೆಗಳು ಉತ್ತಮವೆನಿಸಿದರೂ ಅವುಗಳನ್ನು ಕಾರ್ಯ ರೂಪಕ್ಕೆ ತರುವಲ್ಲಿ ಇಲಾಖೆ ಅಧಿಕಾರಿಗಳು ಮತ್ತಷ್ಟು ಕಾರ್ಯ ಪ್ರವೃತ್ತರಾಗ ಬೇಕಾಗಿದೆ.

ಸಮ್ಮಿಶ್ರ ಸರ್ಕಾರ ಗೊಂದಲದಲ್ಲೇ ಮುಳುಗಿದೆ ಎಂಬ ಭಾವನೆಯನ್ನು ಈ ಸಂಚಿಕೆ ಹೋಗಲಾಡಿಸುತ್ತದೆ. ಸರ್ಕಾರದ ಈ ಎಲ್ಲಾ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಲ್ಲಿ ನಾಡಿನ ಜನತೆ ಖಂಡಿತಾ ಋಣಿಗಳಾಗಿರುತ್ತಾರೆ. ದುಡಿಯುವ ಕೈಗೆ ಉದ್ಯೋಗ, ವ್ಯಾಪಾರಿಗಳಿಗೆ ಶೂನ್ಯ ಬಡ್ಡಿ ಸಾಲ, ಆಸ್ತಿ ನೋಂದಣಿಗೆ ಕಾವೇರಿ ಆನ್ ಲೈನ್ ಸೇವೆ, ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಯಕ್ರಮಗಳು ಅತ್ಯಂತ ಜನಪರ ಕಾರ್ಯಕ್ರಮಗಳಾಗಿವೆ. ಈ ಬಗ್ಗೆ ಮಾಹಿತಿ ಕೊಟ್ಟ ಸಂಪಾದಕ ವರ್ಗಕ್ಕೆ ಧನ್ಯವಾದಗಳು.

**–ಶ್ರೀನಿವಾಸಯ್ಯ**, ಚಿಕ್ಕಬಳ್ಳಾಪುರ

'ತಿಂಗಳು ಆರು ಸಾಧನೆಗಳು ನೂರಾರು' ಎಂಬ ಶೀರ್ಷಿಕೆಯೊಂದಿಗೆ ಜನವರಿಯ ವಾರ್ತಾ ಜನಪದ ಸರ್ಕಾರದ ಆರು ತಿಂಗಳ ಸಾಧನೆಗೆ ಹಿಡಿದ ಕನ್ನಡಿಯಂತೆ ಮೂಡಿಬಂದಿದೆ ಎಂದರೆ ತಪ್ಪಾಗಲಾರದು. ಮೈತ್ರಿ ಸರ್ಕಾರದಿಂದ ಉತ್ತಮ ಕೆಲಸಗಳು ಆಗದು ಎಂದು ಮೂಗು ಮುರಿಯುವ ಜನರಿಗೆ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದ ಸರ್ಕಾರ ಆರು ತಿಂಗಳ ಅವಧಿಯಲ್ಲೇ ಎಂತಹ ಉತ್ತಮ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಂದೆ ಸಾಗಿದೆ ಎಂಬುದು ತಿಳಿದು ಬರುತ್ತದೆ.

ನಮ್ಮ ಮುಖ್ಯಮಂತ್ರಿಗಳು ರೈತರು ಮತ್ತು ಬಡ ಜನರ ಬಗ್ಗೆ ಬಹಳ ಕಾಳಜಿ ಇಟ್ಟುಕೊಂಡಿರುವವರು. ಹಾಗಾಗಿ ರೈತರು ಮತ್ತು ಬಡ ಜನರು ಸಾಲದ ಶೂಲದಲ್ಲಿ ಸಿಲುಕಬಾರದು, ಮತ್ತು ಅವರನ್ನು ಆರ್ಥಿಕವಾಗಿ ಸದೃಢರನ್ನಾಗಿಸಬೇಕೆಂಬ ದಿಸೆಯಲ್ಲಿ ಅವರು ಬೀದಿ ಬದಿಯ ವ್ಯಾಪಾರಿಗಳಿಗೆ ಶೂನ್ಯ ಬಡ್ಡಿಯಲ್ಲಿ ಸಾಲವನ್ನು ನೀಡುವಂತಹ ವಿನೂತನ ಯೋಜನೆಗೆ ಚಾಲನೆ ನೀಡಿದ್ದಾರೆ. ಅಲ್ಲದೆ ರೈತರ ಸುಸ್ಥಿರ ಬದುಕಿಗಾಗಿ ವಿನೂತನ ಕೃಷಿ ಪ್ರಯತ್ನಗಳನ್ನು ನಡೆಸಿದ್ದಾರೆ. ಹಾಗೆಯೇ ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸಬೇಕೆಂಬುದು ಅವರ ಬಹುಮುಖ್ಯ ಕನಸಾಗಿದೆ. ಅದಕ್ಕಾಗಿ ಅವರು ಬೆಂಗಳೂರು ಮಾತ್ರವಲ್ಲದೆ ವಿವಿಧ ಜಿಲ್ಲೆಗಳಲ್ಲಿ ಕ್ಲಸ್ಟರ್‌ಗಳನ್ನು ಸ್ಥಾಪಿಸಲು ಮುಂದಾಗಿರುವುದು ನಿರುದ್ಯೋಗಿಗಳ ಬಾಳಲ್ಲಿ ಬೆಳಕನ್ನು ಮೂಡಿಸಲಿದೆ.

**–ಬಸವನ ನಾಯಕ**, ಭಟ್ಕಳ

ಸಮ್ಮಿಶ್ರ ಸರ್ಕಾರದ ಆರು ತಿಂಗಳ ಸಾಧನೆ ಕುರಿತ ಸಂಚಿಕೆ ಹುಬ್ಬೇರಿಸುವಂತಿದೆ. ವಿವಿಧ ಇಲಾಖೆಗಳ ಯೋಜನೆಗಳು, ಕಾರ್ಯಕ್ರಮಗಳು ಉತ್ತಮವಾಗಿವೆ. ಕೃಷಿಕರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದರ ಜೊತೆಗೆ, ಸರ್ಕಾರ ರೈತ ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಕಲ್ಪಿಸಿಕೊಡುವುದರಲ್ಲೂ ಹೆಜ್ಜೆ ಇಟ್ಟಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದ ದೊಡ್ಡ ಸಾಧನೆಯಾಗುತ್ತದೆ. ಹೀಗೆ ಜನಪರ ಆಡಳಿತವನ್ನು ಮುಂದೆ ಕೂಡ ನೀಡಲಿ ಎಂದು ಹಾರೈಸುತ್ತೇನೆ.

**–ಗೋಪಾಲ್**, ದಾವಣಗೆರೆ

2019 ರ ಹೊಸವರ್ಷದ ಜನವರಿ ತಿಂಗಳ ಮಾಸ ಪತ್ರಿಕೆಯ ಮುಖಪುಟ ಸರ್ಕಾರದ ಸಾಧನೆಗಳ ಚಿತ್ರಣ ಚನ್ನಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಸಂದರ್ಶನ ಲೇಖನ ಓದುಗರಿಗೆ ಖುಷಿ ನೀಡಿದೆ. ರೈತರಿಗಾಗಿ ವಿನೂತನ ಕೃಷಿ ಪ್ರಯತ್ನಗಳ ಲೇಖನ ಹೊಸ ವರ್ಷಕ್ಕೆ ಕೈಗನ್ನಡಿಯಾಗಿದೆ. ನಾಡಿನ ನೆಲ ಜಲ ಸಂಪನ್ಮೂಲ ಸದ್ಬಳಕೆ ಅದರ ಸಂರಕ್ಷಣೆಗೆ ಒತ್ತು ನೀಡುವ ಲೇಖನ ಪರಿಸರ ಪ್ರಿಯರಿಗೆ ಮುದ ನೀಡಿದೆ. ಆರೋಗ್ಯ ಕರ್ನಾಟಕ ಲೇಖನ ಪ್ರತಿಯೊಬ್ಬರ ಆರೋಗ್ಯದ ವಿವರಣೆ ನೀಡಿದೆ. 2019 ರ ಸಂಕ್ಷಿಪ್ತ ಕ್ಯಾಲೆಂಡರ್ ಚಿಕ್ಕದಾಗಿದ್ದರೂ, ವರ್ಷವಿಡಿ ನೋಡುವ ಸುಯೋಗ ಒದಗಿಸಿದೆ. ಅಂದ ಚಂದದ ಪತ್ರಿಕೆಗೆ ಧನ್ಯವಾದಗಳು.

**–ಬಿ.ಎ.ರಾಜಪ್ಪ ನಿಬಗೂರು**, ಜಗಳೂರು

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/-

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ **"The Director, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.


downloaded from: www.kpscvaani.com




ಸರಳ ಬದುಕಿನಿಂದ ಹಿಮಾಲಯದೆತ್ತರಕ್ಕೆ

# ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮಿಗಳು

ಗುಡಿಹಳ್ಳಿ ನಾಗರಾಜ

**ಜ**ನ ಈ ಪರಿ ದುಃಖಿಸಿದ್ದನ್ನು ಕನ್ನಡನಾಡು ಕಂಡಿರಲಿಲ್ಲ. ಮಕ್ಕಳಿಂದ ಮುದುಕರವರೆಗೆ ಎಲ್ಲರ ಕಣ್ಣಲ್ಲಿ ನೀರು. ಹತ್ತಿರತ್ತಿರ ಒಂದು ಶತಮಾನ ಅನ್ನ, ಅಕ್ಷರ, ಆಶ್ರಯದ ತ್ರಿವಿಧ ದಾಸೋಹದ ಸೂತ್ರಧಾರ ಸಿದ್ಧಗಂಗಾ ಶ್ರೀ ಶಿವಕುಮಾರ ಸ್ವಾಮಿಗಳು ಲಿಂಗೈಕ್ಯರಾದ 2019 ರ ಜನವರಿ 21, 22 ರ ಸೋಮವಾರ, ಮಂಗಳವಾರ ನಾಡು ಅಕ್ಷರಶಃ ಶೋಕಸಾಗರದಲ್ಲಿ ಮುಳುಗಿತ್ತು.

ಹಾಗಾದರೆ ಶಕಪುರುಷ ಮಾಡಿದ್ದಾದರೂ ಏನು? ಭವ್ಯಮಹಲುಗಳನ್ನು ಕಟ್ಟಲಿಲ್ಲ. ಡೊನೇಷನ್ ಶಾಲೆ, ಕಾಲೇಜುಗಳನ್ನು ಸ್ಥಾಪಿಸಲಿಲ್ಲ. ಆದರೆ ಲಕ್ಷಾಂತರ ಬಡಮಕ್ಕಳಿಗೆ ವಿದ್ಯಾದಾನ ಮಾಡಿದರು. ಅನ್ನದಾನ ಮಾಡಿದರು. ಆಶ್ರಯ ನೀಡಿದರು. ಎಲ್ಲವೂ ಉಚಿತವಾಗಿ. ಸಿರಿವಂತರ ಮಕ್ಕಳು, ಬಡವರು ಎಂಬ ತಾರತಮ್ಯ ಇರಲಿಲ್ಲ. ಸಹಜವಾಗಿ ಬಡಮಕ್ಕಳೇ ಹೆಚ್ಚಿದ್ದರು. ಜಾತಿಮತ ಇರಲಿಲ್ಲ. ರೈತರಿಂದ ತಂದ ಫಸಲನ್ನು ಬಡಮಕ್ಕಳ ಏಳಿಗೆಗೆ ವಿನಿಯೋಗಿಸಿದರು.

ಬೀದರರದಿಂದ ಚಾಮರಾಜನಗರದವರೆಗಿನ ಇಡೀ ಕನ್ನಡ ನಾಡಿನ ಬಡಮಕ್ಕಳಲ್ಲಿ ಹಲವರು ವಿದ್ಯೆಯರಸಿ ಸಿದ್ಧಗಂಗಾಕ್ಕೆ ಆಗಮಿಸಿದರು. ಹೊರನಾಡಿನವರೂ ಬಂದರು. ಸಿದ್ಧಗಂಗೆಯಲ್ಲಿ ಪ್ರಾಥಮಿಕ, ಪ್ರೌಢಶಿಕ್ಷಣ ಪಡೆದ ಲಕ್ಷಾಂತರ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ದೇಶ ವಿದೇಶಗಳಲ್ಲಿ ಅವರು ನೆಲೆಸಿದ್ದಾರೆ. ಸಿದ್ಧಗಂಗಾ ಶಿವಕುಮಾರ ಸ್ವಾಮಿಗಳ ಕಾರುಣ್ಯದ ಫಲ ಎಂದೇ ಅವರೆಲ್ಲ ಭಾವಿಸಿದ್ದಾರೆ.

ಶ್ರೀಗಳು ಯಾವುದೇ ಪವಾಡ ಮಾಡಲಿಲ್ಲ. ವಿದ್ಯಾರ್ಥಿಗಳೊಂದಿಗೆ ಜೀವಿಸಿದರು. ಶಿಸ್ತು, ಪರಿಶ್ರಮ, ಧ್ಯಾನ, ಏಕಾಗ್ರತೆಯನ್ನೇ ಬದುಕಿದರು. ಅದು ಇತರರಿಗೆ ದಾರಿದೀಪವಾಯಿತು. ನುಡಿದಂತೆ ನಡೆದರು. ಬೆಳಗಿನಜಾವ ಶುರುವಾಗುತ್ತಿದ್ದ ಅವರ ದಿನಚರಿ ರಾತ್ರಿ 11 ರ ವರೆಗೆ



ನಿರಂತರವಾಗಿ ಸಾಗುತ್ತಿತ್ತು. ಅಗತ್ಯ ಬಿದ್ದರೆ ತಾವೇ ಮುದ್ದೆ ತಿರುವುತ್ತಿದ್ದರು, ಅನ್ನ ಬಸಿಯುತ್ತಿದ್ದರು. ವಿದ್ಯಾರ್ಥಿಗಳಿಗೆ ಬೆಳಗಿನ ಹೊತ್ತು ಇಂಗ್ಲಿಷ್, ಸಂಸ್ಕೃತ ಪಾಠ ಮಾಡುತ್ತಿದ್ದರು.

ಮಠಕ್ಕೆ ಕಾಳು ಕಡ್ಡಿ ಎತ್ತಲು ಹಳ್ಳಿಗಳನ್ನು ಸಂಚರಿಸಿದ್ದು, ಪರ ಊರುಗಳಲ್ಲಿ ಸಂಘಟಿಸುತ್ತಿದ್ದ ಶಿವಾನುಭವ, ಬಸವೇಶ್ವರ ನಾಟಕ ಪ್ರದರ್ಶನ ಮುಂತಾದ ಕೆಲವು ಕಾರ್ಯಕ್ರಮಗಳನ್ನು ಹೊರತುಪಡಿಸಿದರೆ ಸಿದ್ಧಗಂಗಾ ಮಠ ಬಿಟ್ಟು ಅವರು ಹೊರಗೆ ಹೋದದ್ದೇ ಕಡಿಮೆ. ಮೇಯಲು ಹೋದ ತಾಯಿ ಹಸು ಸಂಜೆಗೆ ತನ್ನ ಕರುಗಳನ್ನು ನೆನಪಿಸಿ ಧಾವಿಸುವ ಹಾಗೆ ಸಿದ್ಧಗಂಗಾಕ್ಕೆ ವಾಪಸ್ಸಾಗಿಬಿಡುತ್ತಿದ್ದರು. ಸಿದ್ಧಗಂಗೆ ಅವರ ಪಾಲಿಗೆ ಕಾಯಕದ ಒಂದು ಕ್ಷೇತ್ರ ಮಾತ್ರವಲ್ಲ. ಅದೇ ಕೈಲಾಸ, ಅದೇ ಜಗತ್ತು. ವಿಶ್ವವೇ ತಮ್ಮತ್ತ ಗಮನ ಹರಿಸುವಂತಹ ಕೆಲಸವನ್ನು ಅಲ್ಲಿದ್ದೇ ಮಾಡಿದರು. ಸದಾ ಕಾಯಕಯೋಗಿ. ಇದು ಒಂದೆರಡು ವರ್ಷ ನಡೆದದ್ದಲ್ಲ. 111 ವರ್ಷಗಳ ಅವರ ಜೀವಿತಾವಧಿಯಲ್ಲಿ ಹತ್ತಿರತ್ತಿರ ಒಂದು ಶತಮಾನದ ಅಕ್ಷರಶಃ ಅವರ ಬದುಕು.

ಇಂತಹ ಋಷಿಸದೃಶ ಜೀವನ ನಡೆಸಲು ಅವರಿಗೆ ಸಿಕ್ಕ



**ಬಡತನ ನಿವಾರಣೆ, ಸಾಮಾಜಿಕ ನ್ಯಾಯ**

ಮೇಲ್ಜಾತಿಯ ಬಡವರಿಗೆ ಶೇ. 10 ರ ಮೀಸಲಾತಿಯನ್ನು ಸಂಸತ್ತು ಅಂಗೀಕರಿಸಿದ ಕೂಡಲೇ ಮೀಸಲಾತಿ ಅಂದರೆ ಅದು "ಬಡತನ ನಿವಾರಣೆಗೆ ಅಲ್ಲ, ಸಾಮಾಜಿಕ ನ್ಯಾಯಕ್ಕೆ ಇರೋದು..." ಎಂಬ ಚರ್ಚೆಗಳು ನಡೆಯುತ್ತಿವೆ.

ಸಿದ್ಧಗಂಗಾ ಶಾಲೆ, ಕಾಲೇಜು, ಪ್ರಸಾದ ನಿಲಯಗಳಲ್ಲಿ ದಲಿತ, ಮುಸ್ಲಿಂ ಸೇರಿದಂತೆ ಎಲ್ಲ ಜಾತಿಯ ಬಡವರಿಗೆ ಪ್ರವೇಶ ಇದೆ. ಇದು ಒಂದು ರೀತಿ ಬಡತನ ನಿವಾರಣೆಯೂ ಹೌದು, ಸಾಮಾಜಿಕ ನ್ಯಾಯವೂ ಹೌದು.

ಸಂಸ್ಕಾರವಾದರೂ ಎಂತಹದು? ಅದೇನು ಭವ್ಯವಾಗಿರಬೇಕೆಂದಿಲ್ಲ. ಸಾಮಾನ್ಯ ಕೃಷಿಕರ ಕುಟುಂಬದಲ್ಲೇ ಜನಿಸಿದರು. ಶ್ರದ್ಧೆಯಿಂದ ವಿದ್ಯೆ ಕಲಿತು ಮಠದ ಗುರುವಾದರು. "ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ" ಎಂಬ ವಚನಕಾರರ ಆಶಯವನ್ನು ಅಕ್ಷರಶಃ ಪಾಲಿಸಿದರು. ಅಂತೆಯೇ ನಡೆದಾಡುವ ದೇವರು ಎನಿಸಿದರು. ಶ್ರದ್ಧೆ, ನಿಷ್ಠೆ, ಪರಿಶ್ರಮದಿಂದ ಯಾರು ಬೇಕಾದರೂ ನಾಲ್ಕು ಜನಕ್ಕೆ ಉಪಕಾರ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು. ದೇಶಕ್ಕೆ ಅನ್ನ ನೀಡುವ ರೈತನಿಗೆ ಮನ್ನಣೆ ತಂದುಕೊಟ್ಟರು. "ಜನ ಬದುಕಲೆಂದು ಕಾವ್ಯ ರಚಿಸಿದೆ" ಎನ್ನುತ್ತಾನೆ ಕನ್ನಡದ ಮಹಾಕವಿ ರಾಘವಾಂಕ. ಶಿವಕುಮಾರ ಶ್ರೀಗಳ ಜೀವನ ಪಥವೇ ಮಹಾಕಾವ್ಯ.

**ಸೋಜಿಗ, ಅಚ್ಚರಿ**

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ವೀರಾಪುರದ ಹೊನ್ನೇಗೌಡ– ಗಂಗಮ್ಮ ದಂಪತಿಯ 13 ನೇ ಮಗುವಾಗಿ 1908 ರ ಏಪ್ರಿಲ್ 1 ರಂದು ಶಿವಣ್ಣ (ಶಿವಕುಮಾರ) ಜನಿಸಿದರು. ಆ ಕಾಲಕ್ಕೆ ಶಾಲೆಗಳ ಸ್ಥಾಪನೆ ಅಷ್ಟಾಗಿ ಇರಲಿಲ್ಲ. ಕೂಲಿಮಠದಲ್ಲಿ ಮರಳಿನ ಮೇಲೆ ಅಕ್ಷರ ತಿದ್ದುವ ಮೂಲಕ ಶಿವಣ್ಣನ ವಿದ್ಯಾಭ್ಯಾಸ ಶುರುವಾಯಿತು. ಮರಳಿನ ಮೇಲೆ ಅಕ್ಷರ ಮೂಡಿಸಿ ಶಿಕ್ಷಣ ಆರಂಭಿಸಿದ ಶಿವಣ್ಣ ಶಿಕ್ಷಣ ಕ್ರಾಂತಿಯ ಹರಿಕಾರನಾದುದು ಒಂದು ಸೋಜಿಗ.

ಪಕ್ಕದ ಪಾಲನಹಳ್ಳಿಯಲ್ಲಿ ಶಾಲಾ ವಿದ್ಯಾಭ್ಯಾಸ. ತಾಯಿ ವಿಧಿವಶರಾದರು. ತಾಯಿಯ ಮಮತೆಯಿಂದ ಬಹುಬೇಗ ವಂಚಿತನಾದ ಬಾಲಕನೊಬ್ಬ ಲಕ್ಷಾಂತರ ಬಡ ಹಾಗೂ ಮಧ್ಯಮವರ್ಗದ ಮಕ್ಕಳಿಗೆ ಶತಮಾನ ಕಾಲ ತಾಯಿ ಪ್ರೀತಿ ಧಾರೆ ಎರೆದದ್ದು ಮತ್ತೊಂದು ಅಚ್ಚರಿ...

ಅಕ್ಕನ ಆಸರೆಯಲ್ಲಿ ತುಮಕೂರು ಬಳಿಯ ನಾಗವಲ್ಲಿಯಲ್ಲಿ ಶಿವಣ್ಣನ ಮಾಧ್ಯಮಿಕ ಶಿಕ್ಷಣ. ನಂತರ ತುಮಕೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಓದಿ 1926 ರಲ್ಲಿ ಮೆಟ್ರಿಕ್ಯುಲೇಶನ್ ಪೂರೈಸುತ್ತಾರೆ. 1927 ರಲ್ಲಿ ಸಿದ್ಧಗಂಗೆಯ ಉದ್ದಾನ ಸ್ವಾಮಿಗಳು, ಅಟವಿಸ್ವಾಮಿಗಳ ಕೃಪಾದೃಷ್ಟಿಗೆ ಬೀಳುತ್ತಾರೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರು ಸೆಂಟ್ರಲ್ ಕಾಲೇಜು ಸೇರುತ್ತಾರೆ. ಗುಬ್ಬಿ ತೋಟದಪ್ಪ ಛತ್ರ ಅನ್ನ, ಆಸರೆ ನೀಡುತ್ತದೆ.



ಉದ್ದಾನ ಸ್ವಾಮಿಗಳ ಕೃಪೆಗೆ ಒಮ್ಮೆ ಪಾತ್ರರಾದ ಮೇಲೆ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಂತಹ ಮೋಹಕ ವ್ಯಕ್ತಿತ್ವ ಅವರದು. ಅವರ ಪ್ರಭಾವಕ್ಕೊಳಗಾಗುತ್ತಾರೆ. ಶಿಕ್ಷಣದ ಮಹತ್ವ ಎಂತಹದ್ದು ಎಂಬುದು ಅವರಿಂದ ಕಲಿತ ಪಾಠ. ಮೇಲಿಂದ ಮೇಲೆ ತುಮಕೂರಿಗೆ ಹೋಗಿ ಉದ್ದಾನ ಸ್ವಾಮಿಗಳ ದರ್ಶನ ಪಡೆಯುತ್ತಿರುತ್ತಾರೆ. ಸಿದ್ಧಗಂಗೆಯ ಉತ್ತರಾಧಿಕಾರಿ ಮರುಳಾರಾಧ್ಯರು ಆಗಬೇಕಿತ್ತು, ಆದರೆ ಅವರು ಅಕಾಲಿಕವಾಗಿ ಲಿಂಗೈಕ್ಯರಾಗುತ್ತಾರೆ. ಅಷ್ಟೊತ್ತಿಗಾಗಲೇ ಶಿವಕುಮಾರರನ್ನು ಚೆನ್ನಾಗಿ ಅರಿತಿದ್ದ ಉದ್ದಾನ ಸ್ವಾಮಿಗಳು ಇವರಿಗಿಂತ ಮತ್ತಾರು ಸಮರ್ಥರು ಎಂದು ಮಠದ ಉತ್ತರಾಧಿಕಾರಿಯಾಗಿ ನೇಮಿಸುತ್ತಾರೆ. ಇಪ್ಪತ್ತೆರಡರ ಹರೆಯದ ಶಿವಣ್ಣ 1930 ರಲ್ಲಿ ಮಠದ ಜವಾಬ್ದಾರಿ ವಹಿಸಿಕೊಂಡು ಶಿವಕುಮಾರ ಸ್ವಾಮಿ ಆಗುತ್ತಾರೆ.



**ದೀನ ದಲಿತರಿಗೆ ಸಂಸ್ಕೃತ**

58 ಶಾಲೆ, 8 ಪದವಿಪೂರ್ವ, 2 ಅಂಧಮಕ್ಕಳ ಶಾಲೆ, 1 ಅಂಗವಿಕಲ, 20 ಸಂಸ್ಕೃತ ಪಾಠಶಾಲೆ ಸೇರಿದಂತೆ ಒಟ್ಟು 126 ಶಿಕ್ಷಣ ಸಂಸ್ಥೆಗಳಲ್ಲಿ ಮೂಲಭೂತ ಶಿಕ್ಷಣಕ್ಕೆ ಸಿದ್ಧಗಂಗಾದ ಆದ್ಯತೆ. ಡೊನೇಷನ್ ತರುವ ಯಾವುದೇ ಶಾಲೆ ಕಾಲೇಜುಗಳಿಲ್ಲ. ಒಂದು ಮಾತ್ರ ಎಂಜಿನಿಯರಿಂಗ್ ಕಾಲೇಜು.

ಸಂಸ್ಕೃತ ಏನಿದ್ದರೂ ಮೇಲ್ಜಾತಿಗಳು ಕಲಿಯುವ ಭಾಷೆ ಎಂಬ ರೂಢಿಗತ ನಿಲುವಿಗೆ ವಿಮೋಚನೆ ನೀಡಿದವರು ಸಿದ್ಧಗಂಗಾಶ್ರೀ. ದೀನ ದಲಿತರನ್ನು ಆದ್ಯತೆಯ ಮೇಲೆ ಸೇರಿಸಿಕೊಂಡು ಸಂಸ್ಕೃತ ಶಿಕ್ಷಣ ನೀಡಿದ್ದು ಸಿದ್ಧಗಂಗಾದ ವಿಶೇಷತೆ.



downloaded from: www.kpscvaani.com



### ಸರ್ಕಾರದ ಕೆಲಸ ಮಠಗಳಿಂದ

ಭಾಷಾವಾರು ಪ್ರಾಂತ್ಯ ರಚನೆ(1956)ಗೆ ಮುಂಚೆ ಹೈದರಾಬಾದ್, ಮುಂಬಯಿ ಕರ್ನಾಟಕ, ಮದ್ರಾಸ್ ಪ್ರಾಂತ್ಯ, ಹಳೇಮೈಸೂರು ಎಂದು ನಾಡು ಹರಿದು ಹಂಚಿಹೋಗಿತ್ತು, ನಾಲ್ವಡಿ ಕೃಷ್ಣರಾಜ ಒಡೆಯರ್ ಸೇರಿದಂತೆ ಅರಸರು ಮೈಸೂರು ಪ್ರಾಂತ್ಯದಲ್ಲಿ ಶಿಕ್ಷಣ, ಕೃಷಿ, ನಾಗರಿಕ ಸೌಲಭ್ಯಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರು. ಆದರೆ ಉತ್ತರ ಕರ್ನಾಟಕದ ಬಹುತೇಕ ಭಾಗ ಹಿಂದುಳಿದಿತ್ತು. ಶಿಕ್ಷಣದ ಹೆಬ್ಬಾಗಿಲನ್ನು ತೆರೆಯುವ ಮೂಲಕ ಆ ಪ್ರದೇಶದಲ್ಲಿ ಮಠಗಳು ಅಸಾಧಾರಣ ಪ್ರಗತಿ ಉಂಟುಮಾಡಿದವು. ಸರ್ಕಾರ ಮಾಡಬೇಕಾದ ಕೆಲಸವನ್ನು ಮಠಗಳು ಮಾಡಿದವು. ಬಡವ ಬಲ್ಲಿದ ಎಂದೆಣಿಸದೆ ಉಚಿತ ಪ್ರಸಾದ ನಿಲಯ ಸ್ಥಾಪಿಸುವ ಮೂಲಕ ಶಿಕ್ಷಣದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದವು. ಇಲ್ಲವಾದರೆ ಉತ್ತರ ಕರ್ನಾಟಕ ಅದೆಷ್ಟು ಶತಮಾನಗಳ ಹಿಂದುಳಿದಿರುತ್ತಿತ್ತೋ ಊಹಿಸುವುದು ಕಷ್ಟ.

ಡೆಪ್ಯುಟಿ ಚನ್ನಬಸಪ್ಪ ಅವರ ಅಗ್ರಹದ ಮೇರೆಗೆ ಶಿರಸಂಗಿ ಮಹಾಲಿಂಗ ಸ್ವಾಮಿಗಳು ಬೆಳಗಾವಿ ಭಾಗದಲ್ಲಿ ಆರಂಭಿಸಿದ ಶಾಲೆ, ಉಚಿತ ಪ್ರಸಾದ ನಿಲಯ ಇಂತಹ ಶಿಕ್ಷಣ ಕ್ರಾಂತಿಗೆ ನಾಂದಿಹಾಡಿತು. ಚಿತ್ರದುರ್ಗ ಮುರುಘಾಮಠದ ಜಯದೇವಸ್ವಾಮಿಗಳು ಉಚಿತ ಪ್ರಸಾದ ನಿಲಯ, ಶಾಲೆಗಳನ್ನು ವಿಸ್ತರಿಸಿದರು. (ವಿಶ್ವವಿಖ್ಯಾತ ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಸೇರಿದಂತೆ ರಾಜ್ಯದ ಹಲವು ಸ್ಥಳಗಳಲ್ಲಿ ವೈದ್ಯಕೀಯ, ಶಿಕ್ಷಣ ಕ್ಷೇತ್ರಗಳಲ್ಲಿ ಎಲ್ಲೆಲ್ಲಿ 'ಜಯದೇವ' ಎನ್ನುವ ಹೆಸರಿದೆಯೋ ಅದು ಚಿತ್ರದುರ್ಗದ ಜಯದೇವ ಸ್ವಾಮಿಗಳದು.)

ಭಾಲ್ಕಿ, ನಾಗನೂರು, ಗದಗ ತೋಂಟದ, ಇಳಕಲ್, ಮೂರುಸಾವಿರ ಮಠ, ಧಾರವಾಡ ಮುರುಘಾಮಠ, ಸಿರಿಗೆರೆ, ಆದಿಚುಂಚನಗಿರಿ, ಸುತ್ತೂರು ಮುಂತಾದ ಮಠಗಳ ಕೊಡುಗೆ ಅಸಾಧಾರಣವಾದುದು. ಸ್ವ ಉದ್ಯೋಗಕ್ಕೆ ಒತ್ತು ನೀಡಿದವರು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು.

ಬಹುತೇಕ ಮಠಗಳು ತಮ್ಮತಮ್ಮ ಪ್ರಾಂತ್ಯಕ್ಕೆ ಸೀಮಿತವಾಗಿದ್ದವು. ಉತ್ತರ ದಕ್ಷಿಣವನ್ನು ವ್ಯಾಪಿಸಿ ನಾಡಿನ ಹೆಚ್ಚುಭಾಗಕ್ಕೆ ಪ್ರಾಥಮಿಕ ಶಿಕ್ಷಣ ನೀಡುವುದರಲ್ಲಿ ಮುಂಚೂಣಿಯಲ್ಲಿದ್ದುದು ಶಿವಕುಮಾರ ಸ್ವಾಮಿಗಳ ನೇತೃತ್ವದ ಸಿದ್ಧಗಂಗಾಮಠ.

ಬೆಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸ ಪೂರೈಸಿ, ತುಮಕೂರಿನ ಸಿದ್ಧಗಂಗಾ ಮಠಕ್ಕೆ ಮರಳುತ್ತಾರೆ. ಮಠಕ್ಕೆ ಇದ್ದ ಆಸ್ತಿ ಎಂದರೆ ಮಳೆಯಾಧಾರಿತ ಜಮೀನು. ಆಗ ಅತಿವೃಷ್ಟಿ, ಅನಾವೃಷ್ಟಿಗಳ ಕಾಲ. ತುಮಕೂರು ಸೀಮೆಯಲ್ಲಿ ಅನಾವೃಷ್ಟಿಯೇ ಹೆಚ್ಚು. ಮಠದ ಆದಾಯ ಕಡಿಮೆ.

ಭಕ್ತರ ಮನೆಗಳಿಗೆ ನಡೆದುಕೊಂಡು ಹೋಗಿ ಬಿನ್ನಹ ಮಾಡಿ ಕಾಳುಕಡ್ಡಿ ತಂದು ಕ್ರಮೇಣ ಶಾಲೆ, ಪ್ರಸಾದ ನಿಲಯದ ಸ್ಥಿತಿ ಸುಧಾರಿಸುತ್ತಾರೆ. ದೇಹದಂಡನೆಯ ಕಠಿಣ ಜೀವನಕ್ರಮ ರೂಢಿಸಿಕೊಂಡು ತಮ್ಮ ನಡೆಯಿಂದ ವಿದ್ಯಾರ್ಥಿಗಳಲ್ಲೂ ಅದನ್ನೆ ರೂಢಿಗೆ ತರುತ್ತಾರೆ.

### ನುಡಿದಂತೆ ನಡೆ

ಬೆಳಗಿನ ಜಾವ ನಾಲ್ಕಕ್ಕೆ ಎದ್ದು ತಣ್ಣೀರು ಸ್ನಾನ, ಒಂದು ತಾಸು ಧ್ಯಾನ, ಇಷ್ಟಲಿಂಗ ಪೂಜೆ, ವಿದ್ಯಾರ್ಥಿಗಳೊಂದಿಗೆ ಸಾಮೂಹಿಕ ಪ್ರಾರ್ಥನೆ; 6–30 ಕ್ಕೆ ಒಂದು ಅಕ್ಕಿ ಇಡ್ಲಿ, ಹೆಸರು ಬೇಳೆ ತೊವ್ವೆ, ಸಿಹಿಖಾರ ಮಿಶ್ರಿತ ಚಟ್ನಿ, ಎರಡು ತುಂಡು ಸೇಬು, ಬೇವಿನ ಚಕ್ಕೆ ಕಷಾಯ ಸೇವನೆ, ಕಚೇರಿಗೆ ಆಗಮಿಸಿ ದಿನಪತ್ರಿಕೆ ಓದಿ, ಭಕ್ತರ ಕುಶಲೋಪರಿ, ಕಷ್ಟಕ್ಕೆ ಸ್ಪಂದನೆ, ಮಠದ ವ್ಯವಹಾರ ಪರಿಶೀಲನೆ, ಮಧ್ಯೆ ಮಧ್ಯೆ ವಿದ್ಯಾರ್ಥಿಗಳ ಊಟ ವಸತಿ ಪರಿಶೀಲನೆ, ಅವರಿಗೆ ಸಂಸ್ಕೃತ, ಇಂಗ್ಲಿಷ್ ಪಾಠ; ಮಧ್ಯಾಹ್ನ ಮುದ್ದೆ, ತುಸು ಅನ್ನ; ರಾತ್ರಿಯೂ ಅಷ್ಟೆ. ಒಂದು ಚಪಾತಿ ಅಥವಾ ಒಂದು ದೋಸೆ ಅಥವಾ ಉಪ್ಪಿಟ್ಟು, ಹಣ್ಣು ಸೇವೆ, ನಂತರ ಅಧ್ಯಯನ.







## ಸಿದ್ಧಗಂಗಾ ಶಿವಕುಮಾರ ಶ್ರೀಗಳ ಕುರಿತು ಮಾಜಿ ರಾಷ್ಟ್ರಪತಿ, ವಿಜ್ಞಾನಿ ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂ ರಚಿಸಿದ ಕವನ:

ಸಿದ್ಧಗಂಗಾ ಶ್ರೀ..
ನೀವು ನಿಮ್ಮೆದುರಿಗೆ ನೋಡಿ ಒಬ್ಬ ರಸಋಷಿ
ಸುಂದರ ಅನುಭಾವದ ಹಾರೈಕೆ ಹೊತ್ತ ಯೋಗಋಷಿ
ಅನುದಿನವು ಭಗವಂತ ನಿಮಗೆ ಕರುಣಿಸಿದ ಈ ಯೋಗಿ
ಬೆಲೆಯುಳ್ಳ ಜೀವನದ ವೈಢೂರ್ಯವಾಗಿ

ಇಹದ ಬದುಕಿನ ಅಮೂಲ್ಯ ಹಾರವಾಗಿ
ಮೂವತ್ತಾರು ವಜ್ರಗಳ ಸಂಯೋಗಿ
ಮಾನವೀಯತೆಯೇ ಈ ಋಷಿಯ ಸಂದೇಶ
ಓ ನನ್ನ ನಾಗರಿಕ ಬಂಧುಗಳೇ
ಕೊಡುವಲ್ಲಿ ಪಡೆಯಿರಿ ನೆಮ್ಮದಿಯ ದೇಹಾತ್ಮಗಳಲ್ಲಿ

ಕೊಡಲು ಎಲ್ಲವೂ ಇದೆ ನಿಮ್ಮಲ್ಲಿ
ನಿಮಗಿರುವ ಅರಿವನ್ನು ಹಂಚಬಹುದು
ಅನುಕೂಲವಿದ್ದರೆ ಅನುವಿಗದ ನೀಡಬಹುದು

ನೋವು ನರಳಿಕೆಗಳನು ಪರಿಹರಿಸಲು
ನಿಮ್ಮ ಹೃದಯ ಮನಗಳನು ಬಳಸಿ
ನೊಂದ ಹೃದಯಗಳಿಗೆ ನಲಿವ ನೀಡಿ
ಕೊಡುವಲ್ಲಿ ಪಡೆಯಿರಿ ನೆಮ್ಮದಿಯ
ನಿಮ್ಮ ಕ್ರಿಯೆಗಳಿಗೆಲ್ಲ ದೈವ ಕಾರುಣ್ಯವಿರಲಿ

ಕನ್ನಡಕ್ಕೆ: ಗೊ.ರು.ಚನ್ನಬಸಪ್ಪ,
ಹಿರಿಯ ಸಾಹಿತಿಗಳು





downloaded from: www.kpscvaani.com



ಮಿತ ಆಹಾರ, ಶಿಸ್ತುಬದ್ಧ ಜೀವನ, ಅವರ ದೀರ್ಘಾಯುಷ್ಯದ ಗುಟ್ಟುಗಳಲ್ಲಿ ಒಂದಾಗಿರಬೇಕು. ಅವರ ದೇಹದಂಡನೆ ಕಠಿಣ ಪರಿಶ್ರಮ ತಕ್ಕಮಟ್ಟಿಗಾದರೂ ವಿದ್ಯಾರ್ಥಿಗಳಲ್ಲಿ ಒಡಮೂಡಿತು. ಶಿವಕುಮಾರ ಶ್ರೀ ಬರೀ ನುಡಿಯಲಿಲ್ಲ, ನಡೆದು ತೋರಿಸಿದರು.

ಈ ಮಧ್ಯೆ ಕನ್ನಡ, ಇಂಗ್ಲಿಷ್ ಸಾಹಿತ್ಯ, ವಚನಗಳನ್ನು ಚೆನ್ನಾಗಿ ಅಧ್ಯಯನ ಮಾಡಿದರು. ಸ್ವಾಮಿ ವಿವೇಕಾನಂದರನ್ನು ಅರಗಿಸಿಕೊಂಡರು. ಬಸವಣ್ಣ, ಸಿದ್ಧರಾಮ, ಅಲ್ಲಮ, ನಿಜಗುಣ ಶಿವಯೋಗಿ, ವಿವೇಕಾನಂದರನ್ನು ಆಗಾಗ ಉದ್ಧರಿಸುತ್ತಿದ್ದರಷ್ಟೇ ಅಲ್ಲ ಅವರ ನಡೆನುಡಿ ತನಗೆ ಅನುಕರಣೀಯ ಎಂದು ಅನುಸರಿಸಿದರು. ಗಾಂಧೀಜಿಯವರೂ ಸಾಕಷ್ಟು ಪರಿಣಾಮ ಬೀರಿರಬೇಕು. ಇದೆಲ್ಲ ಸೇರಿಸಿಯೇ ಸಿದ್ಧಗಂಗಾ ಶಿವಕುಮಾರರಾದರು.

'ನಾನು ದೇವರನ್ನು ನಿತ್ಯ ಕಂಡಿದ್ದೇನೆ. ನಿತ್ಯವೂ ಕಾಣುತ್ತಿದ್ದೇನೆ. ಆತನೊಂದಿಗೆ ಮಾತನಾಡುತ್ತಿದ್ದೇನೆ..' ಎನ್ನುತ್ತಿದ್ದರು ಶಿವಕುಮಾರ ಶ್ರೀಗಳು. 'ಮಕ್ಕಳಿಗಿಂತ ದೇವರು ಇನ್ನಾರಿರಲು ಸಾಧ್ಯ..?' ಎಂದು ಅವರು ಮುಂದುವರಿದು ಹೇಳುತ್ತಿದ್ದರು. ಹಾಗೆಯೇ ನಡೆದುಕೊಂಡರು. ಊರೂರು ಸುತ್ತಿ ದವಸ ಧಾನ್ಯ ಸಂಗ್ರಹಿಸಿದರು. ಶ್ರೀಗಳು ನಿಸ್ಪೃಹರಾಗಿ ವಿದ್ಯಾದಾನ ಮಾಡುವುದನ್ನು ಗ್ರಾಮಸ್ಥರು ಕಣ್ಣಾರೆ ಕಂಡರು. ಸಿದ್ಧಗಂಗಾ ಮಠದಲ್ಲಿ ಜಾತಿಭೇದ ಇರಲಿಲ್ಲ. ದಲಿತರು, ಮುಸ್ಲಿಮರು ಸೇರಿದಂತೆ ಎಲ್ಲ ಜಾತಿಯ ಮಕ್ಕಳು– ಅದರಲ್ಲೂ ವಿಶೇಷವಾಗಿ ಬಡಮಕ್ಕಳು ಹೆಚ್ಚಾಗಿಯೇ ಇದ್ದರು. ಶ್ರೀಗಳು ಅವರಿಗೆ ಮಾತೃ ಮಮತೆ ನೀಡಿ ಕಾಪಾಡುತ್ತಿದ್ದರು. ಮಠಕ್ಕೆ ಕೊಡುವುದು ಸಾರ್ಥಕ ಎಂದೇ ಕನ್ನಡ ನಾಡಿನ ಗ್ರಾಮೀಣ ರೈತರು ಭಾವಿಸಿದರು. ತುಮಕೂರು ಪ್ರಾಂತ್ಯದ ರೈತರಂತೂ ಧಾರಾಳವಾಗಿ ಮುಂದೆ ಬಂದರು. ಶಾಲೆಗಳಿಗೆ, ಪ್ರಸಾದ ನಿಲಯಕ್ಕೆ ಸೇರುವ ಮಕ್ಕಳಲ್ಲಿ ಹೇಗೆ ಜಾತಿ ಭಾವ ಇರಲಿಲ್ಲವೋ ಹಾಗೆಯೇ ಕೊಡುವ ಕೈಗಳಲ್ಲೂ ಜಾತಿಯ ಸುಳಿವಿರಲಿಲ್ಲ. ಎಲ್ಲ ಜಾತಿಯ ರೈತರು ಮಠಕ್ಕೆ ಉದಾರವಾಗಿ ಕಾಣಿಕೆ ನೀಡಿದರು.

**ಇಡೀ ಕರ್ನಾಟಕ ವ್ಯಾಪ್ತಿ**

ಉತ್ತರ ಕರ್ನಾಟಕ, ಅದರಲ್ಲೂ ಹೈದರಾಬಾದ್ ಕರ್ನಾಟಕವಂತೂ ತೀರಾ ಹಿಂದುಳಿದಿತ್ತು. ಅಲ್ಲಿನ ಲಿಂಗಾಯತ ಮಠಗಳು ಆದಾಗಲೇ ಶಾಲೆ ಕಾಲೇಜು, ಉಚಿತ ಪ್ರಸಾದ ನಿಲಯಗಳನ್ನು ಸ್ಥಾಪಿಸಿದ್ದವು. ಆದರೆ ಅಲ್ಲಿ ಸಾಲದಾಗಿ ಸಿದ್ಧಗಂಗಾದ ಕಡೆ ಬಡಮಕ್ಕಳು ಬಂದರು. ಸಾಕಷ್ಟು ಸಂಖ್ಯೆಯಲ್ಲಿ ಬಂದರು. ಅಂತೆಯೇ ಸ್ವಾಮಿಗಳ ಅಂತ್ಯಕ್ರಿಯೆಯಲ್ಲಿ ತುಮಕೂರು, ಮೈಸೂರು, ಬೆಂಗಳೂರು ಸೀಮೆಯ ಜೊತೆಗೆ ಉತ್ತರ ಕರ್ನಾಟಕದ ಜನರೂ ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದರು. ಕರ್ನಾಟಕದ ಉದ್ದಗಲಕ್ಕೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ವಿದ್ಯಾದಾನ ಮಾಡುವ ಸಂಸ್ಥೆ ಮತ್ತೊಂದಿಲ್ಲ ಎಂದು ಪ್ರತೀತಿಯಾಯಿತು. ಈಗಿರುವ ವಿದ್ಯಾರ್ಥಿಗಳ ಸಂಖ್ಯೆ 9 ಸಾವಿರಕ್ಕೂ ಅಧಿಕ. ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ಮೂಲಭೂತ ಶಿಕ್ಷಣ ಪಡೆದು ಹೊರಬರುತ್ತಾರೆ. ಕಳೆದ ಎಂಬತ್ತು ವರ್ಷಗಳಲ್ಲಿ ಈ ಸಂಖ್ಯೆ ಲಕ್ಷಗಳಲ್ಲಿದೆ.

ಸಿದ್ಧಗಂಗಾ ಶ್ರೀಗಳವರು ಸರಳವಾಗಿ ಬದುಕಿದರು. ನುಡಿದಂತೆ ನಡೆದರು. ಅಸಂಖ್ಯಾತ ಬಡಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಕಾರಣಕರ್ತರಾದರು. ಅಂತೆಯೇ ಅವರು ಪವಾಡ ಪುರುಷರೆನಿಸಿದರು.

ಸಿದ್ಧಗಂಗಾ ಶಿವಕುಮಾರ ಶ್ರೀಗಳ ಸೇವೆಯನ್ನು ಮನ್ನಿಸಿ ಕರ್ನಾಟಕ ರತ್ನ, ಪದ್ಮಭೂಷಣ ಸೇರಿದಂತೆ ಹಲವು ಪ್ರಶಸ್ತಿ ಗೌರವಗಳು ಅವರಿಗೆ ಸಂದಿವೆ. ಭಾರತರತ್ನ ನೀಡಬೇಕಿತ್ತು, ಅದರಿಂದ ಭಾರತರತ್ನಕ್ಕೆ ಒಂದು ಗೌರವ ಬರುತ್ತಿತ್ತು ಎಂದು ಹೇಳಲಾಗುತ್ತದೆ. ಆದರೆ ಸಿದ್ಧಗಂಗಾಶ್ರೀ ಶಿವಯೋಗಿಗಳು, ಎಡೆಯೂರು ಸಿದ್ಧಲಿಂಗೇಶ್ವರ, ಅಥಣಿ ಶಿವಯೋಗಿ, ಸರ್ಪಭೂಷಣ ಮುಂತಾದವರು ಶಿವಯೋಗಿಗಳು. ವಚನಕಾರರ ಹಾಗೆ ಬದುಕಿದವರು. ಭಾರತರತ್ನವನ್ನು ಮೀರಿದವರು. ಸ್ವಾಮಿಗಳಿಗೇಕೆ ಪ್ರಶಸ್ತಿಯ ಆಮಿಷ? ಅದನ್ನು ಮೀರಿದವರು ಎಂದೂ ಹೇಳುವವರಿದ್ದಾರೆ. ತೀರಾ ಇತ್ತೀಚೆಗೆ ಪದ್ಮಶ್ರೀಯನ್ನೇ ನಯವಾಗಿ ನಿರಾಕರಿಸಿದ ವಿಜಯಪುರದ ಸಿದ್ಧೇಶ್ವರ ಸ್ವಾಮಿಗಳ ಉದಾಹರಣೆ ನಮ್ಮ ಮುಂದಿದೆ.

ಸಿದ್ಧಗಂಗಾ ಶ್ರೀ ಬೃಹತ್ ಕಟ್ಟಡಗಳನ್ನು ಕಟ್ಟಲಿಲ್ಲ. ಅಸಂಖ್ಯಾತ ಮಕ್ಕಳ ಮನಸ್ಸನ್ನು ಕಟ್ಟಿದರು. ಅವರಲ್ಲಿ ಉತ್ತಮ ಸಂಸ್ಕಾರ ರೂಪಿಸಿದರು. ಮಕ್ಕಳಿಗಾಗಿ ತನ್ನ ಪರಿಸರದ ಲೋಕ ಸುತ್ತಿ ಧಾನ್ಯ ಸಂಗ್ರಹಿಸಿ ತಂದು ಅವರನ್ನು ಉದ್ಧರಿಸಿದರು. ಅವರು ಬಿತ್ತಿದ್ದು ಇಂದು ಫಲ ಕೊಡುತ್ತಿದೆ. ಹಾಲಿ ಮಠದ ಸ್ವಾಮೀಜಿ ಸಿದ್ಧಲಿಂಗ ಸ್ವಾಮಿಗಳ ಮೂಲಕ ಅದು ಮುಂದುವರಿಯಲಿದೆ ಎಂಬ ನಿರೀಕ್ಷೆ ಇದೆ.

ಸ್ಥಾವರಕ್ಕಳಿವುಂಟು... ಜಂಗಮಕ್ಕಳಿವಿಲ್ಲ ಎಂದು ಅದಕ್ಕೇ ಅಲ್ಲವೇ ಬಸವಣ್ಣ ಹೇಳಿದ್ದು.





# ಧಾರವಾಡದಲ್ಲಿ 84ನೇ ಸಾಹಿತ್ಯ ಸಮ್ಮೇಳನ

**ಮಂಜುನಾಥ ಡೊಳ್ಳಿನ**
ಹಿರಿಯ ಸಹಾಯಕ ನಿರ್ದೇಶಕರು

ಉತ್ತರ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ, ಪೇಡಾನಗರಿ ಧಾರವಾಡದಲ್ಲಿ ಅಖಿಲ ಭಾರತ 84ನೇ ಕನ್ನಡ ಸಾಹಿತ್ಯ ಸಮ್ಮೇಳನ ಜನವರಿ 4, 5 ಮತ್ತು 6ರಂದು ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಿತು. ರಾಜ್ಯ–ಹೊರರಾಜ್ಯ ಸೇರಿದಂತೆ ರಾಷ್ಟ್ರದ ವಿವಿಧ ಸ್ಥಳಗಳಿಂದ ಆಗಮಿಸಿದ್ದ ಲಕ್ಷಾಂತರ ಜನ ಸಾಹಿತಿಗಳು, ಸಾಹಿತ್ಯ ಆರಾಧಕರು, ಸಹೃದಯರು ಈ ನಾಡ ನುಡಿಹಬ್ಬಕ್ಕೆ ಸಾಕ್ಷಿಯಾದರು.

ಪ್ರಾಚೀನ ಕಾಲದ ದೇವಾಲಯ, ಮಠ–ಅಗ್ರಹಾರಗಳು ವಿದ್ಯೆಗೆ ನೀರೆರೆದು ಪೋಷಿಸಿದ ನಾಡು ಧಾರವಾಡ. ಸಾಹಿತ್ಯ, ಸಂಗೀತ ಜನಪದಗಳ ವಿಕಾಸ ಹೊಂದಿದ್ದು ಇಲ್ಲಿಯೇ. ಪಂಪ, ಕುಮಾರವ್ಯಾಸ ಹುಟ್ಟಿದ ನಾಡಿದು. ಕನಕದಾಸ, ಸರ್ವಜ್ಞ, ಚಾಮರಸ, ಸಂತ ಶಿಶುನಾಳ ಶರೀಫರೂ ಕೂಡ ಅವಿಭಜಿತ ಧಾರವಾಡ ಜಿಲ್ಲೆಯವರೇ. ಮಲ್ಲಿಕಾರ್ಜುನ ಮನ್ಸೂರ್,







downloaded from: www.kpscvaani.com



❝ ರಾಷ್ಟ್ರಕವಿ ಕುವೆಂಪು ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾನು ಸಂಘಟಕನಾಗಿ ತೊಡಗಿಸಿಕೊಂಡಿದ್ದೆ. ಇಂದು ಇದೇ ನೆಲದಲ್ಲಿ ನಾನು ಸಮ್ಮೇಳನಾಧ್ಯಕ್ಷನಾಗಿ ಗೌರವ ಸ್ವೀಕರಿಸುತ್ತಿರುವುದು ನನ್ನ ಸೌಭಾಗ್ಯ, ಸುದೈವ ಮತ್ತು ನನ್ನ ಪುಣ್ಯ. ❞

–ಡಾ.ಚಂದ್ರಶೇಖರ ಕಂಬಾರ, ಸಮ್ಮೇಳನದ ಸರ್ವಾಧ್ಯಕ್ಷರು

ಗಂಗೂಬಾಯಿ ಹಾನಗಲ್, ಭೀಮಸೇನ್ ಜೋಶಿ ಸಂಗೀತ ಸುಧೆ ಹರಿಸಿದ ಬೀಡು. ಗದಗಿನ ಪಂಚಾಕ್ಷರಿ ಗವಾಯಿ ಅವರು ಸಂಗೀತದಲ್ಲಿ ಪರಿಣಿತಿ ಹೊಂದಿದ್ದು ಇಲ್ಲಿಯೇ. ಟ್ರೇನಿಂಗ್ ಕಾಲೇಜು, ಬಾಸೆಲ್ ಮಿಶನ್, ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ವಿಶ್ವವಿದ್ಯಾಲಯ, ಆಕಾಶವಾಣಿಗಳ ಅಪೂರ್ವ ಇತಿಹಾಸ. ಹೀಗೆ ಹಲವಾರು ವಿಶೇಷತೆಗೆ ಹೆಸರಾದ ಧಾರವಾಡದಲ್ಲಿ 84ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಿಗದಿಯಾದಾಗ ನಾಡ ಜನರೆಲ್ಲ ಧಾರವಾಡದ ಕಡೆಗೆ ಮತ್ತೊಮ್ಮೆ ನೋಡುವಂತಾಯಿತು. ಸಮ್ಮೇಳನದ ಬಗ್ಗೆ ಜನರಲ್ಲಿ ಕುತೂಹಲವಿತ್ತು.

ಅಂತೆಯೇ ಧಾರವಾಡ ಜನರು ಪ್ರೀತಿ, ವಿಶ್ವಾಸ ಸಂಯಮದಿಂದ ಎಲ್ಲಾ ವ್ಯವಸ್ಥೆ ಮಾಡಿದ ಹಿನ್ನೆಲೆಯಲ್ಲಿ ಸಮ್ಮೇಳನವು ಮೂರು ದಿನಗಳ ಕಾಲ ನಡೆದು ಯಶ ಕಂಡಿತು. ಶಾಂತಿಪ್ರಿಯ ಧಾರವಾಡ ಸದಾ ಸಂಸ್ಕೃತರ ನಾಡು ಎಂಬುದು ಮತ್ತೊಮ್ಮೆ ಸಾಬೀತಾಯಿತು.

ಧಾರವಾಡದಲ್ಲಿ ಇದುವರೆಗೆ 5 ಸಮ್ಮೇಳನಗಳು ನಡೆದಿವೆ. ಧಾರವಾಡದ ಆರ್.ಎಲ್.ಎಸ್. ಮೈದಾನದಲ್ಲಿ 1957ರ ಮೇ 7, 8 ಮತ್ತು 9 ರಂದು ಇದ್ದ ಸಂತಸ, ಸಂಭ್ರಮವು ಈ ಬಾರಿಯೂ ಮರುಕಳಿಸಿತು. 61 ವರ್ಷಗಳ ನಂತರ ಮತ್ತೆ ಅದ್ದೂರಿಯಾಗಿ ನಡೆದ ಈ ಸಮ್ಮೇಳನ ಹಲವು ಹೊಸತನಗಳಿಗೆ ಸಾಕ್ಷಿಯಾಗಿ ಇತಿಹಾಸದ ಪುಟ ಸೇರಿತು.

ಸಮ್ಮೇಳನದ ನಿಮಿತ್ತ ಹಾಕಿದ್ದ ಮಂಟಪ ಮತ್ತು ದ್ವಾರಗಳಿಗೆ ಸಾಹಿತ್ಯ ದಿಗ್ಗಜರ ಹೆಸರನ್ನಿಡಲಾಗಿತ್ತು. ಡಾ.ಎಸ್.ಎಸ್. ಭೂಸನೂರಮಠ ಮಹಾಮಂಟಪ, ರೆವೆರೆಂಡ್ ಎಫ್ ಕಿಟೆಲ್ ದ್ವಾರ. ಡಾ.ಡಿ.ಸಿ.ಪಾವಟೆ ವೇದಿಕೆ, ಡಾ.ಸರೋಜಿನಿ ಮಹಿಷಿ ಮಹಾಮಂಟಪ, ಡಾ.ಗಿರಡ್ಡಿ ಗೋವಿಂದರಾಜ ದ್ವಾರ, ಅಂಬಿಕಾತನಯದತ್ತ ಪ್ರಧಾನ ವೇದಿಕೆಗಳೆಂದು ಹೆಸರಿಡಲಾಗಿತ್ತು.

ಅಕ್ಷರ ಜಾತ್ರೆಯ ನಿಮಿತ್ತ ಧಾರಾನಗರಿ ಅಕ್ಷರಶಃ ಕಂಗೊಳಿಸಿತು. ರಾಜ್ಯ ಸೇರಿದಂತೆ ದೇಶದ ನಾನಾ ಭಾಗಗಳಿಂದ ಹೊರಟಿದ್ದ ಸಾಹಿತಿಗಳು, ಚಿಂತಕರು, ಬುದ್ಧಿಜೀವಿಗಳು, ಸಾಹಿತ್ಯಾಸಕ್ತರು ಸೇರಿದಂತೆ ಅಸಂಖ್ಯ ಜನತೆಯನ್ನು ಬರಮಾಡಿಕೊಳ್ಳಲು ನಗರದ ಎಲ್ಲಾ ಮುಖ್ಯ ವೃತ್ತಗಳಲ್ಲಿ ಬೃಹಧಾಕಾರದ ಸ್ವಾಗತ ಕಮಾನುಗಳನ್ನು ನಿಲ್ಲಿಸಲಾಗಿತ್ತು. ನಗರದ ಬಹುತೇಕ ಎಲ್ಲಾ ರಸ್ತೆಗಳ ಎರಡು ಬದಿಯ ಕಂಪೌಂಡ್ ಗೋಡೆಗಳ ಮೇಲೆ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ', 'ಕನ್ನಡ ನಾಡು ಕಲೆಗಳ ಬೀಡು', 'ಕನ್ನಡ ಉತ್ಸವ', 'ಆಳಾಗಿ ದುಡಿ ಅರಸನಾಗಿ ಉಣ್ಣು' ಎನ್ನುವ ಘೋಷಣೆಗಳು ಮತ್ತು ನಾಣ್ಣುಡಿಗಳನ್ನು ಬರೆಯಲಾಗಿತ್ತು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮುಖ್ಯ ವೇದಿಕೆ ಇರುವ ಕೃಷಿ ವಿಶ್ವವಿದ್ಯಾಲಯದ ಆವರಣಕ್ಕೆ ಹೋರಡುವ ಅಂದಾಜು 4 ಕಿ.ಮೀ ರಸ್ತೆಯುದ್ದಕ್ಕೂ ಸಾಲುಸಾಲು ವಿದ್ಯುದೀಪ ಅಳವಡಿಸಿದ್ದರಿಂದ ಕಣ್ಣನ ಸೆಳೆಯುತ್ತಿತ್ತು. ಜೊತೆಗೆ ಕನ್ನಡ ಧ್ವಜಗಳನ್ನು ಕಟ್ಟಲಾಗಿತ್ತು. ಕೃಷಿ ವಿವಿ ರಸ್ತೆ, ಕರ್ನಾಟಕ ವಿಶ್ವವಿದ್ಯಾಲಯದ ರಸ್ತೆ, ಜಿಲ್ಲಾಧಿಕಾರಿ ಅವರ ಕಚೇರಿಗೆ ಹೋರಡುವ ರಸ್ತೆ ಸೇರಿದಂತೆ ನಗರದ ಬಹುತೇಕ ರಸ್ತೆಗಳ ಅಕ್ಕಪಕ್ಕದ ಕಾಂಪೌಂಡ್ ಗೋಡೆಯ ಮೇಲೆ ಬಿಡಿಸಿದ್ದ ಬಣ್ಣದ ಚಿತ್ತಾರ ಗಮನ ಸೆಳೆಯಿತು.

ನಗರದ ವಿವಿಧ ವೃತ್ತಗಳಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್, ಜಗಜ್ಯೋತಿ ಬಸವೇಶ್ವರ ಇನ್ನೂ ಹಲವಾರು ಮಹಾತ್ಮರ ಮತ್ಥಳಿಗಳಿಗೆ ಕನ್ನಡ ಧ್ವಜ, ಬಣ್ಣದ ಪರಿಪರಿಗಳಿಂದ ಅಲಂಕಾರ ಮಾಡಲಾಗಿತ್ತು. ಕನ್ನಡ ನಾಡು–ನುಡಿ ಪ್ರತಿನಿಧಿಸುವ ಕರ್ನಾಟಕ ವಿದ್ಯಾವರ್ಧಕ ಸಂಘ, ಕಲಾಭವನ, ಆಲೂರ ವೆಂಕಟರಾವ್ ಸಭಾಂಗಣ ಸೇರಿದಂತೆ ವಿವಿಧ ಸಭಾಂಗಣಗಳಿಗೆ ವಿದ್ಯುದೀಪಗಳಿಂದ ಅಲಂಕರಿಸಲಾಗಿತ್ತು, ಸಮ್ಮೇಳನದ ಪ್ರಚಾರ ಸಮಿತಿಯಿಂದ ನಗರ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಮ್ಮೇಳನದ ಪ್ರಚಾರ ಫಲಕ ಹಾಗೂ ಮಾಹಿತಿ ಫಲಕಗಳನ್ನು ಹಾಕಲಾಗಿತ್ತು.



ಧರೆಗೆ ದೊಡ್ಡವಳಾದ ಸಾವಿರದ ಶರಣವ್ವ ಕನ್ನಡದ ತಾಯೇ ಎಂಬ ಕವನದ ಮೂಲಕ ಅಕ್ಷರ ಜಾತ್ರೆಯನ್ನು ಉದ್ಘಾಟಿಸುವ ಅವಕಾಶ ತಮ್ಮ ಪಾಲಿನ ಸುಕೃತ. ನಾಡಿನ ನೆಲ, ಜಲ, ಭಾಷೆ, ಸಂಸ್ಕೃತಿ ರಕ್ಷಣೆಯು ನಮ್ಮ ಸರ್ಕಾರದ ಆದ್ಯತೆಯಾಗಿದೆ. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ ಎಂಬ ಈ ಮಾತಿನಲ್ಲಿ ನಂಬಿಕೆಯಿಟ್ಟು ಕನ್ನಡದ ಕಿಂಚಿತ್ ಸೇವೆ ಮಾಡುವ ಭಾಗ್ಯ ನನ್ನದಾಗಿರುವುದಕ್ಕೆ ಧನ್ಯನಾಗಿದ್ದೇನೆ. ಅಭಿವೃದ್ಧಿಗೆ ಪ್ರಾದೇಶಿಕ ತಾರತಮ್ಯವಿಲ್ಲದೆ ಅಖಂಡ ಕರ್ನಾಟಕ ಸಮೃದ್ಧವಾಗಬೇಕೆಂಬ ಅಚಲ ವಿಶ್ವಾಸದಿಂದ ಸರ್ಕಾರ ಆದ್ಯತೆ ಮೇಲೆ ಕಾರ್ಯ ನಿರ್ವಹಿಸುತ್ತಿದೆ.

– ಹೆಚ್. ಡಿ. ಕುಮಾರಸ್ವಾಮಿ
ಮಾನ್ಯ ಮುಖ್ಯಮಂತ್ರಿಗಳು

ಸುಮಾರು 61 ವರ್ಷಗಳ ನಂತರ ಧಾರವಾಡದಲ್ಲಿ ಜರುಗುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಪವಿತ್ರ ಸಾಹಿತ್ಯ ಯಾತ್ರೆ, ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ನಾಡೋಜ ಚಂದ್ರಶೇಖರ ಕಂಬಾರ ಅವರು ನಮ್ಮೊಳಗಿನ ಪ್ರತಿಭೆ.

– ನಾಡೋಜ ಡಾ.ಚನ್ನವೀರ ಕಣವಿ
ಹಿರಿಯ ಕವಿ

**ಚಿತ್ರ ಕಲೆ ಮತ್ತು ಪಾರಂಪರಿಕ ನಡಿಗೆ:** ಸಾಹಿತ್ಯ ಸಮ್ಮೇಳನದ ನಿಮಿತ್ತ ಚಿತ್ರಕಲಾ ಸಮಿತಿಯಿಂದ ಹಿರಿಯ ಹಾಗೂ ಯುವ ಕಲಾವಿದರಿಂದ ಚಿತ್ರಕಲಾ ಶಿಬಿರ ಏರ್ಪಡಿಸಲಾಗಿತ್ತು. ಜಿಲ್ಲಾಡಳಿತದಿಂದ ಧಾರವಾಡ ನಗರದ ಪಾರಂಪರಿಕ ಹಾಗೂ ಐತಿಹಾಸಿಕ ಸ್ಮಾರಕಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಜನವರಿ 2ರಂದು ಪಾರಂಪರಿಕ ನಡಿಗೆ ಕೂಡ ನಡೆಯಿತು. ಜಲಧಾರೆಗಳ ಹಾಗೂ ದೇವಸ್ಥಾನ ಹಾಗೂ ಶಿಲ್ಪಕಲೆಗಳ ವೀಕ್ಷಣೆಗೆ ಧಾರವಾಡದಿಂದ ವಿಶೇಷ ಪ್ಯಾಕೇಜ್ ಟೂರ್ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಚಿತ್ರಕಲಾ ಪ್ರದರ್ಶನ ಹಾಗೂ ಸ್ಪರ್ಧೆಯಲ್ಲಿ ಆಹ್ವಾನಿತ ಚಿತ್ರಕಲಾಕೃತಿಗಳ ಪೈಕಿ 10 ಕಲಾಕೃತಿಗಳಿಗೆ ಪುರಸ್ಕಾರ ನೀಡಲಾಯಿತು.

**ಸಮ್ಮೇಳನದ ಮೊದಲ ದಿನ:** ಬೆಳಗ್ಗೆ 8ಕ್ಕೆ ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಮತ್ತು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾದ ಆರ್.ವಿ. ದೇಶಪಾಂಡೆ ಅವರು ರಾಷ್ಟ್ರಧ್ವಜವನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ.ಮನು ಬಳಿಗಾರ್ ಅವರು ಪರಿಷತ್ತಿನ ಧ್ವಜವನ್ನು, ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಲಿಂಗರಾಜ ಅಂಗಡಿ ಅವರು ನಾಡ ಧ್ವಜಾರೋಹಣ ನೆರವೇರಿಸಿದರು.





downloaded from: www.kpscvaani.com






ಕನ್ನಡ ಕೈಂಕರ್ಯವಿದು ನಿಮ್ಮ ಮನೆಯ ಕಾರ್ಯ. ಕನ್ನಡ ನಾಡು ನುಡಿ ರಕ್ಷಣೆಯ ಪಣ ನಿಮ್ಮದು. ಹೊಣೆ ನಮ್ಮದು. ಕನ್ನಡಕ್ಕೆ ಕೈ ಎತ್ತಿ ನಿಮ್ಮ ಕೈ ಕಲ್ಪ ವೃಕ್ಷವಾಗುತ್ತದೆ. ಮೂಡಣ ಪಡುವಣ ತೆಂಕಣ ಬಡಗಣ, ನಮ್ಮ ರಕ್ಷಣೆಗೆ ಕಂಕಣ ಕಟ್ಟುವೆವು. ನುಡಿ ಕನ್ನಡ, ನಡೆ ಕನ್ನಡ. ಅನ್ನ ಕನ್ನಡ. ಮಣ್ಣು ಕನ್ನಡ. ಉಸಿರು ಗಾಳಿ ನೀರು ಕನ್ನಡ. ಬೇರು ಕನ್ನಡ ಎಳೆಯೋಣ ಬನ್ನಿರಿ ಕನ್ನಡ ತೇರು ಎನ್ನುವ ಫಲಕವೊಂದನ್ನು ಮತ್ತೊಬ್ಬ ವ್ಯಕ್ತಿ ತನ್ನ ಬೆನ್ನಿಗೆ ಹಾಕಿಕೊಂಡು ಕನ್ನಡ ನಾಡು ನುಡಿಯ ಬಗ್ಗೆ ಜಾಗೃತಿ ಮೂಡಿಸಿದರು.

ಅಖಂಡ ಕರ್ನಾಟಕ ಒಂದಾಗಿರಲಿ. ಮಹಾದಾಯಿ ಯೋಜನೆ, ಮೇಕೆದಾಟು ಯೋಜನೆ ಜಾರಿ ಬರಲಿ. ಕೃಷ್ಣ ಮೇಲ್ದಂಡೆ ಮೂರನೇ ಹಂತ ರಾಷ್ಟ್ರೀಯ ಯೋಜನೆಯಾಗಲಿ. ರಾಷ್ಟ್ರೀಯ ಜಲನೀತಿ ಜಾರಿ ಬರಲಿ ಎಂದು ಮೈಸೂರಿನ ಕನ್ನಡ ಚಳುವಳಿಗಾರ ಬಿ.ಎ.ಶಿವಶಂಕರ ಅವರು ನಾಡ ಧ್ವಜ ಹಿಡಿದು ಸಮ್ಮೇಳನದಲ್ಲಿ ಎದುರಾದರು.

ಪುಸ್ತಕ ಓದುವ ಆಸಕ್ತಿ ಬೆಳೆಸಿಕೊಳ್ಳೋಣ. ಇತರರಿಗೂ ಪುಸ್ತಕ ಓದಲು ತಿಳಿಸೋಣ. ಬನ್ನಿರಿ ನಮ್ಮಲ್ಲಿ ಕೆಲವೇ ಕೆಲವು ಪುಸ್ತಕಗಳಿವೆ. ಕಡಿಮೆ ಬೆಲೆಗೆ ಮಾರುತ್ತಿದ್ದೇವೆ ಎಂದು ಸಂಘಟನೆಯೊಂದರ ಮುಖಂಡ ಧಾರವಾಡದ ಬಡಿಗೇರ ಅನ್ನುವವರು ಮೈಕಿನ ಮೂಲಕ ಕನ್ನಡ ಪುಸ್ತಕ ಮಾರಾಟ ಮಾಡುತ್ತಿದ್ದುದು ಕಂಡು ಬಂದಿತು.

ಸಮುದಾಯ ಹಾಗೂ ಸಹಯಾನ ಸೇರಿ ಆರಂಭಿಸಿರುವ ಸಂವಿಧಾನ ಓದು ಅಭಿಯಾನವು ಪುಸ್ತಕ ಮಳಿಗೆಯಲ್ಲಿ ಗಮನ ಸೆಳೆಯಿತು. ತಮ್ಮ ಮಳಿಗೆಗೆ ಪುಸ್ತಕ ಕೊಳ್ಳಲು ಬರುವವರಿಗೆ 'ಸಂವಿಧಾನ ಓದು' ಪುಸ್ತಕದ ಒಂದೆರಡು ಸಾಲು ಅವರಿಂದ ಓದಿಸಿ ಮಾರಾಟ ಮಾಡುತ್ತಿದ್ದ ಧಾರವಾಡದ ಕೆ.ಎಚ್.ಪಾಟೀಲ ಅವರ ಕನ್ನಡ ಪ್ರೇಮ ಮೆಚ್ಚುವಂತದ್ದು.

ರಕ್ತ ದಾನ ಮಹಾದಾನ ಎಂದು ವ್ಯಕ್ತಿಯೊಬ್ಬರು ಸಮ್ಮೇಳನದ ಮೂರು ದಿನಗಳ ಕಾಲ ಕೆಂಪುಬಣ್ಣದ ಅಂಗಿ ಧರಿಸಿ ಜಾಗೃತಿ ಮೂಡಿಸಿದರು. 'ಇದು ಕನ್ನಡ ತಾಯಿಯ ಸೇವೆ ರಿ' ಎನ್ನುವ ಅವರ ಮಾತಿನಲ್ಲಿ ಕನ್ನಡಾಭಿಮಾನದ ಪ್ರೀತಿ ಅನುರಣಿಸಿತು.

ದೂರದ ಗಡಿನಾಡು ಬೀದರಿನಿಂದ ಹಿರಿಯ ಪತ್ರಕರ್ತರಾದ ಶಿವಶರಣಪ್ಪ ವಾಲಿ ಅವರು ತಮ್ಮ ಪತ್ನಿಯೊಂದಿಗೆ ಬಂದಿದ್ದರು. ಬಹುತೇಕ ಎಲ್ಲಾ ಗೋಷ್ಠಿಗಳಲ್ಲಿ ಜೊತೆಯಾಗಿ ಪಾಲ್ಗೊಂಡಿದ್ದರು. ಇದು ನಾನು ಪಾಲ್ಗೊಳ್ಳುತ್ತಿರುವ 34 ಸಮ್ಮೇಳನ. ಕನ್ನಡ ಎಂದರೆ ನನ್ನ ಪ್ರಾಣ ಎಂದು ತಿಳಿಸಿದ ಅವರ ಕನ್ನಡ ಪ್ರೇಮ ಮಾದರಿಯಾದುದು.

ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಸೇರಿದಂತೆ ಹಲವಾರು ನಾಡ ಹಿರಿಯ ಸಾಹಿತಿಗಳ ಭಾವಚಿತ್ರಗಳನ್ನು ಮೈತುಂಬಾ ಹಾಕಿಕೊಂಡು ಕಾರೊಂದು ತಿರುಗುತ್ತಿತ್ತು. ಬಾಗಲಕೋಟೆ ಜಿಲ್ಲೆಯ ಶ್ರೀಶೈಲ ಕರಿಶಂಕರಿ ಅವರಿಗೆ ಸೇರಿದ ಕಾರು ಕನ್ನಡ ಪ್ರೇಮ ಕಾಣುವಂತೆ ಮಾಡಿತು.


ಕನ್ನಡ ನಾಡು-ನುಡಿ ಕಾರ್ಯಕ್ಕೆ ಕೈ ಜೋಡಿಸಿ. ಇರಲಿ ನಿಮ್ಮ ಪಾಲು ಆಗುವುದು ನಿಮ್ಮ ಕೈ ಮೇಲು. ಬಾಳೆಲ್ಲ ಹಾಲಲು ಜೇನು. ಉಸಿರು ನಿಂತರೆ ಸಾವು. ಸೈನಿಕರಿದ್ದರೆ ನಾವು. ಸೈನಿಕರ ಕಲ್ಯಾಣ ನಿಧಿಗೆ ಚಾಚಿರಿ ಉದಾರ ಹಸ್ತ. ಅವರಿಲ್ಲದಿದ್ದರೆ ನಾವೆಲ್ಲ ಸುಸ್ತು ಎನ್ನುವ ಫಲಕಗಳನ್ನು ಕೊರಳಿಗೆ ಹಾಕಿಕೊಂಡು ವ್ಯಕ್ತಿಯೊಬ್ಬರು ಮೂರು ದಿನಗಳ ಕಾಲ ಅಲ್ಲಲ್ಲಿ ತಿರಗುತ್ತಿದ್ದರು.

ಇಂತಹ ಅನೇಕ ಕನ್ನಡ ಪ್ರೇಮಿಗಳು ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕಂಡು ಬಂದರು. ಹೀಗೆಯೇ ಕನ್ನಡ ನಾಡು-ನುಡಿಯನ್ನು ನಾವೂ ಕೂಡ ಪ್ರೀತಿಸಬೇಕು ಎನ್ನುವ ಅಭಿಮಾನವನ್ನು ನೂರ್ಮಡಿಗೊಳಿಸಿದರು. ■









## ಅರಸು ಪ್ರಶಸ್ತಿ ವಿಜೇತರಾದ
# ಶಿವಾಜಿ ಛತ್ರೆಪ್ಪ ಕಾಗಣೀಕರ

ಡಾ.ಯಲ್ಲಪ್ಪ ಹಿಮ್ಮಡಿ

ಗಡಿ ಜಿಲ್ಲೆ ಬೆಳಗಾವಿಯ ಉತ್ತರ ಭಾಗದಲ್ಲಿ ಸಾಮಾಜಿಕ ಮತ್ತು ಪರಿಸರ ಸೇವೆ ಎಂದಾಗ ಥಟ್ಟನೇ ನೆನಪಿಗೆ ಬರುವ ಹೆಸರು ಶಿವಾಜಿದಾದಾ ಕಾಗಣೀಕರ. ಇವರಿಗೆ 2017-18 ನೇ ಸಾಲಿನ ಡಿ.ದೇವರಾಜ ಅರಸು ಪ್ರಶಸ್ತಿಯನ್ನು ಡಿಸೆಂಬರ್ 5 ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಪ್ರದಾನ ಮಾಡಿ ಸನ್ಮಾನಿಸಿದರು.

ಬೆಳಗಾವಿ ತಾಲೂಕಿನ ಕಟ್ಟಣಬಾವಿ ಶಿವಾಜಿಯ ಊರು. ತಾಯಿ ಗಂಗವ್ವ, ತಂದೆ ಛತ್ರೆಪ್ಪ, ಶಾಲೆಯ ದಾಖಲಾತಿಯಂತೆ ಶಿವಾಜಿಯ ಜನ್ಮದಿನ 1949 ಮಾರ್ಚ್ 1. ಒಂದು ಹೆಣ್ಣು ಮತ್ತು ಎಂಟು ಗಂಡು ಮಕ್ಕಳಲ್ಲಿ ಶಿವಾಜಿ ಎಂಟನೆಯವರು. ಕಡೋಲಿಯ ಕುರುಬ ಸಮುದಾಯದಲ್ಲಿ ಮೆಟ್ರಿಕ್ ಪಾಸಾದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆ ಅವರದು. ಮನೆಮಾತು ಕನ್ನಡವಾದರೂ ಆ ಭಾಗದಲ್ಲಿ ಕನ್ನಡ ಶಾಲೆಗಳಿಲ್ಲದ್ದರಿಂದ ಸಮೀಪದ ಕಡೋಲಿ ಗ್ರಾಮದಲ್ಲಿ ಶಿವಾಜಿ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮರಾಠಿ ಮಾಧ್ಯಮದಲ್ಲಿ ಕಲಿಯುತ್ತಾರೆ. ಮುಂದೆ ಪಿಯುಸಿ ಪ್ರಥಮ ವರ್ಷದ ಶಿಕ್ಷಣವನ್ನು ಬೆಳಗಾವಿ ನಗರದ ಜಿ.ಎಸ್.ಎಸ್. ಕಾಲೇಜಿನಲ್ಲಿ ಮತ್ತು ದ್ವಿತೀಯ ಪಿಯುಸಿ ಹಾಗೂ ಬಿ.ಎಸ್.ಸಿ ಪದವಿ ಶಿಕ್ಷಣವನ್ನು ನಗರದ ರಾಜಾ ಲಖಮಗೌಡ ವಿಜ್ಞಾನ ಕಾಲೇಜಿನಲ್ಲಿ ಪಡೆಯುತ್ತಾರೆ. ಸಾಮಾಜಿಕ ಚಳುವಳಿಯ ಸೆಳೆತದಿಂದ ಪದವಿ ವಿದ್ಯಾಭ್ಯಾಸ ಮೊಟಕುಗೊಳಿಸಿ ಸಾನೇ ಗುರೂಜಿ, ಜಯಪ್ರಕಾಶ ನಾರಾಯಣ, ವಸಂತ ಪಾಳಸೇಕರ, ಅಣ್ಣಾ ಹಜಾರೆ, ಮೋಹನ್ ಹೀರಾಬಾಯಿ ಹೀರಾಲಾಲ್ ಮುಂತಾದವರ ಸಾಮಾಜಿಕ ಚಳುವಳಿ ಮತ್ತು ಚಿಂತನೆಗಳ ಪ್ರಭಾವದಿಂದ ಸೇವೆ ಮಾಡಲು ಅವಿವಾಹಿತರಾಗಿ ಇಡೀ ಜೀವಮಾನವನ್ನು ಸಮಾಜಕ್ಕಾಗಿ ಸಮರ್ಪಿಸಿಕೊಂಡಿದ್ದಾರೆ.

**ಬಾಲ್ಯದಿಂದಲೇ ಸಾಮಾಜಿಕ ಸೇವೆಯ ತುಡಿತ**

ಶಿವಾಜಿಯು ಪ್ರಾಥಮಿಕ ಶಾಲೆಯಲ್ಲಿದ್ದಾಗ ನಡೆದ ಎರಡು ಘಟನೆಗಳು ಅವರನ್ನು ಸಾಮಾಜಿಕ ಚಳುವಳಿಯತ್ತ ಸೆಳೆದವು.

ಮೊದಲ ಘಟನೆ: ಮರಾಠಿ ಮಾಧ್ಯಮದಲ್ಲಿ ಮೂರನೇ ತರಗತಿಯಲ್ಲಿದ್ದಾಗ 'ಸಾನೇ ಗುರೂಜಿ' ಅವರ 'ಭೂತ ದಯಾ' ಎನ್ನುವ ಪಾಠ ಬಾಲಕ ಶಿವಾಜಿಯ ಮೇಲೆ ಅತ್ಯಂತ ಪ್ರಭಾವ ಬೀರುತ್ತದೆ. ಪಾಠದಲ್ಲಿ 'ಗಾಯಗೊಂಡು ಬಿದ್ದ ಪಕ್ಷಿಯನ್ನು ಸಾನೇ ಗುರೂಜಿ ಅವರು ಅದನ್ನು ಮನೆಗೆ ತಂದು ಮೂರು ದಿನಗಳ ಕಾಲ ಆರೈಕೆ ಮಾಡುತ್ತಾರೆ. ಆದರೆ ಅದು ಉಳಿಯುವುದಿಲ್ಲ. ಅದಕ್ಕೆ ಗುರೂಜಿ ಮನುಷ್ಯರಿಗೆ ಮಾಡುವ ಹಾಗೆ ಅಂತ್ಯ ಸಂಸ್ಕಾರ ಮಾಡಿ ಮೂರು ದಿನ ಸೂತಕ ಆಚರಿಸುತ್ತಾರೆ. ಇದನ್ನು ಓದಿದ ಶಿವಾಜಿಗೆ ಗುರೂಜಿಯವರು ಪ್ರಾಣಿ ಪಕ್ಷಿಗಳ ಬಗ್ಗೆ ಇಷ್ಟೆಲ್ಲಾ ಸೇವೆ ಮಾಡುತ್ತಾರೆ, ಮನುಷ್ಯರಾದ ನಾವೇಕೆ ನಮ್ಮ ಜೊತೆಗಿರುವ ಮನುಷ್ಯರ ಕುರಿತು ದಯೆ, ಕಾಳಜಿ ತೋರಬಾರದು? ಎನ್ನಿಸಿ, ಸಾನೇ ಗುರೂಜಿಯವರ 'ಸಮಂತಾ' ಸೇರಿದಂತೆ ಎಲ್ಲ ಕೃತಿಗಳನ್ನು ಓದುತ್ತಾರೆ. ಗುರೂಜಿಯವರ 'ಹಳ್ಳಿಗಳಿಗೆ ಹೋಗಿ ಸೇವೆ ಮಾಡಿ' ಎನ್ನುವ ಕಾರ್ಯಕ್ರಮದಿಂದ ಪ್ರೇರಿತರಾಗಿ ಶಿಕ್ಷಣವಂಚಿತ ಹಳ್ಳಿಯ ಬಡಮಕ್ಕಳಿಗೆ ಶಿಕ್ಷಣ ಕಲಿಸುವ ಶಿಕ್ಷಕನಾಗಬೇಕೆಂದು ನಿರ್ಧಾರ ಮಾಡುತ್ತಾರೆ.

ಎರಡನೇ ಘಟನೆ: ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗ ಹೊಸದಾಗಿ ಬಂದ ಕಾಂಬಳೆ ಎನ್ನುವ ಪ್ರತಿಭಾವಂತ ದಲಿತ



downloaded from: www.kpscvaani.com

# ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ ಅಪರೂಪದ ಛಾಯಾಚಿತ್ರಗಳ ಸಂಗ್ರಹ


ಮೈಸೂರಿನ ಮಹಾರಾಜ ಜಯ ಚಾಮರಾಜ ಒಡೆಯರ್ ಮತ್ತು ಸ್ವಾಮೀಜಿ ಅವರು.


ದಿವಂಗತ ಮಾಜಿ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಅವರು ಮಠಕ್ಕೆ ಭೇಟಿ ನೀಡಿದ ಸಂದರ್ಭ.


ಸ್ವಾಮೀಜಿ ಅವರೊಂದಿಗೆ ಮಠದ ಆವರಣದಲ್ಲಿ ಹೆಜ್ಜೆ ಹಾಕುತ್ತಿರುವ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಹಾಗೂ ಅಂದಿನ ರಾಜ್ಯಪಾಲರಾದ ಮೋಹನ್‌ಲಾಲ್ ಸುಖಾಡಿಯಾ


ದಿವಂಗತ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ಸ್ವಾಮೀಜಿ ಅವರನ್ನು ಭೇಟಿ ಮಾಡಿದ ಸಂದರ್ಭ.


ಕಾರ್ಯಕ್ರಮವೊಂದರಲ್ಲಿ ಸ್ವಾಮೀಜಿ ಅವರು ಭಕ್ತರಿಗೆ ಸನ್ಮಾನಿಸುತ್ತಿರುವುದು.


ಮಠಕ್ಕೆ ಆಗಮಿಸಿದ್ದ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರನ್ನು ಆಶೀರ್ವದಿಸುತ್ತಿರುವ ಸ್ವಾಮೀಜಿ ಅವರು.



ಮಠದ ಸಮಾರಂಭವೊಂದಕ್ಕೆ ದಿವಂಗತ ಮಾಜಿ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಹಾಗೂ ಅಂದಿನ ಕೇಂದ್ರ ಸಚಿವ ಶಿವರಾಜ್ ಪಾಟೀಲ್ ಅವರು ಆಗಮಿಸಿದ್ದ ಸಂದರ್ಭ.


ಸ್ವಾಮೀಜಿ ಅವರೊಂದಿಗೆ ಆದಿಚುಂಚನಗಿರಿಯ ಬಾಲಗಂಗಾಧರನಾಥ ಸ್ವಾಮೀಜಿ ಮತ್ತು ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಕಾರ್ಯಕ್ರಮವೊಂದರಲ್ಲಿ ಒಟ್ಟಾಗಿ ಭಾಗಿಯಾಗಿದ್ದ ಸಂದರ್ಭ.


ಕಾರ್ಯಕ್ರಮವೊಂದರಲ್ಲಿ ಸ್ವಾಮೀಜಿ ಅವರೊಂದಿಗೆ ವೇದಿಕೆಯನ್ನು ಹಂಚಿಕೊಂಡಿದ್ದ ಅಂದಿನ ಮುಖ್ಯಮಂತ್ರಿ ಹೆಚ್.ಡಿ. ದೇವೆಗೌಡರು.


ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೇಂದ್ರ ಸಚಿವರಾದ ಡಿ.ವಿ ಸದಾನಂದಗೌಡರೊಂದಿಗೆ ಮಠಕ್ಕೆ ಭೇಟಿ ನೀಡಿದ ಸಂದರ್ಭ.



downloaded from: www.kpscvaani.com



ಹಿರಿಯ ಶ್ರೀಗಳು ಮಠದ ಸಂಪೂರ್ಣ ಜವಾಬ್ದಾರಿಯನ್ನು 2011ರಲ್ಲಿ ಕಿರಿಯ ಶ್ರೀ ಸಿದ್ದಲಿಂಗಸ್ವಾಮೀಜಿಗೆ ವಹಿಸಿಕೊಟ್ಟ ಸಂದರ್ಭ



ಗುರುವಂದನಾ ಕಾರ್ಯಕ್ರಮದಲ್ಲಿ ಸ್ವಾಮೀಜಿ



ಸ್ವಾಮೀಜಿ ಅವರು ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸುವ ಮೂಲಕ ಮೈಸೂರು ದಸರಾ ಉದ್ಘಾಟಿಸುತ್ತಿರುವುದು. ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಉಪಸ್ಥಿತರಿದ್ದಾರೆ.



ಶ್ರೀಗಳ ಅಂತಿಮ ಮೆರವಣಿಗೆ



ಶ್ರೀಗಳಿಗೆ ಅಂತಿಮ ನಮನ ಸಲ್ಲಿಸುತ್ತಿರುವ ಕಿರಿಯ ಸ್ವಾಮೀಜಿ ಸಿದ್ದಲಿಂಗಸ್ವಾಮೀಜಿ ಅವರು.



ಅಂತಿಮ ದರ್ಶನಕ್ಕೆ ಕಾಯುತ್ತಿರುವ ಭಕ್ತವೃಂದ



ಶ್ರೀಗಳಿಗೆ ಪುಷ್ಪ ನಮನ ಸಲ್ಲಿಸುತ್ತಿರುವ ಮಾಜಿ ಪ್ರಧಾನಿ ದೇವೇಗೌಡರು.



ಶ್ರೀಗಳಿಗೆ ಪುಷ್ಪ ನಮನ ಸಲ್ಲಿಸುತ್ತಿರುವ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್



ಶ್ರೀಗಳಿಗೆ ಪುಷ್ಪ ನಮನ ಸಲ್ಲಿಸುತ್ತಿರುವ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ.



ಶ್ರೀಗಳಿಗೆ ಪುಷ್ಪ ನಮನ ಸಲ್ಲಿಸುತ್ತಿರುವ ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್



ಶ್ರೀಗಳಿಗೆ ಪುಷ್ಪ ನಮನ ಸಲ್ಲಿಸುತ್ತಿರುವ ಗೃಹಸಚಿವ ಎಂ. ಬಿ. ಪಾಟೀಲ್



ಶ್ರೀಗಳಿಗೆ ಪುಷ್ಪ ನಮನ ಸಲ್ಲಿಸುತ್ತಿರುವ ವಿರೋಧ ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ



downloaded from: www.kpscvaani.com



# ಸಮಾಜಸುಧಾರಕ ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ

ಪ್ರೊ. ಟಿ. ಬಿ. ಕರದಾನಿ

ಸಮಾಜದ ಸರ್ವಾಂಗೀಣ ಏಳಿಗೆಗಾಗಿ ಸರ್ವರ ಅಭ್ಯುದಯಕ್ಕಾಗಿ ಶಿಕ್ಷಣದ ಪ್ರಸಾರಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ನಿಸ್ವಾರ್ಥಮನೋಭಾವದ ಸರಳ ಸಜ್ಜನಿಕೆಯ ಸಮಾಜ ಸುಧಾರಕ, ಶಿಕ್ಷಣಪ್ರೇಮಿ, ಕರ್ನಾಟಕ ಗಾಂಧಿ ಎಂದೇ ಖ್ಯಾತಿ ಪಡೆದ, ಬಸವತತ್ವಗಳನ್ನು ಪ್ರಚಾರ ಪಡಿಸಿ, ಬಸವಣ್ಣನವರ ಜೀವನ ಸಾಧನೆ ಕುರಿತು ಗಾಂಧೀಜಿಯವರಿಗೆ ಪರಿಚಯಿಸಿದ ಮೊದಲ ಕನ್ನಡಿಗನೇ ಹರ್ಡೇಕರ ಮಂಜಪ್ಪನವರು ಎನ್ನುವುದು ಹೆಮ್ಮೆಯ ವಿಷಯ. ಇವರ ರಾಷ್ಟ್ರಾಭಿಮಾನ, ಸ್ವಾತಂತ್ರ್ಯ ಚಳುವಳಿಯ ಬಗೆಗೆ ಇರುವ ಆಸಕ್ತಿ, ಭಾಷಾ ಪ್ರಾವೀಣ್ಯತೆ, ಸಮಾಜ, ರಾಷ್ಟ್ರದ ಪ್ರಗತಿ ಕುರಿತಾದ ಚಿಂತನೆ ಧಾರ್ಮಿಕ ಶಿಕ್ಷಣದ ಸುಧಾರಣೆಯ ಕೆಲವು ಪ್ರಮುಖ ಲೇಖನಗಳು, ಶರಣ ಸಂದೇಶ, ಧರ್ನುದಾರಿ ಪತ್ರಿಕೆ ಸಂಸ್ಥಾಪಕರಾಗಿ ಸ್ವಾವಲಂಬನೆಯ ಬದುಕನ್ನು ರೂಪಿಸಿಕೊಂಡ ಆಜನ್ಮ ಬ್ರಹ್ಮಚಾರಿಯಾಗಿರುವಂತಹ ಹರ್ಡೇಕರ ಮಂಜಪ್ಪ ಅವರ ಸಾಧನೆಯನ್ನು ಕಂಡು ಗಾಂಧೀಜಿಯವರು ಮೆಚ್ಚುಗೆ ವ್ಯಕ್ತಪಡಿಸಿದ್ದರು ಎನ್ನುವುದನ್ನು ಮರೆಯುವಂತಿಲ್ಲ.

**ಹರ್ಡೇಕರ ಮಂಜಪ್ಪನವರ ಜೀವನ:**

ಬೆಳೆಯುವ ಸಸಿಯನ್ನು ಮೊಳಕೆಯಲ್ಲಿಯೇ ಕಾಣು ಎಂಬಂತೆ ಮಂಜಪ್ಪನವರು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಒಂದು ಬಡ ಕುಟುಂಬದಲ್ಲಿ 1886, ಫೆಬ್ರವರಿ 18 ರಂದು ಜನಿಸಿದರು. 1903 ರಲ್ಲಿ ಶಿರಸಿಯಲ್ಲಿ ಕನ್ನಡ ಮುಲ್ಕಿ ಪರೀಕ್ಷೆಯನ್ನು ಮೊದಲ ಶ್ರೇಣಿಯಲ್ಲಿ ಉತ್ತೀರ್ಣರಾದರು. ಸತತ ಪ್ರಯತ್ನ ಅಧ್ಯಯನದಲ್ಲಿ ನಿಷ್ಠೆ ಶ್ರದ್ಧೆಯನ್ನು ರೂಢಿಸಿಕೊಂಡು ತಮ್ಮಲ್ಲಿರುವ ಪ್ರತಿಭೆಯನ್ನು ಗುರುತಿಸಿ ಗೌರವಿಸಿದವರು. ಬಾಲ್ಯದಿಂದಲೇ ಸಾಹಿತ್ಯ, ಬರಹ, ಭಾಷಣ, ಪುಸ್ತಕ, ಪ್ರಕಟಣೆ, ಧರ್ಮಜಾಗೃತಿ, ಸಮಾಜಸೇವೆಯಂತಹ ಪ್ರಮುಖ ಪ್ರವೃತ್ತಿಗಳನ್ನು ಜೀವನದಲ್ಲಿ ರೂಢಿಸಿಕೊಂಡು ಬದುಕಿದವರು. ಆಳವನ್ನು ನುಂಗಿ ನಕ್ಕವರು, ಅಲ್ಪಾವಧಿಯಲ್ಲಿಯೇ ಅಮೋಘ ಸಾಧನೆಗೈದವರು. ಪ್ರಾರಂಭದಲ್ಲಿ ಶಿಕ್ಷಕರಾಗಿ ಕೆಲಕಾಲದವರೆಗೆ ಸೇವೆ ಸಲ್ಲಿಸಿದರು. ನಂತರ ಶಿಕ್ಷಕ ವೃತ್ತಿಗೆ ರಾಜೀನಾಮೆಯನ್ನು ನೀಡಿದರು. ಆಗ ಅಣ್ಣನ ಬೆಂಬಲದೊಂದಿಗೆ ರಾಷ್ಟ್ರೀಯ ಹೋರಾಟದಲ್ಲಿ ಪಾಲ್ಗೊಂಡರು. ರಾಷ್ಟ್ರ, ಸಮಾಜದ ಉನ್ನತಿಗಾಗಿ ಹತ್ತು ಹಲವು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಬಾಲ್ಯದಲ್ಲಿ ಬಂದು ಒದಗಿದ ಹಲವು ಕಷ್ಟ ಕಾರ್ಪಣ್ಯಗಳನ್ನು ದಿಟ್ಟತನದಿಂದ ಎದುರಿಸಿ ಇದ್ದದ್ದರಲ್ಲಿಯೇ ಸಂತೃಪ್ತಿಯನ್ನು ಕಂಡವರು. ಬಾಲಗಂಗಾದರ ತಿಲಕರ ಬಸವಣ್ಣನವರ ನೀತಿ ಸಿದ್ಧಾಂತ ತತ್ವಗಳಿಗೆ ಹಾಗೂ ಗಾಂಧೀಜಿಯವರ ಶಾಂತಿ & ಅಹಿಂಸಾ, ನೀತಿ, ತತ್ವ, ಸಿದ್ಧಾಂತಗಳಿಗೆ ಮಂಜಪ್ಪನವರು ಪ್ರಭಾವಿತರಾಗಿದ್ದರು.

**ಹರ್ಡೇಕರ ಮಂಜಪ್ಪನವರ ಸಾಧನೆಗಳು :**

ಹರ್ಡೇಕರ ಮಂಜಪ್ಪನವರು ಸಂತರು, ಶರಣರು, ಅಪ್ರತಿಮ ದೇಶಭಕ್ತ ಸಮಾಜ ಸುಧಾರಕರು, ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕ ಗಾಂಧೀ ಎಂದೇ ಪ್ರಖ್ಯಾತರಾದವರು, ಪತ್ರಿಕೋದ್ಯಮಿಯಾಗಿ ಗುರುತಿಸಿಕೊಂಡು ನಾಡಿನ ಏಳಿಗೆಗಾಗಿ ಸಾಕಷ್ಟು ಪರಿಶ್ರಮಿಸಿದರು. ಧರ್ಮದ ಏಳಿಗಾಗಿ ನಾಡಿನ ಏಕೀಕರಣಕ್ಕೆ ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದವರು. ಹಾನಗಲ್ ಕುಮಾರಸ್ವಾಮಿಗಳವರ ಆಶೀರ್ವಾದ, ಲೋಕಮಾನ್ಯ ತಿಲಕರ ಹಾಗೂ ಗಾಂಧೀಜಿಯವರ ಸ್ಪೂರ್ತಿ, ಶೇಷಗಿರಿರಾಯರ ಪ್ರೋತ್ಸಾಹದಿಂದಾಗಿ, ಧರ್ನುದಾರಿ ಪತ್ರಿಕೆಯನ್ನು ದಾವಣಗೆರೆಯಿಂದ ಆರಂಭಿಸಿದರು. ಕನ್ನಡಿಗರಲ್ಲಿ ದೇಶಾಭಿಮಾನವನ್ನು ಮೂಡಿಸಿದರು. ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಾ "ಆದಿಜನ ಸುಧಾರಣೆ" ಹಾಗೂ ಮಹಿಳಾ ವಿಮೋಚನೆಗಾಗಿ ಪ್ರಯತ್ನಿಸಿ ಸ್ತ್ರೀ ನೀತಿ ಗ್ರಂಥಗಳನ್ನು ಬರೆದರು. ಬಸವತತ್ವ, ಬಸವ ಬೋಧಾಮೃತ ಪುಸ್ತಕಗಳನ್ನು ಪ್ರಕಟಿಸಿ ಲಕ್ಷಾಂತರ ಪ್ರತಿಗಳನ್ನು ಹಂಚುವ ಮೂಲಕ ಜನರಲ್ಲಿ ಪುಸ್ತಕ ಓದುವ ಪ್ರವೃತ್ತಿಯನ್ನು ಹೆಚ್ಚಿಸಿದರು. ಧರ್ಮ ಸಂಘಟನೆಯಲ್ಲಿ ಯಶಸ್ವಿಯಾದರು, ಮೃತ್ಯುಂಜಯ ಮಹಾಸ್ವಾಮಿಗಳವರ ಪ್ರೋತ್ಸಾಹ ಮಾರ್ಗದರ್ಶನದಲ್ಲಿ 1913ರಲ್ಲಿ ಪ್ರಪ್ರಥಮವಾಗಿ ಬಸವ ಜಯಂತಿಯನ್ನು ಆಚರಣೆಗೆ ತಂದವರೇ ಹರ್ಡೇಕರ ಮಂಜಪ್ಪನವರು. 1924 ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಸೇವಾದಳ ಎಂಬ ಸಂಘಟನೆಯನ್ನು ಬೆಳೆಸಿದರು. ಇದಕ್ಕೂ ಮುಂಚಿತವಾಗಿ 1908ರಲ್ಲಿ ಜ್ಞಾನ ಪ್ರಕಾಶ ಸಂಘವನ್ನು ಸ್ಥಾಪಿಸಿ ಸರ್ವ ಸಮುದಾಯಗಳ ಒಳಿತಿಗಾಗಿ ನಿರಂತರವಾಗಿ ಪರಿಶ್ರಮಿಸಿದರು. ಆಲಮಟ್ಟಿಯ ಕೃಷ್ಣಾ ನದಿ ದಂಡೆಯ ಮೇಲೆ ಮಂಜಪ್ಪನವರು 1929 ರಲ್ಲಿ ವೀರಶೈವ ವಿದ್ಯಾಲಯ ಎಂಬ ಆಶ್ರಮವನ್ನು ಸ್ಥಾಪಿಸಿದರು. ಈ ಆಶ್ರಮ ಸಾಬರಮತಿ ಆಶ್ರಮದ ಪ್ರತಿರೂಪವೇ ಆಗಿತ್ತು. ತಮ್ಮ ಜೀವಿತದ ಕೊನೆಯ 20 ವರ್ಷಗಳನ್ನು 1927 ರಿಂದ 1946 ರವರೆಗೆ ಆಲಮಟ್ಟಿಯನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡಿದ್ದರು. ಗುರುಕುಲ ಶಿಕ್ಷಣವನ್ನು ಆಧುನಿಕತೆಯೊಂದಿಗೆ ಸಂಯೋಜನೆಗೊಳಿಸಿ ಯುವಕರಲ್ಲಿ ನೈತಿಕತೆ, ಸ್ವಾವಲಂಬನೆ, ಉದ್ಯೋಗಶೀಲತೆ ಅಕ್ಷರ ಸಂಸ್ಕೃತಿಯನ್ನು ಬೆಳೆಸಿದರು. ತಮ್ಮ ಬದುಕಿನುದ್ದಕ್ಕೂ ಸಾಹಿತ್ಯ ಸಂಘಟನೆ ಹೋರಾಟ, ಜನತೆ ಕಲ್ಯಾಣ ಸಾಧಿಸುವಲ್ಲಿ ಪರಿಶ್ರಮಿಸಿದವರು. ಗಾಂಧೀಜಿಯವರ ಕನಸಿನಂತೆ ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ ಎಂಬ ತತ್ವವನ್ನರಿತ ಮಂಜಪ್ಪನವರು ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ ಬೆಳೆಸಿ ಶಿಕ್ಷಣ ಪ್ರೇಮಿಯೆನಿಸಿದ್ದಾರೆ. ಸ್ತ್ರೀಯರಿಗೆ ಸಮಾಜದಲ್ಲಿ ಸರಿಸಮಾನ ಸ್ಥಾನಮಾನ ದೊರೆಯಬೇಕೆನ್ನುವುದು ಇವರ ಆಶಯವಾಗಿತ್ತು. ಕಾಯಕವೇ ಕೈಲಾಸವೆಂಬ ಶರಣ ತತ್ವದಲ್ಲಿ ಇವರಿಗೆ ಅಪಾರ ನಂಬಿಕೆ ಇತ್ತು, ಅಸ್ಪೃಶ್ಯತೆಯನ್ನು ಸಮಾಜದಿಂದ ಬೇರು ಸಮೇತ ಕಿತ್ತು ಹಾಕಬೇಕೆಂಬುದು ಅವರ ಚಳುವಳಿಯ ಮುಖ್ಯ ಉದ್ದೇಶವಾಗಿತ್ತು. ಜನತೆಯ ಕಲ್ಯಾಣದ ಕನಸು ಕಂಡ ನಿರಂಜನ ಶರಣ. ಸಂಘಟನಾ ಪಿತಾಮಹ ಹರ್ಡೇಕರ ಮಂಜಪ್ಪನವರು 1947 ಜನವರಿ 3 ರಂದು ಲಿಂಗೈಕ್ಯರಾದರು.

**ಹರ್ಡೇಕರ ಮಂಜಪ್ಪನವರ ಸ್ಮಾರಕ ಭವನ ನಿರ್ಮಾಣ :**

ನಾಡಿನ ಜನತೆ ಸಹಕಾರದೊಂದಿಗೆ 1997ರಲ್ಲಿ ಕೃಷ್ಣಾ ನದಿಯಲ್ಲಿ ಮುಳುಗಡೆಯಾಗಿದ್ದ ಮಂಜಪ್ಪನವರ ಸಮಾಧಿಯನ್ನು ವಿಧಿವತ್ತಾಗಿ ಆಲಮಟ್ಟಿಯ ಎಂ. ಎಚ್.ಎಂ. ಕಾಲೇಜಿನ ಹಿಂಭಾಗದಲ್ಲಿ ಡಾ॥ ತೋಂಟದ ಸಿದ್ಧಲಿಂಗ ಸ್ವಾಮೀಜಿಯವರ ಸ್ವಾಧೀನದಲ್ಲಿರುವ ಭೂಮಿಗೆ ಸ್ಥಳಾಂತರಿಸಲಾಯಿತು. ಆ ಸ್ಥಳದಲ್ಲಿ ಸ್ಮಾರಕ ಭವನ ನಿರ್ಮಿಸಲು ಸರ್ಕಾರದಿಂದ ಒಂದು ಕೋಟಿ ರೂಪಾಯಿ ಬಿಡುಗಡೆಯಾಯಿತು. ಆ ಹಣವನ್ನು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಿಂದ ಬಿಡುಗಡೆಗೊಳಿಸಿ ನಿರ್ಮಾಣ ಪ್ರಕ್ರಿಯೆಗೆ ಮುಂದಾಯಿತು. ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೂ ಸ್ಮಾರಕ ನಿರ್ಮಾಣಕ್ಕೆ 50 ಲಕ್ಷ ರೂಗಳನ್ನು ಬಿಡುಗಡೆಗೊಳಿಸಲಾಯಿತು. ಆ ಭಾಗದ ಜನಪ್ರತಿನಿಧಿಗಳ ಸಹಕಾರದೊಂದಿಗೆ ಒಟ್ಟು ಒಂದೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ಭವ್ಯವಾದ ಸುಂದರವಾದ ಮನಸೂರೆಗೊಳ್ಳುವ ರೀತಿಯಲ್ಲಿ ಸ್ಮಾರಕಭವನ ನಿರ್ಮಾಣಗೊಂಡಿದೆ. ಆಗಿನ ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ವಿಶೇಷ ಐ.ಎ.ಎಸ್. ಅಧಿಕಾರಿಯಾಗಿದ್ದ ಡಾ॥ ಎಸ್. ಎಂ. ಜಾಮದಾರ ಅವರ ಪರಿಕಲ್ಪನೆಯಲ್ಲಿ ಸ್ಮಾರಕಭವನವನ್ನು ನಿರ್ಮಿಸಲಾಗಿದೆ. ಹಾಗೆಯೇ ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಎಡೆಯೂರ ಸಂಸ್ಥಾನಮಠ ಡಂಬಳ ಗದಗ ಇವರ ಪರಿಶ್ರಮ ಅಷ್ಟೆ ಮುಖ್ಯವಾದದ್ದಾಗಿದೆ. ಸ್ಮಾರಕದ ಮುಂದುಗಡೆ ಆವರಣದಲ್ಲಿ ಕೃಷ್ಣ ಭಾಗ್ಯ ಜಲ ನಿಗಮದ ವತಿಯಿಂದ ಸುಂದರವಾದ ಉದ್ಯಾನವನ, ಸ್ಮಾರಕಕ್ಕೆ ಸಂಪರ್ಕ ಕಲ್ಪಿಸಲು ರಸ್ತೆ ನಿರ್ಮಾಣಗೊಂಡಿದೆ. ಈಗಾಗಲೇ 2-07-2016 ರಂದು ಹರ್ಡೇಕರ ಮಂಜಪ್ಪನವರ ಸ್ಮಾರಕ ಲೋಕಾರ್ಪಣೆಗೊಂಡಿದೆ. ಇದು ಈ ಭಾಗದ ಜನರಿಗೆ ಹೆಮ್ಮೆಯ ಗರಿ ಮೂಡಿಸಿದೆ.

ಫೆಬ್ರವರಿ 18 ರಂದು ಪ್ರತಿವರ್ಷ ಹರ್ಡೇಕರ ಮಂಜಪ್ಪನವರ ಜನ್ಮದಿನಾಚರಣೆಯನ್ನು ಆಲಮಟ್ಟಿಯ ಹರ್ಡೇಕರ ಮಂಜಪ್ಪ ಸ್ಮಾರಕ ಭವನದಲ್ಲಿ ಆಚರಿಸಲಾಗುತ್ತದೆ. ಮಂಜಪ್ಪನವರ ಆದರ್ಶ ನೀತಿ ತತ್ವಗಳನ್ನು ಜೀವನದಲ್ಲಿ ರೂಢಿಸಿ ಕೊಂಡಾಗ ಈ ಜಯಂತಿಗೆ ವಿಶೇಷ ಮೆರಗು ಬರುತ್ತದೆ.






downloaded from: www.kpscvaani.com

ಧರ್ಮಸ್ಥಳದ ಬಾಹುಬಲಿಗೆ

# ಮಹಾಮಸ್ತಕಾಭಿಷೇಕ ಸಂಭ್ರಮ

ಎಂ. ಎಸ್. ಸುಂದರ್‌ಕುಮಾರ್
ಮದ್ದೂರು



ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಫೆಬ್ರವರಿ 9 ರಿಂದ 19 ರವರೆಗೆ ಮಹಾಮಸ್ತಕಾಭಿಷೇಕ ಮಹೋತ್ಸವ ಜರುಗಳಿದೆ. ಫೆಬ್ರವರಿ 9 ರಂದು ಶ್ರೀ ಪದ್ಮಾವತಿ ಅಮ್ಮ ಭಗವಾನ್ ಶ್ರೀ ಚಂದ್ರನಾಥ ಸ್ವಾಮಿ ತೀರ್ಥಂಕರರಿಗೆ ಪಂಚಾಮೃತ ಅಭಿಷೇಕ, ಮಹಾಪೂಜೆ ನಂತರ ಶ್ರೀ ಮಂಜುನಾಥ ಸ್ವಾಮಿಗೆ ಮಹಾಪೂಜೆ ನಂತರ ಶ್ರೀ ಚಂದ್ರನಾಥ ಸ್ವಾಮಿ ಬಸದಿಯಿಂದ ರತ್ನಗಿರಿಗೆ ಅಗ್ರೋದಕ ಮೆರವಣಿಗೆ ನಡೆದು ರತ್ನಗಿರಿಯ ಬಾಹುಬಲಿ ಬೆಟ್ಟದಲ್ಲಿ ಇಂದ್ರ ಪ್ರತಿಷ್ಠೆ 2019 ಫೆಬ್ರವರಿಯಲ್ಲಿ 8 ದಿನಗಳ ಕಾಲ ಮಹಾಮಜ್ಜನದ ಕಾರ್ಯಕ್ರಮ ವೈಭವದಿಂದ ನೆಡಯಲಿದ್ದು, ನೋಡಲು ಬಲುಚಂದವಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಾಹುಬಲಿ ಶಿಲ್ಪಗಳು ಪ್ರಪಂಚದ ವಾಸ್ತುಶಿಲ್ಪಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಕರ್ನಾಟಕದಲ್ಲಿರುವ 8 ವಿಗ್ರಹಗಳಲ್ಲಿ 3 ವಿಗ್ರಹಗಳು ತುಳುನಾಡಿನಲ್ಲಿದೆ. ತುಳುನಾಡಿನ ಶಿಲ್ಪ ಪರಂಪರೆಗೆ ಕ್ರಿ.ಶ. 432 ವೀಪಾಂಡ್ಯನು ಕಾರ್ಕಳದಲ್ಲಿ 42 ಅಡಿ ಪ್ರತಿಮೆ ಪ್ರತಿಷ್ಠಾಪಿಸಿದ್ದಾರೆ, ಇತ್ತ ವೇಣೂರಿನ ಅಜಿಲ ಸೀಮೆಯ ಅರಸರಾದ ತಿಮ್ಮಣ್ಣ ಕ್ರಿ.ಶ 1633 ರಲ್ಲಿ ಜನಶಕ್ತಿ ದ್ಯೋತಕರಾಗಿ ಸುಮಾರು 35 ಅಡಿ ಎತ್ತರದ ಗೊಮ್ಮಟ ಮೂರ್ತಿಯನ್ನು ಪ್ರತಿಷ್ಠಾಪಿಸಿರುತ್ತಾರೆ. ಅದರಲ್ಲಿ ಮೂರನೇ ಪ್ರತಿಮೆಯೇ ಧರ್ಮಸ್ಥಳದ 39 ಅಡಿ ಎತ್ತರದ ಬಾಹುಬಲಿ ಮೂರ್ತಿ.

## ಧರ್ಮಸ್ಥಳದಲ್ಲಿ ಬಾಹುಬಲಿ ವಿಗ್ರಹ ಸ್ಥಾಪನೆ

1955 ರಿಂದ 1968 ರವರೆಗೆ ಶ್ರೀ. ರತ್ನವರ್ಮ ಹೆಗ್ಗಡೆಯವರು ಪಟ್ಟದಲ್ಲಿದ್ದರು. ಶ್ರೀ ಕ್ಷೇತ್ರದ ಐತಿಹಾಸದಲ್ಲಿ ಇವರನ್ನು ಸುವರ್ಣಯುಗದ ಹರಿಕಾರರೆಂದು ಪರಿಗಣಿಸಲಾಗಿದೆ.

ಇವರು ಬಾಹ್ಯರೂಪದ ಕಡೆಗೆ ಗಮನವಿತ್ತರು. ಚಿಕ್ಕ ಗ್ರಾಮವಾದ ಕುಡುಮ ಧರ್ಮಸ್ಥಳವನ್ನು ಅಭಿವೃದ್ಧಿ ಪಡಿಸುವ ಕಡೆ ನಮವಿತ್ತರು. ಇದಕ್ಕೆಲ್ಲ ಮೂಲ ಕಾರಣ ಮೂಡಬಿದ್ರೆಯ ಮಾತೃಶ್ರೀ ರತ್ನಮ್ಮ ಹೆಗ್ಗಡೆ. ಅಮ್ಮನವರ ಆಸೆಯಂತೆ ಶ್ರೀ ರತ್ನವರ್ಮ ಹೆಗ್ಗಡೆಯವರು ಕಾರ್ಕಳ, ಶ್ರವಣ ಬೆಳಗೊಳ, ಮತ್ತು ವೇಣೂರಿನ ಬಾಹುಬಲಿ ವಿಗ್ರಹಗಳನ್ನು ನೋಡಿ ಧರ್ಮಸ್ಥಳದ ರತ್ನಗಿರಿ ಬೆಟ್ಟದಲ್ಲಿ ಬಾಹುಬಲಿಯನ್ನು ನಿರ್ಮಿಸಲು ಪ್ರಥಮ ಹೆಜ್ಜೆಯನ್ನಿಟ್ಟರು. ಅದರಂತೆ 1956 ರಲ್ಲಿ ಸುಪ್ರಸಿದ್ಧ ಮೂರ್ತಿ ಶಿಲ್ಪಿ ಕಾರ್ಕಳದ ರಂಜಾಳ ಗೋಪಾಲ ಶೆಣೈ ರವರ ನೇತೃತ್ವದಲ್ಲಿ ಕಾರ್ಕಳದ ಮಂಗಳಪಾದೆಯಲ್ಲಿ 39 ಅಡಿ ಎತ್ತರ ಮತ್ತು 13 ಅಡಿ ಪೀಠದ ಬಾಹುಬಲಿ ಮೂರ್ತಿಯನ್ನು ತಯಾರಿಸಲು ಆದೇಶಿಸಿದರು. 1970 ರಲ್ಲಿ ಮೂರ್ತಿಯು ಪೂರ್ಣಗೊಂಡಿತು. ಶಿಲ್ಪಿ ಶೆಣೈಯವರು ಎಷ್ಟು ನಿಷ್ಠೆಯನ್ನು ಇಟ್ಟುಕೊಂಡಿದ್ದರು ಎಂದರೆ, ಬಾಹುಬಲಿ ವಿಗ್ರಹ ಪೂರ್ಣಗೊಳಿಸುವ ತನಕ ಉಪ್ಪನ್ನು ತಿನ್ನುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿದ್ದರು. ಅದರಂತೆ ನಡೆದುಕೊಂಡಿದ್ದರು ಕೂಡ. 170 ಟನ್ ಭಾರದ ಮೂರ್ತಿಯನ್ನು ಪೂಜ್ಯ ವೀರೇಂದ್ರ ಹೆಗಡೆಯವರು 64 ಗಾಲಿಗಳಿರುವ ಟ್ರಾಲಿಯ ಮೇಲೆ ವಿಗ್ರಹವನ್ನು ಇರಿಸಿ 250 ಅಶ್ವ ಶಕ್ತಿಯ ಮೂರು ವಾಹನದ ಮೂಲಕ ಮೂಡುಬಿದ್ರೆ ವೇಣೂರು, ಬೆಳ್ತಂಗಡಿ ಉಜಿರೆ ಮಾರ್ಗವಾಗಿ ಜನರ ಸಡಗರ, ಸಂಭ್ರಮ, ಉತ್ಸಾಹದ ನಡುವೆ ಧರ್ಮಸ್ಥಳಕ್ಕೆ ವಿಗ್ರಹವನ್ನು ತರಿಸಿಕೊಂಡರು. 1972 ನೇ ಡಿಸೆಂಬರ್ 25 ರಂದು ವಿಗ್ರಹವು ಧರ್ಮಸ್ಥಳದ ರತ್ನಗಿರಿ ಬೆಟ್ಟಕ್ಕೆ ತಲುಪಿತು. 1982 ರಲ್ಲಿ ಫೆಬ್ರವರಿ 3 ರಂದು ಬಾಹುಬಲಿ ಮೂರ್ತಿಯ ಪ್ರತಿಷ್ಠಾಪನೆಯಾಯಿತು. ನಂತರ 1995 ರಲ್ಲಿ ಡಾ॥ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ದ್ವಿತೀಯ ಮಸ್ತಕಾಭಿಷೇಕ ನಡೆಯಿತು. ನಂತರ 2007 ರಲ್ಲಿ ತೃತೀಯ ಮಸ್ತಕಾಭಿಷೇಕ ನಡೆಸಲಾಯಿತು. ಇದೀಗ 2019 ನೇ ಫೆಬ್ರವರಿ 09 ರಿಂದ 18 ರವರೆಗೆ ಧರ್ಮಸ್ಥಳದ ರತ್ನಗಿರಿ ಬೆಟ್ಟದಲ್ಲಿ ಬಾಹುಬಲಿ ಮೂರ್ತಿಗೆ ಮಹಾಮಜ್ಜನ ಕಾರ್ಯಕ್ರಮ ಜರುಗಲಿದೆ. ಹಲವು ಧರ್ಮಗಳ ನೆಲೆವೀಡು ಹಾಗೂ ಸಂಗಮ ಸ್ಥಾನವಾದ ಧರ್ಮಸ್ಥಳ ಧರ್ಮ ಸಾಮರಸ್ಯದ ನೆಲೆವೀಡಾಗಿದೆ. ಜೊತೆಗೆ ಅನೇಕ ಶತಮಾನಗಳಿಂದ ಜೈನ ಬಸದಿ ಅಂದರೆ ಚಂದ್ರನಾಥ ಸ್ವಾಮಿ, ಪದ್ಮಾವತಿ ಅಮ್ಮ, ಡಾ॥ ವೀರೇಂದ್ರ ಹೆಗ್ಗಡೆಯವರು. ಇಂದಿನ ಮೂಲ ಸ್ವರೂಪದಂತೆ ನವೀಕರಿಸಿ ನೋಡಿದರೆ ಕಣ್ಣಿಗೆ ಒಂದು ಹಬ್ಬವಾಗಿರುತ್ತದೆ.



ಈ ಕಾಲಮಾನದ ಕೊನೆಯದಾದ 39 ಅಡಿ ಎತ್ತರದ ಬಾಹುಬಲಿ ಸ್ವಾಮಿಗೆ ಇದೀಗ ಕಲಿಯುಗದ ಚಾಮುಂಡರಾಯ ಎಂಬ ಬಿರುದಾಂಕಿತವಾದ ಶ್ರೀ. ವೀರೇಂದ್ರ ಹೆಗ್ಗಡೆ ಅವರಿಂದ ನಡೆಯಲಿದೆ. ಆದರೂ ಹೆಗ್ಗಡೆಯವರು ಜೈನವಂಶ ಪಾರಂಪರಿಕವಾಗಿ, ಧರ್ಮಸ್ಥಳದ ಧರ್ಮಾಧಿಕಾರಿಯಾಗಿ ಪೀಠವನ್ನು ಅಲಂಕರಿಸಿ ದೇಶ- ವಿದೇಶಗಳಲ್ಲಿ ಹೆಸರುವಾಸಿಯಾಗಿದ್ದಾರೆ. ಎಲ್ಲರನ್ನು ಸಮಾನ ಭಾವದಿಂದ ನೋಡುವ ಉದ್ದೇಶ ಧರ್ಮಸ್ಥಳದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಆದರೆ ಧರ್ಮಸ್ಥಳವು ಶೈವ, ಜೈನ, ವೈಷ್ಣವ ಸಂಪ್ರದಾಯಗಳ ಸಂಗಮ ಕ್ಷೇತ್ರ ಪಾಲನೆಗಾಗಿ ಅಣ್ಣಪ್ಪ ಸ್ವಾಮಿ ಹಾಗೂ ಪವಿತ್ರವಾಗಿ ಹರಿಯುವ ನೇತ್ರಾವತಿ ನದಿ ಪ್ರವಾಸಿಗರ ಕಣ್ಮನ ಸೆಳೆಯುತ್ತದೆ.

ಆರಾಧನೆಯಲ್ಲಿ ಅಭಿಷೇಕವು ಮಹತ್ವದ ಕ್ರಿಯೆ. ಹೆಚ್ಚಾಗಿ ಎಲ್ಲಾ ದೇವಸ್ಥಾನ ಮಂದಿರಗಳಲ್ಲಿ ನಿತ್ಯ ದೇವರ ಮೂರ್ತಿಗಳಿಗೆ ಅಭಿಷೇಕ ಇರುತ್ತದೆ. ಒಂದು ನಿರ್ದಿಷ್ಟ ಅವಧಿಯಲ್ಲಿ ಮಾಡಿಸುವ ಪರಂಪರೆಯೂ ಇದೆ. ಜಿನೇಂದ್ರ ಭಗವಂತನ ಅಭಿಷೇಕ ಮೂಲಕ ಲೋಕಕಲ್ಯಾಣದ ಭಾವನೆ ಹುದುಗಿರುತ್ತದೆ. ವಿಶ್ವ ಶಾಂತಿಯ ಉದ್ದೇಶದಿಂದ ನಡೆಯುತ್ತದೆ. ಶ್ರವಣಬೆಳಗೋಳ, ಕಾರ್ಕಳ, ಧರ್ಮಸ್ಥಳ ದೊಡ್ಡ ಬಾಹುಬಲಿ, ದೊಡ್ಡ





downloaded from: www.kpscvaani.com



# ಮಹಾತ್ಮಾಗಾಂಧಿ 150ರ ಸ್ಮರಣೆಯಲ್ಲಿ ಮಿಂದೆದ್ದ ಚಿತ್ರಸಂತೆ

ನವಿಕ

ಸಾವಿರ ಪದಗಳಲ್ಲಿ ಹೇಳಲಾಗದ್ದನ್ನು ಒಂದು ಚಿತ್ರ ಹೇಳಬಿಡುತ್ತೆ... ಬಹುಶಃ ಆ ಸಂತೆ ನೋಡಿದ ಎಲ್ಲಾ ಚಿತ್ರ ಪ್ರೇಮಿಗಳಿಗೂ, ಚಿತ್ರಕಲೆಯ ಆರಾಧಕರಿಗೂ ಹೀಗೆ ಅನ್ನಿಸಿಯೇ ಇರುತ್ತೆ, ಅಲ್ಲಿ ಕಂಡಿದ್ದು ಲಕ್ಷಗಳ ಸಂಖ್ಯೆಯಲ್ಲಿ ಆರ್ಟ್ ಲವ್ವರ್ಸ್, ಸಾವಿರಾರು ಚಿತ್ರಗಳ ಫ್ರೇಮ್‌ಗಳು.. ಇಂಥದ್ದಕ್ಕೆ ಸಾಕ್ಷಿಯಾಗಿದ್ದು ಸಿಲಿಕಾನ್ ಸಿಟಿಯ ಕರ್ನಾಟಕ ಚಿತ್ರಕಲಾ ಪರಿಷತ್ ಆವರಣ.

ಸಾಮಾನ್ಯಕ್ಕೆ ಪ್ರತಿ ಬಾರಿಯೂ ಹೊಸ ವರ್ಷವನ್ನು ಸಿಲಿಕಾನ್ ಸಿಟಿ ಸ್ವಾಗತಿಸೋದು ಇದೇ ಚಿತ್ರಸಂತೆಯ ಮೂಲಕವೇ ಅನ್ನಿಸುತ್ತೆ. ಆದರಲ್ಲೂ ಜನವರಿಯ ಮೊದಲ



ಭಾನುವಾರ ಅಂದ್ರೆ ಚಿತ್ರಪ್ರೇಮಿಗಳಿಗೆ ಹಬ್ಬದ ಸಡಗರ. ಆ ದಿನ ಕುಮಾರಕೃಪ ಗೆಸ್ಟ್ ಹೌಸ್ ರೋಡ್ ಫುಲ್ ಬಂದ್ ಆಗುತ್ತೆ, ಅವತ್ತು ಅಲ್ಲಿ ವಾಹನಗಳ ಓಡಾಟಕ್ಕೂ ಬ್ರೇಕ್.. ಆ ಇಡೀ ರಸ್ತೆಯಲ್ಲಿ ಚಿತ್ರಪ್ರೇಮಿಗಳದ್ದೇ ಕಾರುಬಾರು. ವಿಶಿಷ್ಟವಾದ ಸ್ಥಳದಲ್ಲಿ ವಿನೂತನವಾದ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಮೂಲಕ ಎಲ್ಲರನ್ನೂ ಆಕರ್ಷಿಸುವ ನಿಟ್ಟಿನಲ್ಲಿ ಚಿತ್ರಕಲಾ ಪರಿಷತ್‌ನ ಪ್ರಯತ್ನ ಮಾತ್ರ ವಿಭಿನ್ನವಾಗಿರುತ್ತೆ. ಆದರಲ್ಲೂ ರಜಾ ದಿನಗಳಲ್ಲಿ ಇದ್ದರೆ ಮನೆ ಮಂದಿಯೆಲ್ಲಾ ಒಂದು ಸುತ್ತು ಬಂದು ವೀಕ್ಷಿಸಿ ಆ ನೆನಪುಗಳನ್ನು ಖರೀದಿಸಿಕೊಂಡು ಹೋಗುವ ಜನರಿಗೆ ಕಡಿಮೆಯೇನಿಲ್ಲ ಅಂಥ ಅನ್ನಿಸಿತು. ಅಲ್ಲದೇ ಆಯೋಜಿಸುವ ಕಾರ್ಯಕ್ರಮದಲ್ಲಿ ಹೊಸತನ, ವಿಭಿನ್ನತೆ ಇದ್ದರೆ, ತಾವಾಗಿಯೇ ಜನರು ಬರ್ತಾರೆ ಅನ್ನೋದಕ್ಕೆ ಚಿತ್ರಸಂತೆಯೇ ಸಾಕ್ಷಿಯಾಗಿದೆ. ಇಂಥ ವಿಭಿನ್ನ ಕಲಾ ಜಾತ್ರೆಗೆ ಪ್ರತಿವರ್ಷದಂತೆ ಈ ವರ್ಷವೂ ಕರ್ನಾಟಕ ಚಿತ್ರಕಲಾ ಪರಿಷತ್ತು ಮದುವಣಗಿತ್ತಿಯಂತೆ ಸಿಂಗಾರಗೊಂಡಿತ್ತು.



**16 ನೇ ಸಂತೆಯ ವೈಶಿಷ್ಟ್ಯ..!**

ಈ ಬಾರಿ ನಡೆದಿದ್ದು 16ನೇ ಚಿತ್ರಸಂತೆ.. ಕಳೆದ ಒಂದೂವರೆ ದಶಕದಿಂದ ಯಶಸ್ವಿಯಾಗಿ ಚಿತ್ರಕಲಾ ಪರಿಷತ್ತು ಈ ಸಂತೆಯನ್ನು ನಡೆಸಿಕೊಂಡು ಬರುತ್ತಿದೆ. 'ಎಲ್ಲರಿಗಾಗಿ ಕಲೆ' ಅನ್ನೋ ಧ್ಯೇಯವಾಕ್ಯ ಈ ಬಾರಿ ಚಿತ್ರಸಂತೆಯದ್ದಾಗಿತ್ತು.. 1960 ರಲ್ಲಿ ಪ್ರಾರಂಭಗೊಂಡು ರಾಷ್ಟ್ರೀಯ ದೃಶ್ಯ ಕಲೆಗೆ ಸಾಕಷ್ಟು ಕಲಾವಿದರನ್ನು, ಕಲಾ ವಿಮರ್ಶಕರನ್ನು ಈ ಸಂತೆ ನೀಡುತ್ತಾ ಬಂದಿದೆ. ಇಂತಹ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದರ ಜೊತೆಗೆ ಕಲೆಯನ್ನು ಪ್ರೋತ್ಸಾಹಿಸಲು ಈ ಚಿತ್ರಸಂತೆ ಅವಶ್ಯಕ ಅನ್ನೋದು ಚಿತ್ರ ಪ್ರೇಮಿಗಳ ಮಾತು. 2003 ರಲ್ಲಿ ಆರಂಭವಾದ ಚಿತ್ರಸಂತೆ ಸತತ 15 ಬಾರಿ ಯಶಸ್ವಿಯಾಗಿ ನಡೆದಿದೆ.

16ನೇ ವರ್ಷ ನಡೆದ ಇಂಥ ಚಿತ್ರಸಂತೆಗೆ ಭಾರೀ ಮನ್ನಣೆ ಮತ್ತು ಯಶಸ್ಸು ಸಿಕ್ಕಿದೆ. ಸಣ್ಣ ಮಗುವಿನಿಂದ ಹಿಡಿದು ವಯೋವೃದ್ಧರವರೆಗೂ ಸಂತೆ ಆಕರ್ಷಿಸಿತು. ರಸ್ತೆಯ ಇಕ್ಕೆಲಗಳ ಫೋಟೋಗಳಲ್ಲಿ ಇಣುಕುತ್ತಿದ್ದ ಚಿತ್ರಗಳು ಎಲ್ಲರನ್ನು ಕೈಬೀಸಿ ಕರೆದಿದ್ದು ಸುಳ್ಳಲ್ಲ.. 100 ರೂಪಾಯಿಯಿಂದ ಹಿಡಿದು ಒಂದು ಲಕ್ಷ ರೂಪಾಯಿ ತನಕ ಇದ್ದ ಕಲಾಕೃತಿಗಳು ಆಸಕ್ತರ, ಕಲೋಪಾಸಕರ ಮನೆ ಸೇರಿದ್ದು ಕೂಡ ಒಂದು ವಿಶೇಷ. ಹೆಚ್ಚು ಕಡಿಮೆ ಈ ಬಾರಿಯ ಚಿತ್ರಸಂತೆಯಲ್ಲಿ ಸುಮಾರು 2 ಲಕ್ಷ ಮಂದಿ ಸೇರಿದ್ದರು. ಇನ್ನು ಸುಮಾರು 2 ಸಾವಿರ ಮಂದಿ ಕಲಾವಿದರು ತಾವು ರಚಿಸಿದ ಕಲಾಕೃತಿಗಳನ್ನು ಪ್ರದರ್ಶನ ಮಾಡುವುದರ ಜೊತೆಗೆ ಮಾರಾಟ ಕೂಡ ಮಾಡಿದ್ರು.

ದೇಶದ ಮೂಲೆ ಮೂಲೆಯಲ್ಲಿರುವ ಪ್ರಚಾರವಿಲ್ಲದ ಕಲಾವಿದರನ್ನು ಒಂದೇ ಸೂರಿನಡಿ ಸೇರಿಸಿ ಕಲಾ ಜಗತ್ತಿಗೆ ಅವರನ್ನು ಪರಿಚಯಿಸುವುದು ಈ ಸಂತೆಯ ಉದ್ದೇಶ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಒರಿಸ್ಸಾ, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ ಸೇರಿದಂತೆ ಹಲವಾರು ರಾಜ್ಯಗಳ ಕಲಾವಿದರು ಇಲ್ಲಿ ಬಂದು ಕಲಾ ಪ್ರದರ್ಶನ ಮಾಡಿದ್ರು, ಚಿತ್ರಕಲಾ ಪರಿಷತ್ತಿನ ಮುಂಭಾಗದ ರಸ್ತೆ, ಚಿತ್ರಗಳ ಚಿತ್ತಾರದಿಂದ ಕಂಗೊಳಿಸಿತ್ತು. ಇನ್ನು ಪರಿಷತ್ತಿನ ಆವರಣವು ಕಲಾವಿದರ ಬಣ್ಣ ಬಣ್ಣದ ಚಿತ್ರದಿಂದ ಕಂಗೊಳಿಸಿತ್ತು.

ಈ ಚಿತ್ರ ಸಂತೆಯಲ್ಲಿ ಸಾಂಪ್ರದಾಯಿಕ ಮೈಸೂರು ಶೈಲಿ, ತಾಂಜಾವೂರು ಶೈಲಿ, ರಾಜಸ್ಥಾನ, ಮಧು ಬನಿಯಾಶೈಲಿ, ತೈಲ ಮತ್ತು ಜಲವರ್ಣಗಳಲ್ಲಿ ರಚಿಸಿರುವ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾದವು. ಇವಲ್ಲದೇ ಅಕ್ರಲಿಕ್, ಗಾಜಿನ ಮೇಲೆ ಬಿಡಿಸಿರುವ ಚಿತ್ರಗಳು, ಕೋಲಾಜ್, ಲಿಥೋಗ್ರಾಫ್ ಮತ್ತು ಎಂಬೋಸಿಂಗ್ ಮಾಧ್ಯಮಗಳಲ್ಲಿಯೂ ಕಲಾಕೃತಿಗಳು ಇದ್ದವು. ಜೊತೆಗೆ ವರ್ಣಲೋಕದ ಆಸಕ್ತರ ಭಾವಚಿತ್ರಗಳನ್ನು ಕಲಾವಿದರು ವೀಕ್ಷಕರ ಮುಂದೆಯೇ ಕೆಲವೇ ನಿಮಿಷಗಳಲ್ಲಿ ತಮ್ಮ ಕುಂಚದಿಂದ ಬಿಡಿಸಿಕೊಟ್ಟಿದ್ದು ಆಕರ್ಷಕವಾಗಿತ್ತು.

**ಸಂತೆಯಲ್ಲಿ ಗಾಂಧಿ..!**

ಈ ಬಾರಿ ಚಿತ್ರಸಂತೆಯ ಪ್ರಮುಖ ಆಕರ್ಷಣೆ ರಾಷ್ಟ್ರಪಿತ ಮಹಾತ್ಮಾಗಾಂಧಿ... ಗಾಂಧೀಜಿಯವರ 150ನೇ ಜನ್ಮದಿನೋತ್ಸವದ ಅಂಗವಾಗಿ ವಿಭಿನ್ನ ರೀತಿಯ ಸಂದೇಶ ಕೊಡುವ ನಿಟ್ಟಿನಲ್ಲಿ ಈ ವರ್ಷ ಸಂಪೂರ್ಣ ಗಾಂಧೀಜಿಯವರ ಆದರ್ಶಗಳು, ಗುರಿ, ಜೀವನ, ಸಾಧನೆ ಎಲ್ಲವನ್ನು ಛಾಯಾಚಿತ್ರಗಳ ಮೂಲಕ ಬಿಂಬಿಸಿದ್ದು ವಿಶೇಷ. ಇಲ್ಲಿ ಗಾಂಧೀಜಿಯವರು ಬಾಲ್ಯದಿಂದ ಹಿಡಿದು ಅವರ ಸಂಪೂರ್ಣ ಜೀವನ, ಸಾಧನೆ ಎಲ್ಲವನ್ನೂ ಒಂದೇ ಕಡೆ ವೀಕ್ಷಿಸಲು ಕೂಡ







downloaded from: www.kpscvaani.com

ಮನ ಪರಿವರ್ತನಾ ಕೇಂದ್ರವಾದ

# ಚಿತ್ರದುರ್ಗ ಜಿಲ್ಲಾ ಕಾರಾಗೃಹ




**ತುಕಾರಾಂರಾವ್ ಬಿ.ವಿ.**
ವಾರ್ತಾ ಸಹಾಯಕರು

**ಕೆ**ಟ್ಟ ಸಮಯದಲ್ಲಿ, ಆ ಕ್ಷಣದ ಒತ್ತಡಕ್ಕೆ ಸಿಲುಕಿ, ಸಿಟ್ಟಿನ ಕೈಗೆ ಬುದ್ಧಿ ಕೊಟ್ಟು ಅಪರಾಧ ಎಸಗುವವರು, ಜೈಲು ಪಾಲಾದಾಗ, ಅವರ ಮನಸ್ಸಿನ ಮೇಲೆ ಉಂಟಾಗುವ ಮಾನಸಿಕ ತುಮುಲತೆ, ಇಡೀ ಕುಟುಂಬಕ್ಕಾಗುವ ಅವಮಾನ, ನಂತರ ಪಶ್ಚಾತ್ತಾಪ ಪಡುವ ಅಪರಾಧಿಗಳಿಗೆ ಜೈಲು ಎಂಬುವುದು ಬರೀ ಶಿಕ್ಷೆ ಅನುಭವಿಸುವ, ಇನ್ನಷ್ಟು ಅಪರಾಧಕ್ಕೆ ಉತ್ತೇಜನ ನೀಡುವ ಕೇಂದ್ರಗಳಾಗದೆ, ಮನ ಪರಿವರ್ತನಾ ಕೇಂದ್ರವಾದಲ್ಲಿ ಎಷ್ಟು ಚೆನ್ನ. ಚಿತ್ರದುರ್ಗ ಜಿಲ್ಲಾ ಕಾರಾಗೃಹ ಇದೀಗ ಇಂತಹ ಕಾರ್ಯ ಮಾಡುತ್ತಿದ್ದು, ಇಂತಹ ಸುಧಾರಣಾ ಕ್ರಮಗಳಿಂದಾಗಿಯೇ ದಕ್ಷಿಣ ಭಾರತದಲ್ಲಿಯೇ ಅತ್ಯುತ್ತಮ ಜಿಲ್ಲಾ ಕಾರಾಗೃಹ ಎಂಬ ಪ್ರಶಸ್ತಿಗೆ ಪಾತ್ರವಾಗಿದೆ.

ತಮಿಳುನಾಡಿನ ವೆಲ್ಲೂರ್‌ನಲ್ಲಿರುವ ಕಾರಾಗೃಹ ಮತ್ತು ಬಂಧಿಖಾನೆ ಆಡಳಿತ ಅಕಾಡೆಮಿ ವತಿಯಿಂದ ದಕ್ಷಿಣ ಭಾರತದ ಅತ್ಯುತ್ತಮ ಜೈಲುಗಳಿಗೆ ಪ್ರಶಸ್ತಿಯನ್ನು ಕೊಡ ಮಾಡುತ್ತಿದ್ದು, ಈ ಬಾರಿಯ ಅತ್ಯುತ್ತಮ ಜಿಲ್ಲಾ ಕಾರಾಗೃಹ ಪ್ರಶಸ್ತಿಗೆ ಚಿತ್ರದುರ್ಗದ ಜಿಲ್ಲಾ ಕಾರಾಗೃಹ ಭಾಜನವಾಗಿದೆ. ಉಳಿದಂತೆ ಅಕಾಡೆಮಿಯಿಂದ ಪ್ರಕಟವಾಗಿರುವ ಪ್ರಶಸ್ತಿ ವಿವರ ಇಂತಿದೆ. ಹೈದ್ರಾಬಾದ್‌ನ ಕೇಂದ್ರ ಕಾರಾಗೃಹಕ್ಕೆ ಅತ್ಯುತ್ತಮ ಕೇಂದ್ರ ಕಾರಾಗೃಹ ಪ್ರಶಸ್ತಿ. ತೆಲಂಗಾಣದ ಚೆರ್ಲಪಲ್ಲಿಯಲ್ಲಿರುವ ಬಂಧಿ ನಿವಾಸಿಗಳ ಕೃಷಿ ಕಾಲೋನಿಯ ತೆರೆದ ಕಾರಾಗೃಹಕ್ಕೆ ಅತ್ಯುತ್ತಮ ತೆರೆದ ಕಾರಾಗೃಹ ಪ್ರಶಸ್ತಿ. ಕೇರಳದ ತಿರುವನಂತಪುರಂನ ಮಹಿಳಾ ಕಾರಾಗೃಹಕ್ಕೆ ಅತ್ಯುತ್ತಮ ಮಹಿಳಾ ಕಾರಾಗೃಹ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿಯ ವಿವರ ಹಾಗೂ ಚಿತ್ರದುರ್ಗದ ಜಿಲ್ಲಾ ಕಾರಾಗೃಹಕ್ಕೆ ಪ್ರಶಸ್ತಿ ಲಭಿಸಿದ ಕುರಿತು ಸಂತಸದಿಂದ ಮಾಹಿತಿ ಹಂಚಿಕೆ ಮಾಡಿಕೊಂಡ ಕಾರಾಗೃಹದ ಅಧೀಕ್ಷಕ ಟಿ.ಕೆ. ಲೋಕೇಶ್ ಅವರು ಹೇಳುವಂತೆ, ನಾವು ಈ ಹಿಂದೆ ಚಾಮರಾಜನಗರ ಹಾಗೂ ಉಳಿದೆಡೆ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಆದ ಅನುಭವಗಳಿಂದಾಗಿ, ಕಾರಾಗೃಹದ ವ್ಯವಸ್ಥೆಯಲ್ಲಿ ಬಹಳಷ್ಟು ಬದಲಾವಣೆ ಹಾಗೂ ಖೈದಿಗಳು ಬಿಡುಗಡೆಯ ಬಳಿಕ ಸಮಾಜದ ಮುಖ್ಯ ವಾಹಿನಿಗೆ ಬಂದು, ನೆಮ್ಮದಿಯುತ ಹಾಗೂ ಗೌರವಯುತ ಬಾಳ್ವೆ ನಡೆಸಲು ಸಾಕಷ್ಟು ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಇಂತಹ ಮಹತ್ವದ ಕಾರ್ಯದಲ್ಲಿ ಇಲಾಖೆಯ ಉನ್ನತ ಅಧಿಕಾರಿಗಳು, ವಿವಿಧ ಸಂಸ್ಥೆಗಳು ನೀಡಿರುವ ಸಹಕಾರವನ್ನು ಮರೆಯುವಂತಿಲ್ಲ.





**ಮನಪರಿವರ್ತನಾ ಕೇಂದ್ರವಾಗಿದೆ ಜೈಲು :**

ಕೆಟ್ಟ ಘಳಿಗೆಯಲ್ಲಿ ಆ ಕ್ಷಣದ ತಪ್ಪಿನಿಂದಾಗಿ ಜೈಲು ಶಿಕ್ಷೆಗೆ ಒಳಗಾದ ಅಪರಾಧಿಗಳ ಮನಸ್ಸು, ಜೈಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಹೆಣಗಾಡುವುದು ಸಹಜ. ಸಿಡಿಮಿಡಿಗೊಳ್ಳುವುದು, ಮಾನಸಿಕ ಖಿನ್ನತೆ ಸೇರಿದಂತೆ ಇತರೆ ಪ್ರಚೋದನಾತ್ಮಕ ಸ್ವಭಾವ ತೋರುತ್ತಾರೆ. ಸತ್ಸಂಗ ಬೋಧನೆ, ಯೋಗದಂತಹ ಚಟುವಟಿಕೆಗಳು ಖಿನ್ನತೆಯನ್ನು ದೂರಮಾಡಿ, ಖೈದಿಗಳಲ್ಲಿ ಮಾನಸಿಕ ಸ್ಥೈರ್ಯ ಮೂಡುವಂತೆ ಮಾಡುತ್ತದೆ. ಹೀಗಾಗಿ ಕಾರಾಗೃಹದಲ್ಲಿ ನಿತ್ಯ ಬೆಳಗ್ಗೆ ಯೋಗ, ಪ್ರಾರ್ಥನೆ ಜೊತೆಗೆ, ಮಾನಸಿಕ ತಜ್ಞರಿಂದ ಸಮಾಲೋಚನೆ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಅನಕ್ಷರಸ್ಥರಾಗಿದ್ದವರಿಗೆ ನಿತ್ಯ ಬೆಳಗ್ಗೆ 8 ರಿಂದ 11 ಗಂಟೆಯವರೆಗೆ ಅಕ್ಷರಭ್ಯಾಸ ನಡೆಯುತ್ತಿದ್ದು, ಇದಕ್ಕಾಗಿಯೇ ಪ್ರತ್ಯೇಕ ಸಂಪನ್ಮೂಲ ವ್ಯಕ್ತಿಯನ್ನು ನೇಮಿಸಲಾಗಿದೆ. ಜೈಲಿಗೆ ಬರುವಾಗ ಹೆಬ್ಬೆಟ್ಟು ಒತ್ತುವವರು, ಜೈಲಿನಿಂದ ಬಿಡುಗಡೆಗೊಂಡು ಹೋಗುವ ವೇಳೆಗೆ ಅಕ್ಷರಭ್ಯಾಸ ಕಲಿತು, ಸಹಿ ಮಾಡುವ ಮಟ್ಟಿಗೆ ಶಿಕ್ಷಣ ನೀಡಲಾಗುತ್ತಿದೆ. ತಮಿಳುನಾಡು, ಆಂಧ್ರಪ್ರದೇಶ ಅಲ್ಲದೆ ನೆರೆಹೊರೆಯ ರಾಜ್ಯಗಳ ಅಪರಾಧಿಗಳೂ ಕೂಡ ಚಿತ್ರದುರ್ಗದ ಕಾರಾಗೃಹದಲ್ಲಿ ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಓದಲು ಹಾಗೂ ಬರೆಯುವುದನ್ನು ಕಲಿತು ಹೋಗಿದ್ದಾರೆ. ಕಾರಾಗೃಹದಲ್ಲಿ ಇದೀಗ ಎರಡು ಹಾಸಿಗೆ ಚಿಕಿತ್ಸಾ ಕೊಠಡಿಯನ್ನು ತೆರೆಯಲಾಗಿದ್ದು, ವಾರಕ್ಕೆ ಎರಡು ಬಾರಿ, ತಜ್ಞ ವೈದ್ಯರುಗಳು ಬಂದು, ಜೈಲುವಾಸಿಗಳ ಆರೋಗ್ಯ ತಪಾಸಣೆ ಕೈಗೊಳ್ಳುವ ವ್ಯವಸ್ಥೆ, ಗುಣಮಟ್ಟದ ಔಷಧಿಗಳು, ಜೊತೆಗೆ, ಕಾರಾಗೃಹಕ್ಕೆಂದೇ ಪ್ರತ್ಯೇಕ ಆಂಬ್ಯುಲನ್ಸ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ನೆರವಿನಿಂದ, ವಕೀಲರುಗಳ ಮೂಲಕ ಬಂಧಿ ನಿವಾಸಿಗಳಿಗೆ ಕಾನೂನಿನ ಅರಿವು ಮತ್ತು ನೆರವು ಒದಗಿಸಲಾಗುತ್ತಿದೆ. ಕಾರಾಗೃಹದಲ್ಲಿನ ಕೊಠಡಿಯೊಂದರಲ್ಲಿ ಖೈದಿಗಳೊಂದಿಗೆ ನ್ಯಾಯಾಲಯ ಪ್ರಕರಣಗಳ ವಿಚಾರಣೆ ಪ್ರಕ್ರಿಯೆಗೆ ಅನುಕೂಲವಾಗುವಂತೆ ವಿಡಿಯೋ ಕಾನ್ಫರೆನ್ಸ್ ನಡೆಸಲು ಸುಸಜ್ಜಿತ ವ್ಯವಸ್ಥೆ ಮಾಡಲಾಗಿದೆ.

**ಉದ್ಯಮ ಶೀಲತಾ ತರಬೇತಿಗೆ ಒತ್ತು :**

ಕಾರಾಗೃಹ ಶಿಕ್ಷೆ ಎಂದರೆ ನಾಲ್ಕು ಗೋಡೆಯೊಳಗಿನ ಸೀಮಿತ ಪ್ರದೇಶದಲ್ಲಿ, ಎಲ್ಲರ ನಿಗಾದಲ್ಲಿ ಬದುಕುವ ವ್ಯವಸ್ಥೆಗೆ ಒಳಪಡುವುದು. ಹೀಗಾಗಿ ಮನಸ್ಸು ವ್ಯಾಕುಲತೆಗೆ ಒಳಗಾಗುವುದು ಸಹಜ. ಇಂತಹ ಮನಸ್ಸಿಗೆ ಆದಷ್ಟು ಧನಾತ್ಮಕ ಅಂಶಗಳತ್ತ, ಸಕ್ರಿಯ ಚಟುವಟಿಕೆಯತ್ತ ತೊಡಗುವಂತೆ ಮಾಡಬೇಕು. ಇಲ್ಲದಿದ್ದಲ್ಲಿ, ಅಪರಾಧ ಮನೋಭಾವದ ಮನಸ್ಸಿಗೆ ದ್ವೇಷ, ಸಿಟ್ಟು, ಸೇಡು ಹೀಗೆ ಬೇರೆ ಕೃತ್ಯಗಳಿಗೆ ಪ್ರಚೋದನೆ ದೊರೆಯುವ ಸಾಧ್ಯತೆಗಳು ಹೆಚ್ಚು. ಅಪರಾಧ ಮನಸ್ಥಿತಿ ತಮ್ಮ ಜೀವನವನ್ನೇ ಕೊನೆಗಾಣಿಸಿಕೊಳ್ಳಲು ಕೂಡ ಪ್ರಚೋದಿಸುವ ಸಾಧ್ಯತೆ ಇರುತ್ತದೆ. ಹೀಗಾಗಿ ಅಪರಾಧಿಗಳ ಮನ ಪರಿವರ್ತನೆ ಮಾಡುವುದು ಅತ್ಯಂತ ಅಗತ್ಯ. ಪುರುಷ ಬಂದಿ ನಿವಾಸಿಗಳಿಗೆ ಕಾರಾಗೃಹದಲ್ಲಿಯೇ ಪಂಪ್‌ಸೆಟ್ ರಿಪೇರಿ, ಟಿ.ವಿ., ಫ್ರಿಜ್, ಮಿಕ್ಸಿ, ವಾಷಿಂಗ್ ಮಷಿನ್ ನಂತಹ ಗೃಹೋಪಯೋಗಿ ಹಾಗೂ ವಿವಿಧ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ದುರಸ್ತಿ ಮಾಡುವ ತರಬೇತಿಯನ್ನು ನೀಡಲಾಗುತ್ತಿದೆ. ಚಿತ್ರದುರ್ಗದ ರುಡ್‌ಸೆಟ್







downloaded from: www.kpscvaani.com



ಸಂಸ್ಥೆ ಇದಕ್ಕಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಒದಗಿಸಿ, ತರಬೇತಿಗೆ ಸಹಕಾರ ನೀಡುತ್ತಿದೆ. ಗರಿಷ್ಠ 3 ತಿಂಗಳ ಅವಧಿಯ ತರಬೇತಿ ಕಾರ್ಯಕ್ರಮ ಕಾರಾಗೃಹದಲ್ಲಿ ನೀಡಲಾಗುತ್ತಿದೆ. ಇಲ್ಲಿ ತರಬೇತಿ ಪಡೆದು, ಜೈಲಿನಿಂದ ಬಿಡುಗಡೆ ಹೊಂದಿರುವ ಅನೇಕರು ಸ್ವಯಂ ಉದ್ಯೋಗದ ಮೂಲಕ ತಮ್ಮ ಹೊಸ ಬದುಕನ್ನು ಕಟ್ಟಿಕೊಂಡಿದ್ದಾರೆ. ಕಾರಾಗೃಹದಲ್ಲಿನ ಸುಮಾರು 3ಎಕರೆ ಪ್ರದೇಶದಲ್ಲಿ ಸುಂದರ ಕೈತೋಟ ನಿರ್ಮಿಸಿದ್ದು, ಇಲ್ಲಿನ ಖೈದಿಗಳೇ ಇದನ್ನು ಆಸಕ್ತಿಯಿಂದ ನಿರ್ವಹಿಸುತ್ತಿದ್ದಾರೆ. ಇಲ್ಲಿ ಎಲ್ಲ ಬಗೆಯ ಸೊಪ್ಪು, ತರಕಾರಿಗಳನ್ನು ಬೆಳೆಯಲಾಗುತ್ತಿದ್ದು, ಕೃಷಿ ಚಟುವಟಿಕೆಯಲ್ಲಿ ಸಕ್ರಿಯವಾಗಿ ಖೈದಿಗಳು ತೊಡಗಿಸಿಕೊಂಡಿದ್ದಾರೆ.

**ಸ್ವಾವಲಂಬಿಗಳಾದ ಮಹಿಳೆಯರು :**

ಅಪರಾಧ ಕೃತ್ಯಗಳಿಗಾಗಿ ಜೈಲು ಸೇರುವ ಮಹಿಳೆಯರು, ಬಿಡುಗಡೆ ಬಳಿಕ, ಸಮಾಜದ ಮುಖ್ಯ ವಾಹಿನಿಗೆ ಸೇರಿಸುವುದು, ಎಲ್ಲರಂತೆ ಇವರೂ ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳುವಂತೆ ಮಾಡುವುದು, ಆರ್ಥಿಕ ಸದೃಢತೆ ಒದಗಿಸುವುದು ನಿಜಕ್ಕೂ ಸವಾಲಿನ ಸಂಗತಿ. ಆದರೆ ಚಿತ್ರದುರ್ಗ ಜಿಲ್ಲಾ ಕಾರಾಗೃಹ ಇಂತಹ ವಿಷಯದಲ್ಲಿ ಇಡೀ ರಾಜ್ಯಕ್ಕೆ ಮಾದರಿಯಾಗಿರುವುದು ಶ್ಲಾಘನೀಯ. ಮಹಿಳಾ ಬಂಧಿ ನಿವಾಸಿಗಳಿಗೆ ಕಾರಾಗೃಹದಲ್ಲಿ ಫಾಸ್ಟ್ ಫುಡ್ ಅಂದರೆ ಪಾನಿಪೂರಿ, ಫ್ರೈಡ್ ರೈಸ್, ಗೋಬಿ ಮಂಚೂರಿ ತಯಾರಿಕೆ ತರಬೇತಿ ನೀಡಲಾಗುತ್ತಿದೆ. ಜೊತೆಗೆ ಪೇಪರ್ ಬ್ಯಾಗ್, ಎನ್‌ವಲಪ್ ಕವರ್ ತಯಾರಿಕೆ ತರಬೇತಿ, ಬ್ಯೂಟಿಷಿಯನ್ ತರಬೇತಿ ಕೂಡ ನೀಡಲಾಗುತ್ತಿದೆ. ಶಿವಮೊಗ್ಗದ ಬ್ಯೂಟಿಷಿಯನ್ ತರಬೇತುದಾರರು, ಮಹಿಳೆಯರಿಗೆ ಅತ್ಯುತ್ತಮ ತರಬೇತಿ ನೀಡುತ್ತಿದ್ದು, ಕೆಲವು ಮಹಿಳೆಯರು



ಜೈಲಿನಿಂದ ಬಿಡುಗಡೆ ಹೊಂದಿದ ಬಳಿಕ, ತಾವೇ ಸ್ವಂತ ಬ್ಯೂಟಿಷಿಯನ್ ಮಳಿಗೆಯನ್ನು ತೆರೆದು ಸ್ವಾವಲಂಬಿಗಳಾಗಿ ಬಾಳುತ್ತಿರುವ ಉದಾಹರಣೆಗಳಿವೆ.

**ಅನಾಥವಾಗುವ ಮಕ್ಕಳಿಗೆ ಕುಟುಂಬದ ವಾತಾವರಣ :**

ಹೆಂಡತಿಯನ್ನು ಕೊಂದು, ಜೈಲು ಪಾಲಾಗುವ ಅಥವಾ ವಿವಿಧ ಕಾರಣಗಳಿಗಾಗಿ ಅನಾಥವಾಗುವ ಮಕ್ಕಳ ಪಾಲನೆ, ಪೋಷಣೆಗೆ ಇತರರು ಮುಂದಾಗುವುದು ಕಷ್ಟ. ಇಂತಹ ಪ್ರಕರಣಗಳಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಕಾರ ಪಡೆದು, ಅಂತಹ ಮಕ್ಕಳನ್ನು ಪೋಷಿಸಲು ಮುಂದಾಗುವ ಪೋಷಕರಿಗೆ ಕಾರಾಗೃಹ ಇಲಾಖೆಯಿಂದ ನೆರವು ನೀಡುವ ಕಾರ್ಯಕ್ರಮವನ್ನು ಚಿತ್ರದುರ್ಗ ಜಿಲ್ಲಾ ಕಾರಾಗೃಹದಲ್ಲಿ ರಾಜ್ಯದಲ್ಲಿಯೇ ಮೊದಲ ಬಾರಿಗೆ ಜಾರಿಗೆ ತರಲಾಯಿತು. 18 ವರ್ಷದೊಳಗಿನ ಮಕ್ಕಳನ್ನು ಪೋಷಿಸುವ ಸಮೀಪದ ಕುಟುಂಬಸ್ಥರಿಗೆ ತಿಂಗಳಿಗೆ 1 ಸಾವಿರ ರೂ. ನೀಡುವ ಕಾರ್ಯಕ್ರಮ ಇದಾಗಿದ್ದು, ಮಕ್ಕಳ ಪಾಲಕರು ಜೈಲಿನಿಂದ ಬಿಡುಗಡೆಯಾಗುವವರೆಗೂ ಈ ನೆರವು ಇರಲಿದೆ. ಈವರೆಗೆ ಚಿತ್ರದುರ್ಗ ಜಿಲ್ಲಾ ಕಾರಾಗೃಹದಿಂದ 60 ಮಕ್ಕಳಿಗೆ 1.66 ಲಕ್ಷ ರೂ. ನೆರವು ನೀಡಲಾಗಿದೆ. ಅಪರಾಧಿಗಳ ಮಕ್ಕಳು ಕುಟುಂಬದ ವಾತಾವರಣದ ನಡುವೆ ಬೆಳೆಯಲಿ ಎಂಬುದು ಕಾರ್ಯಕ್ರಮದ ಸದುದ್ದೇಶವಾಗಿದೆ.

**ಹೈಟೆಕ್ ಅಡುಗೆ ಕೋಣೆ, ಸುಸಜ್ಜಿತ ಗ್ರಂಥಾಲಯ :**

ಚಿತ್ರದುರ್ಗದ ಜಿಲ್ಲಾ ಕಾರಾಗೃಹದಲ್ಲಿನ ಅಡುಗೆ ಕೊಠಡಿಯನ್ನು 7 ಲಕ್ಷ ರೂ. ವೆಚ್ಚದಲ್ಲಿ ರಾಜ್ಯದಲ್ಲಿಯೇ ಮಾದರಿ ಅಡುಗೆ ಕೊಠಡಿಯನ್ನಾಗಿ ನಿರ್ಮಿಸಲಾಗುತ್ತಿದ್ದು, ಈಗಾಗಲೆ ಹೈಟೆಕ್ ಅಡುಗೆ ಕೋಣೆ ಸಿದ್ಧವಾಗಿದೆ. ಆಧುನಿಕ ಯಂತ್ರಗಳನ್ನು ಅಳವಡಿಸಲಾಗಿದೆ. ಚಿತ್ರದುರ್ಗದ ಗ್ರಂಥಾಲಯ ಇಲಾಖೆಯವರ ಸಹಕಾರದೊಂದಿಗೆ ಕಾರಾಗೃಹದಲ್ಲಿ ಸುಸಜ್ಜಿತ ಗ್ರಂಥಾಲಯ ಪ್ರಾರಂಭಿಸಲಾಗಿದ್ದು, ಇಲ್ಲಿ ದಿನಪತ್ರಿಕೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳು, ಕಾದಂಬರಿ, ಸಮಾಜ ಸುಧಾರಕರು, ಮನುಕುಲದ ಒಳಿತಿಗಾಗಿ ದುಡಿದ ಮಹನೀಯರ ಜೀವನ ಚರಿತ್ರೆ ಪುಸ್ತಕಗಳು ಸೇರಿದಂತೆ ಸುಮಾರು 5 ಸಾವಿರ ಪುಸ್ತಕಗಳು ಗ್ರಂಥಾಲಯದಲ್ಲಿವೆ. ಕಾರಾಗೃಹದಲ್ಲಿ ಪುಸ್ತಕಗಳನ್ನು ಓದುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದರಿಂದ, ಅವರ ಮನಸ್ಸಿನಲ್ಲೂ ಸಕಾರಾತ್ಮಕ ಬದಲಾವಣೆಗೆ ಪೂರಕವಾಗಿದೆ.

ಸಮಾಜದಲ್ಲಿ ಸಾಮಾನ್ಯವಾಗಿ ಜೈಲೆಂದರೆ ಅದು ಅಪವಿತ್ರ ಸ್ಥಳ ಎಂಬ ಕಲ್ಪನೆ ಮನೆ ಮಾಡಿದೆ. ಜೈಲುವಾಸ ಅನುಭವಿಸಿ ಬಂದವರನ್ನು ನಾಗರಿಕ ಸಮಾಜ ನೋಡುವ ದೃಷ್ಟಿಕೋನವೆ ಬೇರೆಯ ರೀತಿ ಇರುತ್ತದೆ. ದುರಾಸೆಗೆ ಒಳಗಾಗಿ, ಸಿಟ್ಟಿನ ಕೈಗೆ ಬುದ್ಧಿ ಕೊಟ್ಟು, ಅಪರಾಧವೆಸಗುವವರನ್ನು ಕಾನೂನಿನ ಅನ್ವಯ ಶಿಕ್ಷಿಸಬೇಕು ನಿಜ. ಆದರೆ, ಅಪರಾಧ ಮಾಡುವುದೇ ಅವರ ಜೀವನವಾಗಬಾರದು. ಜೈಲು ವಾಸಿಗಳಿಗೆ ಕಾರಾಗೃಹಗಳು ಶಿಕ್ಷಾ ಕೇಂದ್ರವಾಗಿರದೆ, ಮನ ಪರಿವರ್ತಿಸುವ ಕೇಂದ್ರಗಳಾಗಬೇಕು, ಭವಿಷ್ಯದಲ್ಲಿ ಅವರಿಂದ ಸತ್ಕಾರ್ಯಗಳು ನಡೆಯಬೇಕು. ಅವರ ಮುಂದಿನ ಬದುಕು ನೆಮ್ಮದಿಯುತ ಹಾಗೂ ಗೌರವಯುತವಾಗಿರಬೇಕು ಎನ್ನುವುದು ನಮ್ಮ ಆಶಯ ಎನ್ನುತ್ತಾರೆ ಚಿತ್ರದುರ್ಗದ ಜಿಲ್ಲಾ ಕಾರಾಗೃಹದ ಅಧೀಕ್ಷಕ ಟಿ.ಕೆ. ಲೋಕೇಶ್ ಅವರು.





# ಹೊಸ ತಂತ್ರಜ್ಞಾನದ ಮೂಲಕ ಲಾಭದಾಯಕ ಕೃಷಿ

ಎಸ್. ಜಗನ್ನಾಥ ಪ್ರಕಾಶ್
ಚಿತ್ರಗಳು : ಎಸ್. ನಾರಾಯಣಸ್ವಾಮಿ

ಎಲ್ಲಾ ಋತುಗಳಲ್ಲೂ ಹರಿಯುವ ನದಿ ನಾಲೆಗಳಿಲ್ಲದ ಕೋಲಾರ ಜಿಲ್ಲೆಯ ರೈತರು ಬೇಸಾಯದಲ್ಲಿ ಹಿಂದೆ ಬಿದ್ದಿಲ್ಲ. ಕೆರೆ ನೀರಿನಿಂದಲೇ ಕೃಷಿ ಮಾಡುವುದು ಕೋಲಾರ ರೈತರಿಗೆ ಸಾಮಾನ್ಯ ಸಂಗತಿ.

ಆದರೆ ಈಗ ಪರಿಸ್ಥಿತಿ ತದ್ವಿರುದ್ಧ, ಮಳೆ ಪ್ರಮಾಣ ಕ್ರಮೇಣ ಕಡಿಮೆಯಾಗಿದೆ. ಕೆರೆ ಕುಂಟೆಗಳಲ್ಲಿ ನೀರು ನಿಲ್ಲುವುದು ವಿರಳ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ರೈತಾಪಿ ಜನ ನೀಲಗಿರಿ ಮರಗಳನ್ನು ಬೆಳೆಸುವಲ್ಲಿ ಮುಂದಾಗಿ ಇದ್ದ ಅಂತರ್ಜಲ ಸಂಪನ್ಮೂಲವನ್ನೂ ರೈತರು ಕಳೆದುಕೊಂಡು ದುರ್ಬಲ ಸ್ಥಿತಿ ತಲುಪಿದ್ದಾರೆ. ಸರ್ಕಾರ ಈಗ ಎಚ್ಚೆತ್ತುಕೊಂಡು ನೀಲಗಿರಿ ಮರ ಬೆಳೆಯದಂತೆ ಆದೇಶ ಹೊರಡಿಸಿದ್ದರೂ ರೈತರಲ್ಲಿ ಬಹುಮಂದಿ ಇದಕ್ಕೆ ಒಗ್ಗೊಡುತ್ತಿಲ್ಲ.

ಹೊಸ ಹೊಸ ಕೃಷಿ ಆವಿಷ್ಕಾರಗಳನ್ನು ಅಳವಡಿಸಿಕೊಂಡು ಲಭ್ಯ ನೀರಿನಲ್ಲಿ ಬೇಸಾಯ ಮಾಡಲು





downloaded from: www.kpscvaani.com

## STATEMENT ABOUT OWNERSHIP AND OTHER PARTICULARS ABOUT VARTHA JANAPADA

### FORM IV Rule 8

| | | |
|---|---|---|
| 1. Place of Publication | : | Bengaluru |
| 2. Periodicity of Publication | : | Monthly |
| 3. Printer Name | : | T. Venkatesh |
| Nationality | : | Indian |
| Address | : | M/s Abhimaani Publications Pvt. Ltd. #2/4, Dr Rajkumar Road, Rajajinagar, Benglauru - 560 010 |
| 4. Publishers Name | : | M. Ravikumar |
| Nationality | : | Indian |
| Address | : | Dept. of Information & Public Relations #17, Mahaveer Road, (Infantry Rd) Bengaluru - 560 001. |
| 5. Editor's Name | : | M Ravikumar |
| Nationality | : | Indian |
| Address | : | Dept. of Information & Public Relations #17, Mahaveer Road, (Infantry Rd) Bengaluru - 560 001. |

6. License No. - Regd. No. **PMG/BG/ WPP-365/2018-20**

I, M Ravikumar hereby declare that the particulars given above are true to the best of my knowledge and belief.

Bengaluru
01.02.2019

Sd.
Commissioner
Signature of the Publisher

ರೈತರ ಮನ ಒಲಿಸುವ ಕೆಲಸಗಳೂ ನಡೆದಿವೆ.

ಮಳೆ ಇಲ್ಲದೆ ಸಂಕಷ್ಟಕ್ಕೆ ಸಿಕ್ಕ ಬಿದ್ದ ಇಸ್ರೇಲ್ ದೇಶ ಕಡಿಮೆ ನೀರಿನಲ್ಲಿ ಹಾಗೂ ಲಭ್ಯ ನೀರಿನಲ್ಲಿ ಒಳ್ಳೆಯ ಕೃಷಿ ಮಾಡುವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಯಶಸ್ವಿಯಾಗುತ್ತಿದೆ.

ಭಾರತವೂ ಸೇರಿದಂತೆ ಹಲವು ದೇಶಗಳು ಇಸ್ರೇಲ್ ಕೃಷಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಉತ್ಸಾಹ ತೋರುತ್ತಿರುವಾಗ, ನಮ್ಮ ಅನೇಕ ರೈತರು ಇಸ್ರೇಲ್‌ಗೂ ಹೋಗಿಬಂದು ಅವರ ತಂತ್ರಜ್ಞಾನ ಅಳವಡಿಸಿಕೊಳ್ಳಲು ಮುಂದಾಗಿದ್ದಾರೆ.

ರಾಜಧಾನಿ ಬೆಂಗಳೂರಿಗೆ ಹತ್ತಿರದಲ್ಲಿರುವ ಮಾಲೂರು ತರಕಾರಿ ಬೆಳೆಗಳಿಗೆ ಬಹು ಹೆಸರುವಾಸಿ. ಜೊತೆಗೆ ಹೆಂಚು–ಇಟ್ಟಿಗೆ ತಯಾರಿಕೆಯಲ್ಲಿ ಮಾಲೂರು ಮುಂದು. ಇದರ ಜೊತೆಗೆ ನೀಲಗಿರಿ ನೆಡುತೋಪುಗಳಿಗೂ ಮಾಲೂರು ತಾಲ್ಲೂಕು ಖ್ಯಾತಿ. ಇಲ್ಲಿ ಮಳೆ ಕಡಿಮೆ. ಕೊಳವೆ ಬಾವಿಗಳಲ್ಲೂ ನೀರು ಕಡಿಮೆ.

ತಾಲ್ಲೂಕಿನ ಯಶವಂತಪುರ ಗ್ರಾಮದ ವೈ. ರಾಮಯ್ಯ ಹಾಗೂ ಮಗ ವೈ.ಆರ್. ಅಶೋಕ ತಮ್ಮ ಎರಡೂವರೆ ಎಕರೆ ಭೂಮಿಯಲ್ಲಿ ನೀಲಗಿರಿ ಮರ ಬೆಳೆದಿದ್ದರು. ಸರ್ಕಾರ ನೀಲಗಿರಿ ತೆರವುಗೊಳಿಸುವಂತೆ ಹೇಳಿದ ಮೇಲೆ ತಂದೆ ಮಗ ನೀಲಗಿರಿ ತೆಗೆಸಿದ್ದು ಮಾತ್ರವಲ್ಲ ಹೊಸ ಕೃಷಿ ತಂತ್ರಜ್ಞಾನವನ್ನು ಉಪಯೋಗಿಸಲು ಮುಂದಾಗಿ ಯಶವನ್ನೂ ಕಂಡಿದ್ದಾರೆ.

ಪಾಲಿಹೌಸ್‌ನಲ್ಲಿ ಮೊದಲನೆಯದಾಗಿ ದೊಣ್ಣೆಮೆಣಸಿನಕಾಯಿ (ಕ್ಯಾಪ್ಸಿಕಂ) ಬೆಳೆದಿದ್ದು, ಎರಡನೇ ಬೆಳೆಯಾಗಿ ಸೌತೆಯನ್ನು ಬೆಳೆಸಿದ್ದಾರೆ. ಕೃಷಿ ಇಲಾಖೆಯ ಸಲಹೆಯನ್ನು ಅನುಸರಿಸಿ ಹೊಂಗೆ, ಬೇವಿನ ಹಿಂಡಿ, ನಾಟಿ ಹಾಗೂ ಸಾವಯವ ಗೊಬ್ಬರ ಹಾಕಿದ್ದಾರೆ. ತಂತಿ ಚಪ್ಪರದಲ್ಲಿ ಬೆಳೆದಿರುವ ಸೌತೆ ಬೆಳೆಗೆ ಹನಿ ನೀರಾವರಿ ಪದ್ಧತಿ ಅಳವಡಿಸಿದ್ದಾರೆ. ಕ್ರಿಮಿಕೀಟಗಳು ದಾಳಿ ಇಡದಂತೆ ಕಿನಿ ಟ್ರ್ಯಾಪಿಕ್ ಗಮ್ ಟೋಡ್ (ಮೋಹಕ ಬಲೆ) ಹಾಕಿಟ್ಟಿದ್ದಾರೆ. ಎರಡೂ ಬೆಳೆಗಳು ವಾಣಿಜ್ಯಕವಾಗಿ ರಾಮಯ್ಯ ಮತ್ತು ಅಶೋಕ್ ಅವರ ಕೈಹಿಡಿಯುವ ಮೂಲಕ ಉತ್ತಮ ಲಾಭ ಲಭಿಸಿದೆ.

ಲಭ್ಯ ನೀರಿನಲ್ಲಿ ಕೃಷಿ ತಂತ್ರಜ್ಞಾನ ಅಳವಡಿಸಿಕೊಂಡು ಬೆಳೆಯ ಲಾಭ ಗಳಿಸಿಕೊಂಡ ಯಶವಂತಪುರದ ರಾಮಯ್ಯ ಮತ್ತು ಅಶೋಕ್ ಅವರ ತೋಟವನ್ನು ವೀಕ್ಷಿಸಲು ರಾಜ್ಯದ ಹಲವು ರೈತರು ಬಂದು ಹೋಗುತ್ತಿದ್ದು, ಅಪೇಕ್ಷಿಸಿದವರಿಗೆ ಇವರು ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ■






# ರೈಲು ನಿಲ್ದಾಣ ಮಾದರಿಯಲ್ಲಿ ಆಕರ್ಷಿಸುತ್ತಿರುವ ಸರ್ಕಾರಿ ಶಾಲೆ

ಅನಿತಾ ಕುಲಕರ್ಣಿ

"ಅರೆ... ಮಕ್ಕಳೆಲ್ಲ ಬಸ್ ಏರಿ ಕುಳಿತಿದ್ದಾರಲ್ಲ, ಅಯ್ಯಯ್ಯೋ ಕರ್ನಾಟಕನೂ ಬರ್ತಾ ಬರ್ತಾ ಬಿಹಾರದ ತರಹ ಆಯಿತೇನ್ರಿ ರೈಲಿನ ಹಾಗೂ ಬಸ್ ಛಾವಣಿಯ ಮೇಲೆ ಜೀವದ ಹಂಗು ತೊರೆದು ಯಾವ ರೀತಿ ಕುಳಿತು ಪ್ರಯಾಣ ಮಾಡ್ತಾರ ನೋಡ್ರಿ... ಎಂದು ಪುನಾ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರಯಾಣಿಸುವ ಜನರು ಹೀಗೆ ಉದ್ಗಾರ ತೆಗೆಯುವುದು ಸಾಮಾನ್ಯ. ಅಂದ ಹಾಗೆ ಇಲ್ಲಿ ರೈಲೂ ಇಲ್ಲ ಬಸ್‌ಗಳೂ ಇಲ್ಲ!! ಅಲ್ಲಿರುವುದು ಸಾಲು ಸಾಲು ಶಾಲಾ ಕೊಠಡಿಗಳು ಹಾಗೂ ಮಕ್ಕಳು. ಈ ಶಾಲಾ ಕಟ್ಟಡ ನೋಡಿದ ಎಂಥವರಾದರೂ ಈ ಮೇಲಿನಂತೆ ಉಸುರುವುದು ಮಾಮೂಲು.

ಇದು ಬಾಗಲಕೋಟೆ ಜಿಲ್ಲೆಯ ಇಳಕಲ್ ಸಮೀಪದ ರಾಷ್ಟ್ರೀಯ ಹೆದ್ದಾರಿಗೆ ಅಂಟಿಕೊಂಡಿರುವ ಹಿರೇಕೊಡಗಲಿ ಗ್ರಾಮದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಯ ದೃಶ್ಯ. ಖಾಸಗಿ ಶಾಲೆಗಳ ಪೈಪೋಟಿಯಲ್ಲಿ ಸೊರಗಿ ಹೋದ ಸರ್ಕಾರಿ ಶಾಲೆಗಳು ತಮ್ಮ ಉಳಿವಿಕೆಗಾಗಿ ಮಾಡುತ್ತಿರುವ ಹೋರಾಟದ ಪರಿ ಇದು. ತಮ್ಮೂರಿನಿಂದ ಪಕ್ಕದ ನಗರಗಳ ಶಾಲೆಗೆ ಹೋಗುವ ಮಕ್ಕಳನ್ನು ತಮ್ಮೂರಿನ ಶಾಲೆಯೇ ಮಕ್ಕಳನ್ನು ಆಕರ್ಷಿಸುವಂತೆ ಮಾಡಲು ಟೊಂಕಕಟ್ಟಿ ನಿಂತ ಶಿಕ್ಷಕರಿಗೆ ಗ್ರಾಮಸ್ಥರ ಬೆಂಬಲದಿಂದ ಸದ್ಯ ಈ ಶಾಲೆ ಹಿರೇಕೊಡಗಲಿ ಗ್ರಾಮಕ್ಕಷ್ಟೇ ಅಲ್ಲ ರಾಜ್ಯದಲ್ಲಿಯೇ ಈ ಶಾಲೆ ಹೆಸರು ಮಾಡಿದೆ. ರಸ್ತೆಯ ಮಾರ್ಗದಲ್ಲಿ ಹೋಗುವ ಪ್ರವಾಸಿಗರು ಕೊಂಚ ವಾಹನ ನಿಲ್ಲಿಸಿ ಶಾಲೆಯ ಅಂದದ ಫೋಟೊಗಳನ್ನು ಕ್ಲಿಕ್ಕಿಸಿಕೊಂಡು "ನಾನೀಗ ರೈಲ್ವೆ ನಿಲ್ದಾಣದಲ್ಲಿದ್ದೇನೆ... ನಾನೀಗ ಬಸ್ ಏರಿದ್ದೇನೆ... ಬಸ್ ತುಂಬಾ ರಶ್ ಇದೆ ಎಂತೆಲ್ಲ ತಮ್ಮವರಿಗೆ ಸೆಲ್ಫಿ ಕಳಿಸಿ ವಿನೋದ ಮಾಡುತ್ತಾರೆ. ಈ ಫೋಟೊಗಳನ್ನು ನೋಡಿದ ಎಷ್ಟೋ ಜನರು ಬೇಡ ಮಾರಾಯಾ ಸಿಕ್ಕಾಪಟ್ಟೆ ಜನಸಂದಣಿ ಇದೆ ಬಸ್ ಏರಬೇಡ, ಬಾಗಿಲಿಗೆ ಹಾಗೆ ಜೋತು ಬೀಳಬೇಡ ಎಂದೆಲ್ಲ ಉಪದೇಶವನ್ನೂ ಮಾಡುವಷ್ಟರ ಮಟ್ಟಿಗೆ ಈ ಶಾಲೆ ಬಣ್ಣದ ಮರ್ಮ ತುಂಬಿಕೊಂಡಿದೆ.



downloaded from: www.kpscvaani.com




**ಶಿಕ್ಷಕರೊಬ್ಬರ ಕ್ರಿಯಾಶೀಲತೆ ಇದಕ್ಕೆಲ್ಲ ಕಾರಣ:** ಸಂಗಮೇಶ ಬಂಡರಗಲ್ ಎಂಬ ಶಿಕ್ಷಕರು 15 ತಿಂಗಳ ಹಿಂದೆ ಹುನಗುಂದ ತಾಲೂಕಿನ ಸಂಕ್ಲಾಪೂರ ಗ್ರಾಮದಿಂದ ಈ ಶಾಲೆಗೆ ವರ್ಗವಾಗಿ ಬಂದರು. ಅಲ್ಲದೆ ಇವರು ನೆರೆಯ ಚಿಕ್ಕಕೊಡಗಲಿ ಗ್ರಾಮದವರು ಎಂಬುದು ಮತ್ತೊಂದು ವಿಶೇಷ. ಈ ಹಿಂದೆ ಕೆಲಸ ಮಾಡಿದ್ದ ಸಂಕ್ಲಾಪೂರ ಶಾಲೆಯಲ್ಲಿ ಸಾಕಷ್ಟು ಉತ್ತಮ ಕೆಲಸ ನಿರ್ವಹಣೆ ಮಾಡಿ ಗ್ರಾಮಸ್ಥರಿಂದ ಹಾಗೂ ಇಲಾಖೆಯಿಂದ ಸೈ ಎನಿಸಿಕೊಂಡಿದ್ದ ಇವರಿಗೆ, ತಮ್ಮೂರ ಪರಿಸರದ ಈ ಸರ್ಕಾರಿ





ಶಾಲೆಯ ಅವಸ್ಥೆ ಕಂಡು ನೋವು ಪಟ್ಟುಕೊಂಡರು. ಬಣ್ಣ ಕಾಣದ ಗೋಡೆಗಳು, ಮುರಿದು ಹೋದ ಹೆಂಚುಗಳು, ಮಕ್ಕಳಿಲ್ಲದೆ ಭಣಗುಡುತ್ತಿರುವ ಶಾಲಾ ಕೋಣೆಗಳು, ಗ್ರಾಮಸ್ಥರ ನಿರಾಸಕ್ತಿ... ಹೀಗೆ ಇಂತಹ ಸಮಸ್ಯೆಗಳಿಗೆ ಮಂಗಳಹಾಡಿ ಶಾಲೆಗೆ ಚೈತನ್ಯ ತುಂಬಿ ಮಕ್ಕಳು ಶಾಲೆಗೆ ಓಡೋಡಿ ಬರಬೇಕು, ಪಾಲಕರು ಕುತೂಹಲದಿಂದ ಗಮನಿಸಿ ತಮ್ಮ ಮಕ್ಕಳನ್ನು ಈ ಶಾಲೆಗೆ ತಂದು ಸೇರಿಸಬೇಕು ಎಂಬ ಸಂಕಲ್ಪವನ್ನು ತೊಟ್ಟರು. ಇದಕ್ಕೆ ಸಮೂಹ ಸಂಪನ್ಮೂಲ ವ್ಯಕ್ತಿ ಶಾಂತಕುಮಾರ ಕುಟುಗಮರಿ ಅವರು ಪ್ರೇರಕ ಶಕ್ತಿಯಾಗಿ ನಿಂತರು. ಹಲವಾರು ದಿನಗಳ ಕಾಲ ಹಗಲು ರಾತ್ರಿ ಎನ್ನದೆ ಬಣ್ಣದ ಕಾರ್ಯ ಮಾಡಿದರು. ಮುಖ್ಯ ಶಿಕ್ಷಕಿ ಪಿ.ಎಸ್.ಪಾಟೀಲ ಹಾಗೂ ಎಂಟು ಜನ ಶಿಕ್ಷಕರು ತಮ್ಮ ವೇತನದ ಒಂದಿಷ್ಟು ಹಣ ಹಾಕಿ ಕೆಲಸ ಆರಂಭಿಸಿದರು. ಶಿಕ್ಷಕರು ತಮ್ಮ ಸ್ವಂತ ಹಣದಲ್ಲಿ ಕೆಲಸ



ನಿರ್ವಹಿಸುತ್ತಿರುವುದನ್ನು ಹಾಗೂ ಒಂದೊಂದೆ ಕೊಠಡಿಗಳು ಚಿತ್ತಾರದ ಬಣ್ಣ ತುಂಬಿಕೊಳ್ಳುತ್ತಿದ್ದಂತೆ ಶಿಕ್ಷಕರ ಈ ಪ್ರಾಮಾಣಿಕ ಪ್ರಯತ್ನಕ್ಕೆ ಮನಸೋತ ಗ್ರಾಮದ ಜನರು ನೆರವಿಗೆ ಧಾವಿಸಿದರು. ಸಾರ್ವಜನಿಕರು ನೆರವಿನ ಹಸ್ತ ಚಾಚುತ್ತಿದ್ದಂತೆ ಶಿಕ್ಷಕರ ಆಲೋಚನೆ ಮತ್ತಷ್ಟು ಇಮ್ಮಡಿಸಿತು. "ನೀವು ಹೀಗೆ ನೆರವು ನೀಡುತ್ತಿದ್ದರೆ ರಾಜ್ಯವೇ ಗಮನಸೆಳೆಯುವಂತೆ ಈ ಶಾಲೆಯನ್ನು ರೂಪಿಸುತ್ತೇವೆ ಎಂದು ಸಂಗಮೇಶ ಜನರಿಗೆ ಭರವಸೆ ನೀಡಿದರು.

ಶಿಕ್ಷಕ ಸಂಗಮೇಶ ಬಂಡರಗಲ್ ಗ್ರಾಮಸ್ಥರಾದ ಅಮರೇಶ, ಅಮರಪ್ಪ ಕಡದಾಳ ಅವರು ಈ ಬಾರಿ ದಸರೆ ಆಚರಿಸಲಿಲ್ಲ. ಹೇಗೂ ಶಾಲೆಗೆ ರಜೆ ಇದೆ, ಈ ಸಮಯದಲ್ಲಿಯೇ ನಮ್ಮ ಕೆಲಸ ಮುಗಿಸೋಣ ಎಂದು ಕೈಯಲ್ಲಿ ಕುಂಚ ಹಿಡಿದು ಕುಳಿತರು. ಇದೆಲ್ಲದರ ಶ್ರಮದ ಫಲವಾಗಿ ಈ ಶಾಲೆಯ ಕಟ್ಟಡ ಬಸ್ ಮತ್ತು ರೈಲಿನ ಮಾದರಿಯಲ್ಲಿ ತಯಾರಾಯಿತು.

"ನಮ್ಮ ಭಾಗದಲ್ಲಿ ರೈಲುಗಳಿಲ್ಲದಿರುವುದರಿಂದ ನಮ್ಮೂರಿನ ಎಷ್ಟೋ ಮಕ್ಕಳು ರೈಲಿನ ಮುಖವನ್ನೆ ನೋಡಿದ್ದಿಲ್ಲ, ಇಂದು ಸಂಗಮೇಶ ಶಿಕ್ಷಕರ ಪರಿಶ್ರಮದಿಂದ ಅವರೆಲ್ಲ ರೈಲು ಏರಿದ್ದಾರೆ, ಅಷ್ಟೆ ಅಲ್ಲ ರೈಲಿನಲ್ಲಿ ಹಾಗೂ ಬಸ್‌ನಲ್ಲಿ ಪಾಠ ಕೇಳುತ್ತಾರೆ. ತಮಾಷೆಗೆ ಹೇಳಬೇಕೆಂದರೆ ಚಲಿಸದ ಈ ವಾಹನಗಳಿಗೆ ಮಕ್ಕಳೆ ಚಾಲಕರಾಗಿದ್ದಾರೆ" ಎಂದು ಗ್ರಾಮದ ಯುವಕ ಅಮರಪ್ಪ ಕಡದಾಳ ಅಭಿಮಾನದಿಂದ ಹೀಗೆ ಹೇಳುತ್ತಾರೆ.

**ರೈಲು ಬಂಡಿಗೆ ಬಣ್ಣದ ಮೋಡಿ:** ಈ ಶಾಲಾ ಕೊಠಡಿಗಳಿಗೆ ಸಾಮಾನ್ಯವಾಗಿ ಬಣ್ಣ ಲೇಪನ ಮಾಡಿದ್ದರಷ್ಟೇ ಶಾಲಾ ಕೊಠಡಿಗಳು ರೈಲಿನಂತೆ, ಬಸ್‌ನಂತೆ ಕಾಣುತ್ತಿದ್ದಿಲ್ಲ. ಥೇಟ್ ಬಸ್‌ಗಳು, ರೈಲುಗಳು ಓಡುತ್ತಿರುವಂತೆ ಶಾಲಾ ಕೊಠಡಿಯ ಹೊರ ಗೋಡೆಗೆ ಬಣ್ಣದ ಸಂಯೋಜನೆಯ ನೈಪುಣ್ಯತೆಯೆ ಇದಕ್ಕೆ ಮುಖ್ಯ ಕಾರಣವಾಗಿದೆ. ಇಲ್ಲಿ ಕಲಾವಿದನ ಕುಂಚ ರೈಲು ನಿಲ್ದಾಣ ಅನಾವರಣಗೊಳ್ಳಲು ಮುಖ್ಯ ಕಾರಣವಾಗಿದೆ. ಶಾಲಾ ಹೊರಗೋಡೆ ಬಿಟ್ಟು ಮತ್ತಿನ್ನೇನೂ ಅಲ್ಲಿ ಇಲ್ಲದಿದ್ದರೂ ಬಣ್ಣದ ಮಾಯೆಯಿಂದ ವಾಹನಗಳ ಚಕ್ರಗಳು, ಹಳಿಗಳು ಒಂದಕ್ಕೊಂದು ನೆರಳು ಬೆಳಕಿನ ನಾಟಕವಾಡಿವೆ. ಕೊಠಡಿಯ ಕಿಟಕಿಗಳು ಬಸ್, ರೈಲಿನ ಕಿಟಕಿಗಳಾಗಿದ್ದರೆ, ಬಾಗಿಲುಗಳಿಗೆ ಬಳಿದ ಬಣ್ಣ, ರೈಲಿನ ಬಾಗಿಲು ಆಗಿದೆ, ಮಕ್ಕಳು ಕೊಠಡಿಯ ಮೇಲೆ ಹತ್ತಿದರೆ ಬಸ್ ಮೇಲೆ ಏರಿದಂತೆ ಕಾಣುತ್ತದೆ, ವಿದ್ಯಾರ್ಥಿಗಳು ಶಿಕ್ಷಕರು ಕೊಠಡಿಯೊಳಗೆ ಹೋದರೆ ಬಸ್ ಏರುತ್ತಿದ್ದಂತೆ ಹಾಗೂ ಒಳಗಡೆ ಕುಳಿತರೆ ಪ್ರಯಾಣಿಕರು ಕುಳಿತಂತೆ ಇಲ್ಲಿ ಬಣ್ಣ ಮೋಹಕ ಪಾತ್ರ ನಿರ್ವಹಿಸಿದೆ. ಪ್ರವಾಸಿ ತಾಣದಂತಾಗಿರುವುದರಿಂದ ಪಾಲಕರು, ಮಕ್ಕಳು ಸೆಲ್ಫಿಗೆ ಫೋಸ್ ನೀಡಿ ಸಂಭ್ರಮಿಸುತ್ತಾರೆ. ಒಟ್ಟಾರೆ ಶಿಕ್ಷಕ ಸಂಗಮೇಶ ಮಕ್ಕಳ ಮನಸಿನ ಕದ ತಟ್ಟಿದ್ದಾರೆ ಎನ್ನಬಹುದು.

**ಶಾಲಾ ಒಳ ಆವರಣವೂ ಸೊಗಸು:** ಶಾಲೆಯ ಒಳ ಆವರಣ ಪ್ರವೇಶಿಸಿದರೆ ಸ್ವಚ್ಛ ಹಾಗೂ ಸುಂದರ ಗೋಡೆಬರಹ ಗಮನ ಸೆಳೆಯುತ್ತವೆ. ಮುಖ್ಯ ಶಿಕ್ಷಕರ ಕೊಠಡಿಯಂತೂ ಜಿಲ್ಲಾಧಿಕಾರಿ ಕೊಠಡಿಯಂತೆ ಕಾಣುತ್ತದೆ. ಎಲ್ಲ ಕೊಠಡಿಗಳ ಗೋಡೆಗಳ ಮೇಲೆ ಕಲಿಕಾಂಶ ಒಳಗೊಂಡ ಚಿತ್ರಗಳು ಹಾಗೂ ಕಲಿಕಾ ಮಾದರಿಗಳು ನೋಡುವಂತಿವೆ. ಪುಸ್ತಕಗಳನ್ನು ಕಪಾಟುಗಳಿಂದ ಹೊರ ತಗೆದು ವಿದ್ಯಾರ್ಥಿಗಳಿಗೆ ಎಟುಕುವಂತೆ ತೆರೆದ ಗ್ರಂಥಾಲಯದ ವ್ಯವಸ್ಥೆ ಇಲ್ಲಿ ಮಾಡಲಾಗಿದೆ. ಶಾಲಾ ಬೆಳವಣಿಗೆ ಕಂಡ ಜಿಂದಾಲ್ ಹಾಗೂ ಸುಜಲಾನ್ ಕಂಪೆನಿಯ ಸಹಕಾರದಿಂದ ಮಕ್ಕಳಿಗೆ ಉಚಿತ ಕಂಪ್ಯೂಟರ್ ಶಿಕ್ಷಣ ಹಾಗೂ ಸ್ಮಾರ್ಟ್ ಕ್ಲಾಸ್ ಸೌಲಭ್ಯ ಕಲ್ಪಿಸಲಾಗಿದೆ. ಕಂಪ್ಯೂಟರ್, ಪ್ರೊಜೆಕ್ಟರ್, ನಲಿ ಕಲಿ ವಿಶೇಷ ತರಬೇತಿಗಾಗಿ ಪ್ರತ್ಯೇಕ ಕೊಠಡಿಗಳು. ಕುಡಿಯುವ ನೀರಿನ ಸೌಕರ್ಯ, ಪ್ರತಿ ಶನಿವಾರ ಯೋಗ ತರಬೇತಿ, ಭಾರತ ಸೇವಾದಳ, ದೈನಂದಿನ ಬಿಸಿಯೂಟದೊಂದಿಗೆ 15 ದಿನಕ್ಕೊಮ್ಮೆ ಎಲ್ಲ ಮಕ್ಕಳಿಗೆ ಇಡ್ಲಿ-ಸಾಂಬಾರ್ ಸ್ಪೆಷಲ್, ಭಾರತ ಸೇವಾದಳ ಮಕ್ಕಳಿಂದ ವಿವಿಧ ಚಟುವಟಿಕೆಗಳು, ಕರಾಟೆ, ಗೌರವ ರಕ್ಷೆ ಮತ್ತಿತರ ಚಟುವಟಿಕೆಗಳು ಈ ಶಾಲೆಯಲ್ಲಿ ಎಗ್ಗಿಲ್ಲದೆ ನಡೆಯುತ್ತವೆ.

ಶಾಲೆಯ ಅಂದಚೆಂದ ಗಮನಿಸಿದ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್ ಶಿಕ್ಷಕರ ಕೆಲಸ ಮೆಚ್ಚಿಕೊಂಡಿದ್ದಾರೆ. ಶಾಲೆಗೆ ನೆರವಾಗಲು ದಾನಿಗಳು ಸರದಿಯಲ್ಲಿ ನಿಂತಿದ್ದಾರೆ. ಆದರೆ ಅಗತ್ಯವಿದ್ದಷ್ಟನ್ನು ಮಾತ್ರ ಸ್ವೀಕರಿಸಿರುವ ಶಿಕ್ಷಕರು, ಹೊಸ ಯೋಜನೆ ರೂಪಿಸಿದಾಗ ಮತ್ತೆ ಸ್ವೀಕರಿಸುತ್ತೇವೆ ಎಂದು ಹೇಳಿದ್ದಾರಂತೆ. 'ಈಗ ಗಮನ ಸೆಳೆಯುವ ಶಾಲೆಯಾಯಿತು, ಇನ್ನೂ ಸಾಗಬೇಕಾದ ಹಾದಿ ದೀರ್ಘವಾಗಿದೆ, ಮಕ್ಕಳ ಗುಣಮಟ್ಟದ ಶಿಕ್ಷಣಕ್ಕೆ ನಾವೇ ಯೋಜನೆಯೊಂದನ್ನು ಹಾಕಿಕೊಂಡಿದ್ದೇವೆ, ಒಟ್ಟಾರೆ ಪ್ರಾಮಾಣಿಕ ಪ್ರಯತ್ನ ಇಲ್ಲಿ ನಡೆದಿದೆ' ಎಂದು ಶಿಕ್ಷಕ ಸಂಗಮೇಶ ಬಂಡರಗಲ್ ಹೇಳುತ್ತಾರೆ.

ಶಿಕ್ಷಕ ವೃಂದದ ಕ್ರಿಯಾಶೀಲ ಪ್ರಯತ್ನದಿಂದಾಗಿ ನಮ್ಮೂರ ಶಾಲೆ ನಾಡಿಗೆ ಮಾದರಿ ಎಂಬಂತಾಗಿ ನಮ್ಮ ಗ್ರಾಮದ ಹಿರಿಮೆ ಹೆಚ್ಚಿಸಿದೆ, ಜನ ನಿಂತು ನೋಡುತ್ತಾರೆ, ಅದೇ ನಮಗೆ ಹೆಮ್ಮೆ ಎಂದು ಶಿಕ್ಷಣ ಪ್ರೇಮಿಗಳಾದ ದೇವೇಂದ್ರಪ್ಪ ಕುಂದಗೋಳ, ಅಮರೇಶ ಕಡದರಾಳ, ಶರಣಗೌಡ ಪಾಟೀಲ, ವೀರಭದ್ರಗೌಡ ಪಾಟೀಲ ತಮ್ಮೂರ ಶಾಲೆಯ ಹಿರಿಮೆ ಗರಿಮೆ ಬಗ್ಗೆ ಕೊಂಡಾಡುತ್ತಾರೆ. ಸದ್ಯ ಶಾಲೆಯಲ್ಲಿ ದಾಖಲಾಗಿರುವ ಎಲ್ಲ ವಿದ್ಯಾರ್ಥಿಗಳು ತಪ್ಪದೆ ಶಾಲೆಗೆ ಹಾಜರಾಗುತ್ತಿದ್ದರೆ, ಈ ಊರಿನಿಂದ ಬೇರೆ ಶಾಲೆಗೆ ಹೋಗುವ ವಿದ್ಯಾರ್ಥಿಗಳು ಮುಂದಿನ ಜೂನ್ ವೇಳೆಗೆ ಈ ಶಾಲೆಗೆ ದಾಖಲಾಗಲಿದ್ದಾರೆ.





downloaded from: www.kpscvaani.com



# ರಾಷ್ಟ್ರೀಯ ಮತದಾರರ ದಿನಾಚರಣೆ

ಡಾ. ಲಾವಣ್ಯ ಸಿ
(ಕನ್ನಡಕ್ಕೆ– ವೆಂಕಟೇಶ ಪ್ರಸಾದ್ ಬಿ.ಎಸ್)

ಮತ ಚಲಾವಣೆಯು ಸ್ವಯಂ ಬದ್ಧತೆ, ಪರಸ್ಪರ ಬದ್ಧತೆ, ರಾಷ್ಟ್ರ ಮತ್ತು ಜಗತ್ತಿಗೆ ಬದ್ಧವಾಗಿರುವುದರ ಅಭಿವ್ಯಕ್ತಿಯಾಗಿದೆ.

–ಶರೋನ್ ಸಾಲ್ಜ್‌ಬರ್ಗ್

ಪ್ರಜಾತಂತ್ರ ರಾಷ್ಟ್ರದಲ್ಲಿ ಮತ ಚಲಾವಣೆಯು ಪ್ರಜೆಯ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮಾರ್ಗ. ಪ್ರತಿಯೊಬ್ಬ ಪ್ರಜೆಗೂ ತನಗೆ ಸೂಕ್ತವೆನ್ನಿಸುವ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳಲು ಇರುವ ಮೂಲಭೂತ ಹಕ್ಕು ಇದಾಗಿದೆ. ನಾಗರಿಕತ್ವದ ಮಹತ್ವ ಮನಗಾಣಿಸಲು ಕೂಡ ಇದು ಅನುವು ಮಾಡಿಕೊಡುತ್ತದೆ. ಜೊತೆಗೆ, ಮತ ಚಲಾವಣೆಯು ವ್ಯಕ್ತಿಗೆ ಸಮಸ್ಯೆಗಳು, ಸವಾಲುಗಳು ಮತ್ತು ಸ್ಪಷ್ಟನೆಗಳ ಬಗ್ಗೆ ಸರ್ಕಾರವನ್ನು ಪ್ರಶ್ನಿಸುವ ಹಕ್ಕನ್ನು ಲಭ್ಯವಾಗಿಸುತ್ತದೆ; ಸರ್ಕಾರವನ್ನು ಮನಸೋಇಚ್ಛೆ ವರ್ತಿಸದಂತೆಯೂ ನಿಯಂತ್ರಿಸುತ್ತದೆ.

ದುರದೃಷ್ಟವಶಾತ್, ಇದು ಅತ್ಯಮೂಲ್ಯ ಮೂಲಭೂತ ಹಕ್ಕಾಗಿದ್ದರೂ, ಇಂದಿನ ಯುವಜನತೆ ಸಮಾಜದ ವಿದ್ಯಮಾನಗಳಿಗೆ ತಾವೂ ಭಾಗಿದಾರರು ಎಂದು ಭಾವಿಸುತ್ತಿಲ್ಲ. ಅಂದರೆ, ಬಹುಪಾಲು ಯುವಜನತೆಯು ರಾಜಕೀಯದ ಬಗ್ಗೆ ನಿರಾಸಕ್ತರಾಗಿದ್ದು, ಚುನಾವಣೆ ದಿನದಂದು ಮತ ಚಲಾಯಿಸಲು ಮುಂದೆ ಬರುತ್ತಿಲ್ಲ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅವರ ಅನುಪಸ್ಥಿತಿಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. ಆದ್ದರಿಂದ, ಸಹಜವಾಗಿಯೇ, ಚುನಾವಣೆಗಳಲ್ಲಿ ಯುವಜನತೆಯ ಮತ ಚಲಾವಣೆ ಪ್ರಮಾಣ ಗಮನಾರ್ಹವೆನ್ನಿಸುವಷ್ಟು ಕಡಿಮೆ ಪ್ರಮಾಣದಲ್ಲಿದೆ.

18 ವರ್ಷ ಪೂರೈಸಿದವರಲ್ಲಿ ಮತ ಚಲಾವಣೆ ಕುರಿತು ಇರುವ ಅನಾಸಕ್ತಿಯನ್ನು ಮನಗಂಡ ಭಾರತದ ಚುನಾವಣಾ ಆಯೋಗವು, ಈ ಪ್ರವೃತ್ತಿ ಬದಲಿಸುವ ಸಲುವಾಗಿ ಅಭಿಯಾನ ಕೈಗೊಂಡಿತು. ಯುವಜನತೆಯನ್ನು ಮತದಾರರ ಪಟ್ಟಿಗೆ ಹೆಸರು ಸೇರಿಸಲು ಪ್ರೋತ್ಸಾಹಿಸಲು ಅದು ನಿರ್ಧರಿಸಿತು. ಈ ದಿಸೆಯಲ್ಲಿ, ಪ್ರತಿವರ್ಷ ಜನವರಿ 25ರಂದು "ರಾಷ್ಟ್ರೀಯ ಮತದಾರರ ದಿನ" (ನ್ಯಾಷನಲ್ ವೋಟರ್ಸ್ ಡೇ) ಆಚರಿಸಲು ನಿರ್ಧರಿಸಿತು. ರಾಜಕೀಯ ಪ್ರಕ್ರಿಯೆಯಲ್ಲಿ ಯುವಜನತೆ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬುದು ಇದರ ಗುರಿಯಾಗಿತ್ತು. ಮೊದಲ ಬಾರಿಗೆ 2011ರ ಜನವರಿ 25ರಂದು 'ರಾಷ್ಟ್ರೀಯ ಮತದಾರರ ದಿನ" ಆಚರಿಸಲಾಯಿತು. ಆನಂತರ ಪ್ರತಿ ವರ್ಷವೂ ಇದನ್ನು ನಡೆಸಿಕೊಂಡು ಬರಲಾಗುತ್ತಿದ್ದು, ಪ್ರಜೆಗಳಿಗೆ ಇರುವ ಮತ ಚಲಾವಣೆಯ ರಾಜಕೀಯ ಹಕ್ಕಿನ ಪ್ರಾಮುಖ್ಯದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಅದರಂತೆ, ಈ ಸಲ, ಅಂದರೆ, 2019ರ ಜನವರಿ 25ರಂದು ರಾಜ್ಯ, ಜಿಲ್ಲೆ ಮತ್ತು ಮತಗಟ್ಟೆಗಳ ಮಟ್ಟದಲ್ಲಿ 'ರಾಷ್ಟ್ರೀಯ ಮತದಾರರ ದಿನ'ವನ್ನು ಆಚರಿಸಲಾಗುತ್ತದೆ.

ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು, "ಯಾವುದೇ ಮತದಾರ ಮತದಾನದಿಂದ ಹೊರಗುಳಿಯಬಾರದು" (No Voter to be Left Behind) ಎಂಬುದನ್ನು ಈ ಸಲದ 'ರಾಷ್ಟ್ರೀಯ ಮತದಾರರ ದಿನ'ದ ವಿಷಯವನ್ನಾಗಿ ಆಯ್ಕೆ ಮಾಡಲಾಗಿದೆ. "ಲಿಂಗ, ವರ್ಗ, ಮತ (ಧರ್ಮ), ಜಾತಿ, ಉದ್ಯೋಗಗಳ ಭೇದವಿಲ್ಲದೆ 18 ವರ್ಷ ಪೂರೈಸಿರುವ ಪ್ರತಿಯೊಬ್ಬ ಪ್ರಜೆಗೂ ಸಮಾನತೆ ಮತ್ತು ಸಮ್ಮತಿಯನ್ನು ಪ್ರತಿನಿಧಿಸುವ ಮತ ಚಲಾವಣೆ ಹಕ್ಕು' ಕಲ್ಪಿಸುವುದು ಇದರ ಧ್ಯೇಯವಾಗಿದೆ. ಅದಕ್ಕಾಗಿ ಪ್ರಾಥಮಿಕ ಹಂತದಲ್ಲಿ ಅರಿವು ಮತ್ತು ಉತ್ತೇಜನ ನೀಡುವ ಮೂಲಕ ಮತದಾರರ ಪಟ್ಟಿಗೆ ಗರಿಷ್ಠ ಹೆಸರುಗಳು ನೋಂದಣಿಯಾಗುವಂತೆ ಮಾಡಬೇಕಾಗಿದೆ.

**'ರಾಷ್ಟ್ರೀಯ ಮತದಾರರ ದಿನ'ದ ಪ್ರಮುಖ ಚಟುವಟಿಕೆಗಳು:**

ಮತಗಟ್ಟೆ (ಬೂತ್), ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ 9ನೇ "ರಾಷ್ಟ್ರೀಯ ಮತದಾರರ ದಿನ'ವನ್ನು ಆಚರಿಸಲಾಗುತ್ತದೆ.

**ಬೂತ್ ಮಟ್ಟ:** ಮತಗಟ್ಟೆ ಮಟ್ಟದಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಆಯಾ ಮತಗಟ್ಟೆ ವ್ಯಾಪ್ತಿಯಲ್ಲಿ ಆ ದಿನದಂದು ನಡೆಯುವ ಸಾರ್ವಜನಿಕ ಸಮಾರಂಭದಲ್ಲಿ ಮತದಾರರ ಪಟ್ಟಿಗೆ ಹೊಸ ಹೆಸರುಗಳ ನೋಂದಣಿಯಾಗುವಂತೆ ನೋಡಿಕೊಳ್ಳುವರು. ಚುನಾವಣಾ ಆಯೋಗ ಸೂಚಿಸಿರುವ ಪ್ರಕಾರ, ಆ ದಿನದಂದು ಬಿಎಲ್ಒ ಗಳು ಸಾರ್ವಜನಿಕ ಸಮಾರಂಭದಲ್ಲಿ ಹೊಸ ಮತದಾರರಿಗೆ ಭಾವಚಿತ್ರವುಳ್ಳ ಚುನಾವಣಾ ಗುರುತು ಚೀಟಿ (ಎಪಿಕ್) ಜೊತೆ "ಮತದಾರನಾಗಲು ಹೆಮ್ಮೆ– ಮತ ಚಲಾವಣೆಗೆ ಸಿದ್ಧ" (Proud to be Voter-Ready to Vote) ಎಂಬ ಘೋಷವಾಕ್ಯವುಳ್ಳ ಆಯೋಗದ ಲಾಂಛನವಿರುವ ಬ್ಯಾಡ್ಜ್‌ಗಳನ್ನು ವಿತರಿಸಬೇಕು. ಜೊತೆಗೆ, ವಿದ್ಯುನ್ಮಾನ ಮತಯಂತ್ರ (ಇವಿಎಂ)/ ವಿವಿಪ್ಯಾಟ್ ಕುರಿತ ಆಯೋಗದ ಚಲನಚಿತ್ರಗಳನ್ನು ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸಬೇಕು. ಇದೇ ವೇಳೆ, ಮತದಾರರ ನೋಂದಣಿ ಮತ್ತಿತರ ಸಂಬಂಧಿಸಿದ ವಿಷಯಗಳ ಕುರಿತು ರಾಜ್ಯ ಅಥವಾ ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಲಾದ ಇತರ ಜಾಗೃತಿ ಚಲನಚಿತ್ರಗಳನ್ನೂ ಪ್ರದರ್ಶಿಸಬಹುದು. ಪ್ರತಿ ಮತಗಟ್ಟೆ ಮಟ್ಟದಲ್ಲಿ ಸಾರ್ವಜನಿಕ ಸಮಾರಂಭ ನಡೆಸಬೇಕಾದ ಜಾಗ ಹಾಗೂ ಸಾಗಣೆ ವ್ಯವಸ್ಥೆಯನ್ನು ಜಿಲ್ಲಾ ಚುನಾವಣಾ ಅಧಿಕಾರಿಗಳು ನಿರ್ವಹಿಸುವರು. ಪ್ರತಿ ಕ್ಷೇತ್ರದ ಇಆರ್ಒ/ ಎಇಆರ್ಒ ಗಳು ತಮ್ಮ ವ್ಯಾಪ್ತಿಯ ಸಾರ್ವಜನಿಕ ಸಮಾರಂಭಗಳಲ್ಲಿ ಪಾಲ್ಗೊಂಡು, ಹೊಸದಾಗಿ ನೋಂದಣಿಯಾದವರ ಸನ್ಮಾನ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ.

**ಜಿಲ್ಲಾ ಮಟ್ಟ:** ಈ ಹಂತದಲ್ಲಿ, ಜಿಲ್ಲಾ ಚುನಾವಣಾ ಅಧಿಕಾರಿಗಳು (ಡಿಇಒ) ಅವರು ಜಿಲ್ಲಾ ಕೇಂದ್ರದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ನಾಗರಿಕ ಒಕ್ಕೂಟಗಳು, ಯುವ ಸ್ವಯಂಸೇವಕರನ್ನು ಒಳಗೊಂಡ ಎನ್ಎಸ್ಎಸ್, ಎನ್‌ಸಿಸಿ, ಸ್ಕೌಟ್ಸ್ & ಗೈಡ್ಸ್, ನೆಹರು ಯುವ ಕೇಂದ್ರಗಳು, ಮಾಧ್ಯಮ ಇತ್ಯಾದಿಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಿದ್ದಾರೆ. ಬೂತ್ ಮಟ್ಟದಲ್ಲಿ ನಡೆಯುವಂತೆ ಇಲ್ಲೂ ಕೂಡ ಆಯ್ದ ಕೆಲವು ಹೊಸ ಮತದಾರರಿಗೆ ಬ್ಯಾಡ್ಜ್ ಮತ್ತು ಚುನಾವಣಾ ಗುರುತು ಚೀಟಿಗಳನ್ನು ನೀಡಲಾಗುವುದು. ಹಾಗೆಯೇ, ಮತದಾರರ ನೋಂದಣಿ ಮತ್ತಿತರ ಸಂಬಂಧಿಸಿದ ವಿಷಯಗಳ ಕುರಿತು ರಾಜ್ಯ ಅಥವಾ ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಲಾದ ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ಉತ್ತಮ ಪ್ರದರ್ಶನ ನೀಡುವ ಜಿಲ್ಲಾ ವ್ಯಾಪ್ತಿಯ ಇಎಲ್‌ಸಿ (ಚುನಾವಣಾ ಸಾಕ್ಷರತಾ ಕ್ಲಬ್) ಶಾಲೆಗಳು ಮತ್ತು ಇಎಲ್‌ಸಿ ಕಾಲೇಜುಗಳಿಗೆ ಸನ್ಮಾನ ಮಾಡಲಾಗುವುದು. ಇದೇ ವೇಳೆ, 'ಯುವ ಮತದಾರರ ಉತ್ಸವ'ದ ವಿಜೇತರಿಗೆ ಬಹುಮಾನಗಳನ್ನೂ ಪ್ರದಾನ ಮಾಡಲಾಗುವುದು.



**ರಾಜ್ಯ ಮಟ್ಟ:** ಮುಖ್ಯ ಚುನಾವಣಾಧಿಕಾರಿಯವರು (ಸಿಇಒ) ರಾಜ್ಯ ರಾಜಧಾನಿಯಲ್ಲಿ ನಾಗರಿಕ ಒಕ್ಕೂಟಗಳು, ಅಭಿಪ್ರಾಯ ನಿರೂಪಣಾ ಸಮೂಹಗಳು, ಯುವ ಸ್ವಯಂಸೇವಕ ಸಂಸ್ಥೆಗಳು, ರಾಜ್ಯಾಡಳಿತ, ಮಹಾನಗರ ಪಾಲಿಕೆ ಸದಸ್ಯರು, ಮಾಧ್ಯಮಗಳು ಮತ್ತಿತರರ ಸಹಭಾಗಿತ್ವದಲ್ಲಿ 'ರಾಷ್ಟ್ರೀಯ ಮತದಾರರ ದಿನಾಚರಣೆ' ಸಮಾರಂಭ ಏರ್ಪಡಿಸುವರು. ಹೊಸದಾಗಿ ಸೇರ್ಪಡೆಯಾದ ಆಯ್ದ ಮತದಾರರಿಗೆ ಬ್ಯಾಡ್ಜ್ ಮತ್ತು ಮತದಾರರ ಗುರುತು ಚೀಟಿಗಳನ್ನು ವಿತರಿಸಿ ಇವಿಎಂ/ ವಿವಿಪ್ಯಾಟ್ ಕುರಿತು ಸ್ಥಳೀಯ ಭಾಷೆಯಲ್ಲಿ ಸಿದ್ಧಪಡಿಸಿದ ಚಲನಚಿತ್ರಗಳನ್ನು ಪ್ರದರ್ಶಿಸಲು ವ್ಯವಸ್ಥೆ ಮಾಡುವರು.

**ಚುನಾವಣಾ ಸಾಕ್ಷರತಾ ಕ್ಲಬ್‌ಗಳು:**

ಕಳೆದ ಬಾರಿಯ 8ನೇ 'ರಾಷ್ಟ್ರೀಯ ಮತ ದಿನಾಚರಣೆ' ವೇಳೆ ಚುನಾವಣಾ ಸಾಕ್ಷರತಾ ಕ್ಲಬ್‌ಗಳಿಗೆ ಚಾಲನೆ ನೀಡಲಾಗಿತ್ತು. ಇವು ರಾಷ್ಟ್ರೀಯ ಮತ ದಿನಾಚರಣೆ ವೇಳೆ ಮಹತ್ವದ ಪಾತ್ರ ನಿರ್ವಹಿಸುತ್ತವೆ. ಹೊಸ ಮತದಾರರನ್ನು ಒಳಗೊಂಡ ಈ





downloaded from: www.kpscvaani.com



ಕ್ಲಬ್‌ಗಳು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ಸಂಪನ್ಮೂಲ ಪುಸ್ತಕದಲ್ಲಿ ನೀಡಲಾಗಿರುವ ಯಾವುದಾದರೊಂದು ಚಟುವಟಿಕೆಯನ್ನು ಆಯ್ದು 'ಯುವ ಮತದಾರರ ಉತ್ಸವ'ಗಳನ್ನು ಆಯೋಜಿಸಲಿವೆ. ಜೊತೆಗೆ, ಚುನಾವಣಾ ಪಾಠಶಾಲೆಗಳು (ಸಮುದಾಯಗಳು) ರಾಷ್ಟ್ರೀಯ ಮತ ದಿನಾಚರಣೆ ಅಂಗವಾಗಿ ತಮ್ಮ ಮತಗಟ್ಟೆ ವ್ಯಾಪ್ತಿಯಲ್ಲಿ ಸಂಪನ್ಮೂಲ ಪುಸ್ತಕದಲ್ಲಿ ಸೂಚಿಸಿರುವಂತೆ ಚಟುವಟಿಕೆಗಳನ್ನು ನಡೆಸಲಿವೆ.

**ಸೇವಾ ಮತದಾರರು:**

ರಾಷ್ಟ್ರೀಯ ಮತ ದಿನಾಚರಣೆಗೆ ಕೆಲವೇ ದಿನಗಳ ಮುಂಚೆ, ಅಂದರೆ, ಜನವರಿ 15ರಂದು ನಡೆಯಲಿರುವ 'ಸೇನಾ ದಿನ'ದ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡು ವಿಶೇಷ ಅರಿವು ಅಭಿಯಾನವನ್ನು ನಡೆಸಲಾಗುವುದು. ಎಲ್ಲಾ ದಂಡು ಪ್ರದೇಶಗಳ ವ್ಯಾಪ್ತಿಯ ಚಿತ್ರಮಂದಿರಗಳಲ್ಲಿ 'ಸೇವಾ ಮತದಾರ ಸಿನಿಮಾ'ವನ್ನು (ಸರ್ವೀಸ್ ವೋಟರ್ ಫಿಲ್ಮ್) ಪ್ರದರ್ಶಿಸಲಾಗುವುದು. ಸೇನಾ ಸಿಬ್ಬಂದಿಗೆ ನೋಂದಣಿ ಮತ್ತು ಮತ ಚಲಾವಣೆ ಪ್ರಕ್ರಿಯೆ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ವಿಶೇಷ ಸಿನಿಮಾ ಪ್ರದರ್ಶನಗಳನ್ನು ಹಮ್ಮಿಕೊಳ್ಳಲಾಗುವುದು. ಜೊತೆಗೆ, ರಾಷ್ಟ್ರೀಯ ಮತ ದಿನಾಚರಣೆ ವೇಳೆ ಸೇನಾ ಸಿಬ್ಬಂದಿಯನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲಾಗುವುದು.

**ಮಾಧ್ಯಮಗಳನ್ನು ತೊಡಗಿಸಿಕೊಳ್ಳುವಿಕೆ:**

ಮಾಧ್ಯಮಗಳ ಬೆಂಬಲದಿಂದ ಯುವಜನತೆಯಲ್ಲಿ ಮತ ಚಲಾವಣೆ ಮಹತ್ವದ ಬಗ್ಗೆ ಪರಿಣಾಮಕಾರಿಯಾಗಿ ಅರಿವು ಮೂಡಿಸಬಹುದು. ಇದಕ್ಕೆ ಅನುಗುಣವಾಗಿ, ಸಿಇಒ ಮತ್ತು ಡಿಇಒ ಗಳು ರೇಡಿಯೋ ಹಾಗೂ ದೂರದರ್ಶನದಲ್ಲಿ ಮತದಾರರ ಪ್ರಶ್ನೆಗಳಿಗೆ ಉತ್ತರಿಸುವಂತಹ ಫೋನ್-ಇನ್ ಕಾರ್ಯಕ್ರಮಗಳನ್ನು ಬಳಸಿಕೊಳ್ಳಬಹುದು. ಬೂತ್ ಮಟ್ಟದಲ್ಲಿ ಬಿಎಲ್‌ಒ ಗಳು ಸಮುದಾಯ ರೇಡಿಯೋ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಫೋನ್-ಇನ್ ಪ್ರಶ್ನೆಗಳಿಗೆ ಉತ್ತರಿಸಬಹುದು. 9ನೇ ರಾಷ್ಟ್ರೀಯ ಮತದಾರರ ದಿನಾಚರಣೆಯ ವಿಷಯವನ್ನು ಪ್ರಚುರಪಡಿಸಿ ಅರಿವು ಮೂಡಿಸಲು ಮುದ್ರಣ, ದೃಶ್ಯ-ಶ್ರವಣ (ಆಡಿಯೋ-ವಿಷುಯಲ್), ಹೊರಾಂಗಣ ಜಾಹೀರಾತು, ಎಫ್‌ಎಂ ರೇಡಿಯೋ, ಟಿ.ವಿ., ಎಸ್‌ಎಂಎಸ್, ಇ-ಮೇಲ್, ಸಾಮಾಜಿಕ ಮಾಧ್ಯಮಗಳು, ಸಾಂಸ್ಕೃತಿಕ ತಂಡಗಳು ಇವೆಲ್ಲದರ ನೆರವು ಪಡೆಯಲಾಗುವುದು. ಪೋಸ್ಟರ್ ಮತ್ತು ಬ್ಯಾನರ್‌ಗಳ ಮೂಲಕ ರಾಷ್ಟ್ರೀಯ ಮತ ದಿನಾಚರಣೆ ವಿಷಯಕ್ಕೆ ಸಂಬಂಧಪಟ್ಟ ಪೋಸ್ಟರ್ ಮತ್ತು ಬ್ಯಾನರ್‌ಗಳನ್ನು ಸಿಇಒ, ಡಿಇಒ, ಇಆರ್‌ಒ ಹಾಗೂ ವಿಎಫ್‌ಸಿ ಕಚೇರಿಗಳಲ್ಲಿ ಎದ್ದು ತೋರುವಂತೆ ಪ್ರದರ್ಶಿಸಲಾಗುವುದು. ಜನವರಿ 25ರಂದು ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಣೆಯನ್ನೂ ಮಾಡಲಾಗುವುದು.

**ಗಣರಾಜ್ಯ ದಿನೋತ್ಸವ ಸ್ತಬ್ಧಚಿತ್ರ:**

ಮುಂಬರುವ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಭಾರತದ ಚುನಾವಣಾ ಆಯೋಗವು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್ ಸಮಾರಂಭಕ್ಕಾಗಿ "ಯಾವುದೇ ಮತದಾರ ಮತದಾನದಿಂದ ಹೊರಗುಳಿಯಬಾರದು" (No Voter to be Left Behind) ಘೋಷವಾಕ್ಯ ಆಧರಿಸಿ ಸ್ತಬ್ಧಚಿತ್ರವನ್ನು ಸಿದ್ಧಪಡಿಸುತ್ತಿದೆ. ಇದನ್ನೇ ಅನುಸರಿಸಿ ರಾಜ್ಯ ಮಟ್ಟದಲ್ಲಿ ಮುಖ್ಯ ಚುನಾವಣಾಧಿಕಾರಿಗಳು ಸ್ತಬ್ಧಚಿತ್ರಗಳನ್ನು ಸಿದ್ಧಗೊಳಿಸಲು ಕ್ರಮ ಕೈಗೊಳ್ಳಬೇಕು.

ಒಟ್ಟಾರೆ, ಚುನಾವಣಾ ಆಯೋಗವು 9ನೇ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಹಲವಾರು ಚಟುವಟಿಕೆಗಳೊಂದಿಗೆ ನಡೆಸಲು ಮಹತ್ವದ ಕ್ರಮ ಕೈಗೊಂಡಿದೆ. ಮೊದಲೇ ಹೇಳಿದಂತೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಪಾತ್ರ ಏನು ಎಂಬ ಬಗ್ಗೆ ಯುವಪೀಳಿಗೆಯಲ್ಲಿ ಅರಿವು ಮೂಡಿಸುವುದು ಇದರ ಧ್ಯೇಯವಾಗಿದೆ. ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಸಿಕೊಂಡು ಮತ ಚಲಾವಣೆ ಮೂಲಕ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಪಾಲ್ಗೊಳ್ಳುವುದು ಚುನಾವಣಾ ಆಯೋಗದ ಪ್ರಯತ್ನಕ್ಕೆ ಸಲ್ಲುವ ಯಶಸ್ಸಾಗಲಿದೆ. ■



downloaded from: www.kpscvaani.com



# ರಾಮನ್ ಪರಿಣಾಮದ ಸಾಧನೆಯ ಸ್ಮರಣೆ

ವಿರೇಶ ಮಾಶೆಟ್ಟಿ ನಿಡಗುಂದಿ

ನಮ್ಮ ದೇಶದೆಲ್ಲಡೆ ಪ್ರತಿವರ್ಷ ಫೆಬ್ರವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸುತ್ತೇವೆ. 1928 ಫೆಬ್ರವರಿ 28 ರಂದು ರಾಮನ್ ಅವರು ಸಂಶೋಧಿಸಿದ 'ರಾಮನ್ ಪರಿಣಾಮ' ದ ನೆನಪಿಗಾಗಿ ಫೆಬ್ರವರಿ 28 ರಂದು ಆಚರಿಸಲು ಮಾನ್ಯ ಸರ್ಕಾರವು ನಿರ್ಧರಿಸಿದ್ದು, ಭಾರತದ ವಿಜ್ಞಾನ ಕ್ಷೇತ್ರದ ಚೈತನ್ಯಕ್ಕಾಗಿ. ಅಂದರೆ ನಾವು ಜನಿಸುವ ಮುಹೂರ್ತ ಶ್ರೇಷ್ಠವಾಗಬೇಕಿಲ್ಲ. ನಾವು ಮರೆಯಾಗುವ ದಿನ ಒಳ್ಳೆಯದೇ ಆಗಬೇಕಿಲ್ಲ. ನಡುವೆ ಇರುವ ನಮ್ಮ ಜೀವನದ ದಿನಗಳನ್ನು ಸಾಧನೆಯನ್ನಾಗಿ ಮಾಡುವಲ್ಲಿ ಛಲಗಾರಿಕೆ, ಕ್ರಿಯಾಶೀಲತೆ, ಶ್ರಮ ಹಾಗೂ ಆತ್ಮವಿಶ್ವಾಸವಿದ್ದಾಗ ಪ್ರತಿದಿನವನ್ನು ಶ್ರೇಷ್ಠ ದಿನವೆಂದು ಸಕಾರಾತ್ಮಕ ಮನೋಭಾವನೆ ರೂಢಿಸಿಕೊಳ್ಳಬೇಕು. ಆಗ ಜನನ-ಮರಣಗಳ ದಿನಗಳನ್ನು, ಮುಹೂರ್ತದ ಮೌಢ್ಯದಿಂದ ದೂರವಿಡಬಹುದು.

ಕೆಲವು ಮೇಧಾವಿಗಳು ಜನಿಸಿದ ದಿನದಂದು ಆಚರಣೆಯನ್ನು ಸ್ಮರಿಸಿದರೆ, ಇನ್ನು ಕೆಲವರ ಸಾಧನೆ ಗಳಿಗೆಯ ದಿನದ ಸ್ಮರಣೆಯ ಆಚರಣೆಯನ್ನು ಮಾಡುತ್ತೇವೆ. ಸರ್ ಸಿ.ವಿ.ರಾಮನ್ ಅವರು ಜನಿಸಿದ್ದು ನವೆಂಬರ್ ತಿಂಗಳು. ಆದರೆ ಅವರ ಸ್ಮರಣೆ ಫೆಬ್ರವರಿಯಲ್ಲಿ ಎಂಬುದು ಎಲ್ಲರಿಗೂ ಗೊತ್ತು. ಎಂತಹ ವಿಶೇಷವಲ್ಲಾ! ಈ ಸಾಧನೆ ಭಾರತಕ್ಕೆ ವೈಜ್ಞಾನಿಕದ ಸಂವತ್ಸರಕ್ಕೆ ಅಡಿಗಲ್ಲನ್ನು ಸ್ಥಾಪಿಸಿದಂತಹ ಗಳಿಗೆಯದು. ವಿಜ್ಞಾನ ಲೋಕದಲ್ಲಿ ಹೊಸ ಜಲಪಾತದ ಧಾರೆಯನ್ನು ತೋರಿಸಿ ಕೊಟ್ಟಿದ್ದಾರೆ. ಫೆಬ್ರವರಿ 28ರ ವಿಜ್ಞಾನ ದಿನಾಚರಣೆ'ಯಂದು ಅವರ ವಿಜ್ಞಾನ ಪ್ರಪಂಚದ ಬೆವರನ್ನು, ಸಂಶೋಧನೆಯನ್ನು ತಿಳಿಯುವುದು ಅವಶ್ಯವಲ್ಲವೆ?.

**ರಾಮನ್ನರ ಎಳೆತನದ ಪ್ರತಿಭೆ:** ಕಾವೇರಿ ನದಿಯ ದಡದಲ್ಲಿರುವ ಒಂದು ಪಟ್ಟಣ ತಿರುಚಿರಪಳ್ಳಿ, ಚಂದ್ರಶೇಖರ ಅಯ್ಯರ್ ಅಲ್ಲಿಯ ಒಂದು ಶಾಲೆಯಲ್ಲಿ ಅಧ್ಯಾಪಕರು. ಭೌತವಿಜ್ಞಾನ ಮತ್ತು ಗಣಿತದಲ್ಲಿ ಅವರಿಗೆ ಪಾಂಡಿತ್ಯವಿತ್ತು, ಸಂಗೀತದಲ್ಲಿ ವಿಶೇಷ ಪ್ರೀತಿಯಿತ್ತು, ಅವರ ಪತ್ನಿ ಪಾರ್ವತಿ ಅಮ್ಮಾಳ್. ಈ ಸದ್ಗುಣ ಸಂಪನ್ನ ದಂಪತಿಗಳಿಗೆ 1888 ರ ನವೆಂಬರ್ 7 ರಂದು ಎರಡನೆಯ ಗಂಡು ಮಗುವಾಯಿತು. ಈ ಮಗುವಿಗೆ 'ವೆಂಕಟರಾಮನ್' ಎಂದು ಹೆಸರಿಟ್ಟರು. ತಂದೆಯ ಹೆಸರನ್ನೂ ಸೇರಿಸಿದಾಗ ಮಗುವಿನ ಪೂರ್ಣ ಹೆಸರು ಚಂದ್ರಶೇಖರ ವೆಂಕಟರಾಮನ್ ಎಂದಾಯಿತು. ಸಂಗೀತ, ಸಂಸ್ಕೃತ ಮತ್ತು ವಿಜ್ಞಾನಗಳ ಉತ್ತಮ ವಾತಾವರಣದಲ್ಲಿ ರಾಮನ್ ಬೆಳೆದರು. ತರಗತಿಗಳಲ್ಲೆಲ್ಲಾ ಮೊದಲಿಗನಾಗಿ ತೇರ್ಗಡೆಯಾದರು. ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ ತರಗತಿಗೆ ಸೇರಿದರು. ಆ ವರ್ಷ ಬಿ.ಎ ಪರೀಕ್ಷೆಯಲ್ಲಿ ಪ್ರಥಮ ದರ್ಜೆ ಬಂದದ್ದು ಒಬ್ಬನೇ ಹುಡುಗನಿಗೆ. ಅವನೇ ಸಿ.ವಿ.ರಾಮನ್, ಅವರಿಗೆ ಚಿನ್ನದ ಪದಕವೂ ದೊರೆಯಿತು.

**ಅಧಿಕಾರಿ-ವಿಜ್ಞಾನಿಯಾಗಿ:** 'ಇಂಡಿಯನ್ ಆಡಿಟ್ ಅಂಡ್ ಅಕೌಂಟ್ಸ್ ಸರ್ವೀಸ್' ನಲ್ಲಿ ಆಯ್ಕೆಗೊಳ್ಳಲು ಪರೀಕ್ಷೆಗೆ ಕುಳಿತರು. ಈ ಪರೀಕ್ಷೆಗೆ ಕುಳಿತುಕೊಳ್ಳುವ ಹಿಂದಿನ ದಿನ ಎಂ.ಎ ಪರೀಕ್ಷೆಯ ಫಲಿತಾಂಶ ಬಂತು. ಮೊದಲ ದರ್ಜೆಯಲ್ಲಿ ಮೊದಲಿಗರಷ್ಟೆ ಅಲ್ಲ. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಅದುವರೆಗೆ ಯಾರೂ ಪಡೆಯದಿದ್ದಷ್ಟು ಅಂಕಗಳನ್ನು ಗಳಿಸಿ ರಾಮನ್ ದಾಖಲೆ ಸ್ಥಾಪಿಸಿದ್ದರು. ಮುಂದೆ 'ಇಂಡಿಯನ್ ಆಡಿಟ್ ಅಂಡ್ ಅಕೌಂಟ್ಸ್ ಸರ್ವೀಸ್ ಪರೀಕ್ಷೆಯಲ್ಲಿ ಅವರು ಮೊದಲ ಸ್ಥಾನ ಪಡೆದರು. 1907ರ ಮೇ 6 ರಂದು ರಾಮನ್ ಅವರ ವಿವಾಹ ನಡೆಯಿತು. 'ಲೋಕಸುಂದರಿ' ಅವರ ಪತ್ನಿಯಾದರು. ವಿಜ್ಞಾನ ಸಂಶೋಧಕರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಉದ್ದೇಶ ಸಾಧನೆಗೆ 'ಇಂಡಿಯನ್ ಸೈನ್ಸ್ ಕಾಂಗ್ರೆಸ್' ಸಂಸ್ಥೆಯು 1913ರಲ್ಲಿ ಅಧಿವೇಶನ ಜರಗಿದಾಗ ಶ್ರೀ ಅಶುತೋಷ್ ಮುಖರ್ಜಿ ಅಧಿವೇಶನದ ಅಧ್ಯಕ್ಷರಾಗಿದ್ದರು. ರಾಮನ್ ಭೌತವಿಜ್ಞಾನ ವಿಭಾಗದ ಅಧ್ಯಕ್ಷರಾದರು. ಅನೇಕ ವರ್ಷಗಳ ಕಾಲ ಅವರು ಆ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. 1929 ಮತ್ತು 1948ನೇ ವರ್ಷಗಳಲ್ಲಿ ರಾಮನ್ ಅವರು ವಾರ್ಷಿಕ ಅಧಿವೇಶನದ ಅಧ್ಯಕ್ಷರಾದರು.

**ಪ್ರೊಫೆಸರ್ ರಾಮನ್:** 1917ರಲ್ಲಿ 29ವರ್ಷ ವಯಸ್ಸಿನ ರಾಮನ್ ಪಾಲಿತ್ ಪೀಠದ ಪ್ರಾಧ್ಯಾಪಕರಾದರು. ಜೊತೆಯಲ್ಲಿಯೇ ಸಂಶೋಧನೆಗಳನ್ನು ಮುಂದುವರಿಸಿದರು.



1921ರಲ್ಲಿ ಲಂಡನಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿಶ್ವವಿದ್ಯಾಲಯಗಳ ಸಭೆ ಜರಗಿತು. ರಾಮನ್ನರು ಕಲ್ಕತ್ತಾ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಇಂಗ್ಲೆಂಡಿಗೆ ಹೋದರು. ಇದು ಅವರ ಮೊದಲ ವಿದೇಶ ಯಾತ್ರೆಯಾಗಿತ್ತು. ಸಮುದ್ರ ಮಾರ್ಗವಾಗಿ ಇಂಗ್ಲೆಂಡಿಗೆ ಹೋಗುವಾಗ ಮತ್ತು ಅಲ್ಲಿಂದ ಮರಳುವಾಗ ಬಿಡುವು ಸಿಕ್ಕಿದಾಗಲ್ಲೆಲ್ಲಾ ಅವರು ಹಡಗಿನ ಮೇಲ್ಮಟ್ಟದಲ್ಲಿ ಕುಳಿತುಕೊಂಡು ವಿಶಾಲ ಸಮುದ್ರದ ಸೌಂದರ್ಯವನ್ನು ಸವಿಯುತ್ತಿದ್ದರು. ಮೆಡಿಟರೇನಿಯನ್ ಸಮುದ್ರದ ಕಡುನೀಲ ಬಣ್ಣ ಅವರಲ್ಲಿ ಹೊಸ ವಿಚಾರ ತರಂಗಗಳನ್ನು ಎಬ್ಬಿಸಿತು. 'ಆಕಾಶದ ನೀಲ ಬಣ್ಣವೇ ಪ್ರತಿಫಲನಗೊಂಡು ಇದು ಉಂಟಾಯಿತೆ?, ಪ್ರತಿಫಲಿಸಿದ ಬೆಳಕಿಲ್ಲದಿದ್ದರೂ ನೀಲ ಬಣ್ಣ ಉಳಿಯುವುದೇಕೆ?, ಸಮುದ್ರದಲ್ಲಿ ದೊಡ್ಡ ದೊಡ್ಡ ತೆರೆಗಳು ಎದ್ದಾಗಲೂ ನೀಲ ಬಣ್ಣವೇ ಕಾಣುವುದಲ್ಲ?', ಹೀಗೆ ಯೋಚಿಸುತ್ತಿದ್ದಂತೆ ನೀರಿನ ಅಣುಗಳು ಸೂರ್ಯನ ಬೆಳಕನ್ನು ಚೆದರಿಸಿ ನೀಲ ಬಣ್ಣವನ್ನು ನೀಡಿರಬಹುದೆಂಬ ವಿಚಾರ ರಾಮನ್ನರಿಗೆ ಹೊಳೆಯಿತು. ಅದನ್ನೇ ಮನಸ್ಸಿನಲ್ಲಿ ಮತ್ತೆ ಮತೆ ಮೆಲುಕು ಹಾಕಿದರು. ಕಲ್ಕತ್ತೆಗೆ ಬಂದವರೇ ಪ್ರಯೋಗ ಮಗ್ನರಾದರು. ತಿಂಗಳೊಳಗಾಗಿ ಸಂಶೋಧನ ಲೇಖನವೊಂದನ್ನು ಬರೆದು ಲಂಡನ್ನಿನ 'ರಾಯಲ್ ಸೊಸೈಟಿ'ಗೆ 'ಬೆಳಕಿನ ಚೆದುರಿಕೆ'ಯ ಬಗ್ಗೆ ಒಂದು ದೀರ್ಘ ಲೇಖನವನ್ನು ಬರೆದು ಪ್ರಕಟಿಸಿದರು.

**ರಾಮನ್ ಪರಿಣಾಮ:** "ಏಕವರ್ಣೀಯ ಬೆಳಕನ್ನು ಪಾರದರ್ಶಕ ವಸ್ತುವಿನ ಮೂಲಕ ಹಾಯಿಸಿದಾಗ ಸಿಗುವ ಚೆದುರಿದ ಬೆಳಕನ್ನು ರಾಮನ್ನರು ಬಹಳ ಕಾಲ ಪರಿಶೀಲಿಸಿದರು. 1928ರ ಫೆಬ್ರವರಿ 28 ರಂದು ಹೀಗೆ ಹಾಸಿದ ಬೆಳಕಿನ ವರ್ಣರೇಖೆಯ ಎರಡೂ ಬದಿಗಳಲ್ಲಿ ಬಹಳ ಕ್ಷೀಣಪ್ರಭೆಯ ಹೊಸ ವರ್ಣರೇಖೆಗಳು ಕಂಡುಬಂದವು. ರಾಮನ್ನರು ವರ್ಷಗಟ್ಟಲೇ ನಡೆಸಿದ ಪರಿಶ್ರಮ ಫಲ ಬಿಟ್ಟಿತು. ಚೆದರಿಸಲ್ಪಡುವ ಬೆಳಕಿಗೆ ಒಂದೇ ಬಣ್ಣ, ಆದರೆ ಚೆದುರಿದ ಬೆಳಕು ಹಾಗಿಲ್ಲ ಎಂಬುದು ರಾಮನ್‌ರ ಪ್ರಯೋಗದಿಂದ ನಿಸರ್ಗದ ರಹಸ್ಯವೊಂದು ಹೊರಬಿದ್ದಿತ್ತು".

1928ರ ಮಾರ್ಚ್ 16 ರಂದು ವಿಜ್ಞಾನ ಚರಿತ್ರೆಯಲ್ಲಿ ಸ್ಮರಣೀಯ ದಿನ. ಅಂದು ಬೆಂಗಳೂರಿನ 'ಸೌತ್ ಇಂಡಿಯನ್ ಸೈನ್ಸ್ ಅಸೋಸಿಯೇಷನ್' ಮತ್ತು ಸೆಂಟ್ರಲ್ ಕಾಲೇಜಿನ ವಿಜ್ಞಾನ ಸಂಘ ಇವುಗಳ ಆಶ್ರಯದಲ್ಲಿ ಒಂದು ಸಭೆ ನಡೆಯಿತು. ರಾಮನ್ ಅವರೇ ಮುಖ್ಯ ಅತಿಥಿಯಾಗಿದ್ದರು. ಅಂದು ಅವರು ತಾವು ಕಂಡುಕೊಂಡ ವಿದ್ಯಮಾನವನ್ನು ಲೋಕಕ್ಕೆ ತಿಳಿಸಿದರು. ಸಂಶೋಧನೆಯಲ್ಲಿ ನೆರವಾದ ಕೆ.ಎಸ್.ಕೃಷ್ಣನ್ ಮತ್ತು ವೆಂಕಟೇಶ್ವರನ್ ಎಂಬ ತಮ್ಮ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ನೆನೆದರು. ಪ್ರಪಂಚದಾದ್ಯಂತ ವಿಜ್ಞಾನ ಸಂಶೋಧಕರ ಗಮನ ಸೆಳೆದ ಈ ವಿದ್ಯಮಾನವು 'ರಾಮನ್ ಪರಿಣಾಮ'ವೆಂದು ಹೆಸರಾಯಿತು. ಚೆದುರಿದ ಬೆಳಕಿನ ವರ್ಣರೇಖೆಗಳು 'ರಾಮನ್ ರೇಖೆ'ಗಳೆಂದೇ ಪ್ರಸಿದ್ಧವಾದುವು.

**ರಾಮನ್ ಸಂಶೋಧನ ಮಂದಿರದಲ್ಲಿ:** 1948ರಲ್ಲಿ ಈ ಶ್ರೇಷ್ಠ ವಿಜ್ಞಾನಿಯು 'ರಾಮನ್ ಸಂಶೋಧನ ಮಂದಿರ'ದಲ್ಲಿ ನಿರ್ದೇಶಕರಾಗಿ ಬದುಕಿನ ಇನ್ನೊಂದು ಹಂತವನ್ನು ಪ್ರಾರಂಭಿಸಿದರು. "ಧ್ವನಿ, ಬೆಳಕು, ಶಿಲೆ, ರತ್ನ, ಹಕ್ಕಿ, ಕೀಟ, ಚಿಟ್ಟೆ, ಚಿಪ್ಪು, ಮರ–ಹೂವು, ವಾತಾವರಣ ಹವೆ, ಧ್ವನಿ ಕೇಳಿಸುವಿಕೆ ಹೀಗೆ ಭೌತವಿಜ್ಞಾನ, ಭೂವಿಜ್ಞಾನ, ಜೀವವಿಜ್ಞಾನ, ಶರೀರವಿಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿ ಅವರು ಸಂಶೋಧನೆ ನಡೆಸುತ್ತಿದ್ದರು. ಇವುಗಳಲ್ಲೆಲ್ಲಾ ಅವರಿಗೆ ಅತಿ ಹೆಚ್ಚಿನ ಆಕರ್ಷಣೆ ಧ್ವನಿ ಮತ್ತು ಬಣ್ಣಗಳದ್ದೇ. ಅವುಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿಯುವುದೇ ಅವರ ಗೀಳು. ಅಧ್ಯಯನಕ್ಕಾಗಿ ವಿವಿಧ ವರ್ಣ ವಿನ್ಯಾಸಗಳ ಸೀರೆಗಳನ್ನು ಅವರು ಬಟ್ಟೆ ಅಂಗಡಿಗಳಿಗೆ ಹೋಗಿ ಸಂಗ್ರಹಿಸಿದ್ದುಂಟು. ಕಲ್ಲು, ಶಿಲೆ, ಅನರ್ಘ್ಯ ರತ್ನಗಳನ್ನು ಅವರು ಸಂಗ್ರಹಿಸಿದರು. ಮಿಂಚಿನಿಂದ ಕರಗಿದ ಮರಳು, ಜ್ವಾಲಾಮುಖಿ ಉಂಟಾದಾಗ ಲಾವಾಹರಿವನ್ನು ಸೂಚಿಸುವ ಶಿಲೆ, ಕೆಂಪು, ಪಚ್ಚೆ, ವಜ್ರ–ರಾಮನ್‌ರ ಅಮೂಲ್ಯ ಸಂಗ್ರಹದಲ್ಲಿರುವ ವಸ್ತುಗಳು ನೂರಾರು.

ಅತಿ ನೇರಳೆ ಬೆಳಕಿನಲ್ಲಿ ಬಣ್ಣ ಬಣ್ಣದ ಬೆಳಕನ್ನು ಹೊರಸುವ ಖನಿಜಗಳನ್ನೆಲ್ಲ ಕತ್ತಲು ಕೋಣೆಯಲ್ಲಿಟ್ಟು ಫಳಫಳನೆ ಮಿನುಗುವ ಪುಟ್ಟ ಲೋಕವನ್ನೇ ಅವರು ಬೇಕೆನಿಸಿದಾಗ ಸೃಷ್ಟಿಸುತ್ತಿದ್ದರು. ನೇರವಾಗಿ ನೋಡಿದರೆ ಬಣ್ಣವಲ್ಲ. ಓರೆಯಾಗಿ ನೋಡಿದರೆ ನೀಲ, ಹಸಿರು, ಹಳದಿ ಬಣ್ಣಗಳ ನೋಟ. ಹೀಗೆ ಕಾಣುವ ಹರಳಿನ ತೆಳುಹಾಳೆಗಳನ್ನು ತಯಾರಿಸಿ ಅವುಗಳ ಒಳರಚನೆಯನ್ನು ತಿಳಿಯಲು ಅವರು ಪ್ರಯತ್ನಿಸುತ್ತಿದ್ದರು. ವಜ್ರಗಳ ಆಳವಾದ ಅಧ್ಯಯನದಿಂದ ಅವುಗಳ ವಿಶಿಷ್ಟ ಗುಣಗಳನ್ನು ವಿವರಿಸಿದರು. ಒಮ್ಮೆ ವಜ್ರ ಮತ್ತು ಸ್ಫಟಿಕಗಳನ್ನು ಕೊಳ್ಳಲು ಪ್ಯಾರಿಸ್ ನಗರದಲ್ಲಿ ತಿರುಗಾಡುತ್ತಿದ್ದಾಗ ಒಂದೆಡೆ ಗಾಜಿನ ಸೀಸೆಯಲ್ಲಿಟ್ಟ ನೀಲ ರೆಕ್ಕೆಯ ಎರಡು ಸುಂದರ ಚಿಟ್ಟೆಗಳನ್ನು ನೋಡಿದರು. ಅದರ ಸೊಬಗಿಗೆ ಮರುಳಾಗಿ ಅವುಗಳನ್ನು ಕೊಂಡುಕೊಂಡರು. ಅವುಗಳ ಜೊತೆಗಿರಲೆಂದು ಮುಂದೆ ಸಾವಿರಾರು ಚಿಟ್ಟೆಗಳನ್ನು ಸಂಗ್ರಹಿಸಿದರು. ಹೂವುಗಳ ಬಣ್ಣಕ್ಕೆ ಮನಸೋತ ರಾಮನ್ ಅವರು ಅವುಗಳನ್ನು ತುಂಬಾ ಪ್ರೀತಿಸುತ್ತಿದ್ದರು. ತಾವೇ ಅನೇಕ ಹೂಗಿಡಗಳನ್ನು ಬೆಳೆಸಿದರಲ್ಲದೆ ಪುಷ್ಪ ಪ್ರದರ್ಶನಗಳಿಗೆ ಹೋಗಿ ವಿಶೇಷವಾದ ಒಂದೊಂದು ಹೂವನ್ನು ಪರೀಕ್ಷಿಸುತ್ತಿದ್ದರು.

**ರಾಮನ್ನರಿಗೆ ಸಂದ ಗೌರವಗಳು:** ಗೌರವ, ಪದವಿಗಳು ರಾಮನ್ನರನ್ನು ಅರಸಿ ಬಂದುವು. ಅಮೆರಿಕದ ಆಪ್ಟಿಕಲ್ ಸೊಸೈಟಿಯ ಸದಸ್ಯತ್ವ, ಫ್ರಾಂಕ್ಲಿನ್ ಇನ್ಸಿಟಿಟ್ಯೂಟಿನ ಫ್ರಾಂಕ್ಲಿನ್ ಪದಕ, ಭಾರತದ ರಾಷ್ಟ್ರೀಯ ಪ್ರಾಧ್ಯಾಪಕತ್ವ, ಸೋವಿಯತ್ ರಷ್ಯದ ಲೆನಿನ್ ಪ್ರಶಸ್ತಿ, ಪೋಪರಿಂದ ನೀಡಲ್ಪಟ್ಟ 'ಪಾಂಟಿಫಿಕಲ್ ಅಕಾಡಮಿ ಆಫ್ ಸೈನ್ಸ್'ನ ಸದಸ್ಯತ್ವ, ಭಾರತದಲ್ಲಿ ಭಾರತೀಯರಿಗೆ ಸಲ್ಲಬಹುದಾದ ಬಹು ದೊಡ್ಡ ಗೌರವ 'ಭಾರತ ರತ್ನ' ಪ್ರಶಸ್ತಿ 1954ರಲ್ಲಿ ಸಿಕ್ಕಿತು. ಹಾಗೂ ನೋಬೆಲ್ ಪ್ರಶಸ್ತಿ, ಹೀಗೆ ವರ್ಷವರ್ಷವೂ ಗೌರವಗಳ ಸುರಿಮಳೆಯೇ ಅವರಿಗೆ ಸಂದವು.

**ಸ್ಮರಣೆ ಅಮರ:** ಜೀವನವಿಡೀ ಸತ್ಯಾನ್ವೇಷಕರಾಗಿದ್ದ ರಾಮನ್ 1970 ರ ನವೆಂಬರ್ 21ರಂದು ತೀರಿಕೊಂಡರು. ರಾಮನ್ನರು ಬಾಹ್ಯ ಪ್ರೇರಣೆ, ಪ್ರೋತ್ಸಾಹಗಳಿಲ್ಲದೆ ಬಾಲ್ಯದಲ್ಲೇ ವಿಜ್ಞಾನ ಕ್ಷೇತ್ರವನ್ನು ಪ್ರವೇಶಿಸಿದ್ದರು. ಬೆಳಕು, ಧ್ವನಿಗಳ ರಹಸ್ಯಗಳಿಂದ ವಿಶೇಷವಾಗಿ ಆಕರ್ಷಿತರಾಗಿ ವಿಜ್ಞಾನ ಪ್ರಪಂಚದಲ್ಲಿ ಮುನ್ನೆಡೆದರು. ವಿಜ್ಞಾನ ಕ್ಷೇತ್ರದಲ್ಲಿ ತಮ್ಮ ಸಾಧನೆ, ಸ್ವಾಭಿಮಾನಗಳಿಂದ ಭಾರತಕ್ಕೆ ಸ್ಥಾನ ಗಳಿಸಿದರು. ವಿಜ್ಞಾನ ಸಂಸ್ಥೆಗಳನ್ನು ಕಟ್ಟಿ, ವಿಜ್ಞಾನ ಪತ್ರಿಕೆಗಳನ್ನು ಪ್ರಕಟಿಸಿ ಯುವ ವಿಜ್ಞಾನಿಗಳನ್ನು ಪ್ರೋತ್ಸಾಹಿಸಿ ಭಾರತದಲ್ಲಿ ವಿಜ್ಞಾನ ಪರಂಪರೆಗೆ ತಳಹದಿ ಹಾಕಿದ ರಾಮನ್ ಅವರು 'ಭಾರತೀಯ ವಿಜ್ಞಾನ ಪಿತಾಮಹ'ರಾದರು.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com